2988

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಜಡೆಯ ಶಿವಯೋಗೀಶ ಗ್ರಂಥಮಾಲಾ ಪುಷ್ಪ ೯

ಸಂಗೀತ ನಾಟಕ

ಮಾಯಾ ಗರ್ವಭಂಗ

...ಲೇಖಕರು ಮತ್ತು ಪ್ರಕಾಶಕರು:
...ಸ್ಪತಿ" ಗಂಗಾಧರ ಶಿವಾಚಾರ್ಯ
...ಹಾಸ್ವಾಮಿಗಳವರು,
...ಯ ಹಿರೇಮಠ, ಮೊರಬ.
...ವಿಶ್ವಾರಾಧ್ಯ ಸೇವಾಶ್ರಮ ಸಂಸ್ಥಾಪಕರು,
ಬೈಲವದ್ಗಿರಿ.

NR,91
33J1S

೧೯೫೧. ಬೆಲೆ: ೧—೮—೦

NR,91 1047
33J1S
Shivacharya, Gangadhar
Maya garvabhanga.

NR, 91
33J1S

1047

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

NR, 2411
33J1S

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. 1047

॥ ಶ್ರೀ ಶಿವಾಭ್ಯಾಂನಮಃ ॥

ನಾಟಕ ಗ್ರಂಥವಿದು

ಶ್ರೀಮಂತ
ಮಹಾಗುರುಭಕ್ತಾವತಂಸ
ಜಾಲಿ
ದೊಡ್ಡ ಜಂಬಣ್ಣ
ಸೌ॥ ಚನ್ನಮ್ಮತಾಯಿ
ಹೊಸಪೇಟೆ.

ಶ್ರೀಮಂತ
ಧರ್ಮವೀರ ಯಜಮಾನ
ರಾಜಾಪುರ
ಸಿದ್ಧಪ್ಪ
ಸೌ॥ ವೀರಮ್ಮತಾಯಿ
ಕಾತ್ರಿಕ:ಬಾಳು.

ಆದರ್ಶ ಉಭಯ ದಂಪತಿಗಳ

ಸತ್ಕಾರ್ಯ ಸ್ಮಾರಕವಾಗಿದೆ.

ಪ್ರಕಾಶಕರು :
" ಶ್ರೀ ಬಾಲಬೃಹಸ್ಪತಿ "
ಗಂಗಾಧರ ಶಿವಾಚಾರ್ಯ
ಮಹಾಸ್ವಾಮಿಗಳವರು,
ಜಡೆಯ ಹಿರೇಮಠ, ಮೊರಬ.

ಪ್ರಥಮ ಆವೃತ್ತಿ, ಪ್ರತಿ ೧,೦೦೦

ಇಸ್ವಿ ೧೯೫೧

ಮುದ್ರಕರು :
ಎಮ್. ಜಿ. ಹೆಗಡಾಳ,
ಇವರಿಂದಾ
ಆನಂದ ಪ್ರಿಂಟಿಂಗ ಪ್ರೆಸ್,
ದುರ್ಗದಬೈಲ, ಹುಬ್ಬಳ್ಳಿ
ಯಲ್ಲಿ ಮುದ್ರಿತವಾದುದು

ಭೂ ಮಿ ಕೆ

ಶ್ರೀ ಮದುಜ್ಜಯಿನೀ ಮಹಾಗುರು ಮರುಳಸಿದ್ಧೇಶ್ವರನು ವೀರಶೈವ ಧರ್ಮಕ್ಷೇತ್ರದಲ್ಲಿ ಅತ್ಯಂತ ಪ್ರಮುಖನಾದ ಐತಿಹಾಸಿಕ ಸುಪ್ರಸಿದ್ಧ ವ್ಯಕ್ತಿಯಾಗಿರುವನು. ಕೆಲವು ಪ್ರಾಚೀನ ಕವಿಗಳು ಈತನನ್ನು ಕುರಿತು ಷಟ್ಪದಿ, ಸಾಂಗತ್ಯ ಮೊದಲಾದ ಶೈಲಿಗಳಲ್ಲಿ ಕಾವ್ಯಗಳನ್ನು ಕಟ್ಟಿ ಹಾಡಿದ್ದಾರೆ. ಹಲವು ವೀರಶೈವ ಕವಿಗಳು ಬಹುಭಕ್ತಿಪೂರ್ವಕ ಸ್ಮರಿಸಿದ್ದಾರೆ. ಆಯುರ್ವೇದ ಶಾಸ್ತ್ರಜ್ಞರ ಮಾಲಿಕೆಯಲ್ಲಿ ಮರುಳಸಿದ್ಧ, ರೇವಣಸಿದ್ಧರ ಹೆಸರುಗಳು ಇರುವವು. ಜಗನ್ಮಾತನಾದ ಈ ಮಹಾತ್ಮನು ಲೋಕಕಂಟಕಳಾದ ಕೊಲ್ಹಾಪುರ ಮಾಯಾದೇವಿಯ ಗರ್ವವನ್ನು ಭಂಗಿಸಿದ ವಿಷಯವನ್ನು ಅನೇಕ ಮಹಾಜನಗಳ ಬಿನ್ನಹದ ಮೇರೆಗೆ ನಾಟಕರೂಪದಿಂದ ಯಥಾಶಕ್ತಿ ಬರೆದಿರುವದಾಗಿದೆ. ಇದರೊಳಗೆ ಹಲವು ಸಂಗತಿಗಳನ್ನು ರಚನೆಗೋಸುಗ ಹೊಸದಾಗಿ ಸೇರ್ಪಡಿಸಿರುವದು. ಕನ್ನಡ ನಾಡಿನ ನಾಟ್ಯರಂಗದ ಸದಭಿಮಾನಿಗಳು ಮತ್ತು ಗುರುಭಕ್ತ ಶಿರೋಮಣಿಗಳು ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸುವರೆಂದು ನಂಬಿರುವೆವು. ಕ್ರಾಂತಿಕಾರಕನಾಗಿರುವ ಮಹಾನುಭಾವ ಮರುಳಸಿದ್ಧನ ಸ್ವಾರಸ್ಯಮಯವಾದ ಸಮಗ್ರ ಇತಿಹಾಸವನ್ನು ಮನನ ಮಾಡಬೇಕೆನ್ನುವವರು "ಮರುಳಸಿದ್ಧಾಂಕವನ್ನು" ತಪ್ಪದೇ ತರಿಸಿ ಅವಶ್ಯವಾಗಿ ಓದಬೇಕು.

ಮರುಳಸಿದ್ಧಾಂಕದ ವಿಳಾಸ:—
ಕಾರ್ಯವಾಹಕರು,
ಶ್ರೀಶೈಲ ಜಗದ್ಗುರು ಸೂರ್ಯಸಿಂಹಾಸನಮಠ,
ಪೋಸ್ಟ : ಗುಂತಕಲ್ಲ.
ಜಿಲ್ಹಾ : ಅನಂತಪುರ.

ವಾಙ್ಮಯ ಸೇವಾಭಿಲಾಷಿಗಳು,
ಶ್ರೀ ಬಾಲಬೃಹಸ್ಪತಿ ಗಂಗಾಧರ ಶಿವಾಚಾರ್ಯ
ಮಹಾಸ್ವಾಮಿಗಳವರು,
ಮೊರಬ, ಜಡೆಯ ಬೃಹನ್ಮಠ.
ಶ್ರೀ ಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮ
ಸಂಸ್ಥಾಪಕರವರು, ಬೈಲವದ್ಗಿರಿ.

ಪುಷ್ಯ ಶುದ್ಧ
ಪೂರ್ಣಿಮಾ
ವಿರೋಧಿ ಸಂ।
ಶಾ. ಶಕೆ ೧೮೭೧.

ಸೂಚನೆ

ಈ ನಾಟಕವನ್ನು ನಾಟ್ಯರಂಗಕ್ಕೆ ಇಳಿಸುವದಕ್ಕಾಗಲಿ, ಭಾಷಾಂತರಿಸುವದಕ್ಕಾಗಲಿ, ಚಲಚ್ಚಿತ್ರಕ್ಕೆ ಇಳಿಸುವದಕ್ಕಾಗಲಿ ಲೇಖಕರ ಅನುಮತಿ ಅತ್ಯಾವಶ್ಯಕವಾಗಿರುವದು.

ಇದರ ಸರ್ವಸ್ವಾಮಿತ್ವವು ಲೇಖಕ ಶ್ರೀಗಳವರ
ಸ್ವಾಧೀನದಲ್ಲಿದೆ.

ಪ್ರಥಮಾಂಕ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸಂಗೀತ

ಮಾಯಾ ಗರ್ವಭಂಗ

ಮಂಗಲಾಚರಣ

॥ ರಾಗಭೂಪ ರೂಪಕತಾಪು ॥

ಗುರು ಶಂಭೋ ಪರಿಪಾಲಯ । ಪರತರ ಹರ । ಗಣೇಶಪುರಧರ । ವರಕರುಣಾ । ಕರ ಮದನ-ಮದ ಹರಣ । ತ್ರಿಪುರದಹನ । ಶರಣ ತರಣ । ಗಂಗಾಧರ ನುತ-ಚರಣ ।೧॥

ಪ್ರಥಮಾಂಕ

೧ನೇ ಪ್ರವೇಶ

ಸ್ಥಳ— ಅರಣ್ಯ-ಶಿವಾಶ್ರಮ

(ಎಲ್ಲೆಲ್ಲಿಯೂ ಶಾಂತಿಯು. ಜನರು ಸ್ವಕಾರ್ಯದಲ್ಲಿ ಮಗ್ನರಾಗಿರುವರು ಸದ್ದಿಲ್ಲದೆ ನೂರಾರು ಸೈನಿಕರು ಖಡ್ಗಪಾಣಿಗಳಾಗಿ ಪ್ರವೇಶಿಸುವರು.)

ಸೇನಾಪತಿ— ಸೈನಿಕರೇ! ಇದೇ ಗುಡಿಸಲು. ಹೂಂ ಒಳನುಗ್ಗಿರಿ.

ಸೈನಿಕರು— ಹಿಡಿಯಿರಿ ! ಹೊಡೆಯಿರಿ ! ಕಡಿಯಿರಿ ! ಬಡಿಯಿರಿ ! ಇರಿಯಿರಿ ! ತಿವಿಯಿರಿ ! (ಒಳನುಗ್ಗುವರು)

ಆಶ್ರಮವಾಸಿಗಳು— ಘಾತವಾಯಿತು ! ಘಾತವಾಯಿತು !! ಬಂದರು ! ಬಂದರು ! (ಸಿಕ್ಕಸಿಕ್ಕತ್ತ ಚದರುವರು)

ಸೇನಾಪತಿ— ಕುಹಕರು ದಿಕ್ಕೆಟ್ಟು ಓಡಿಹೋದರು. ಸೈನಿಕರೇ, ಗುಡಿಸಲಿಗೆ ಬೇಕಿ ಹಚ್ಚಿರಿ. ನಿರ್ನಾಮ ಮಾಡಿರಿ (ಕೊಳ್ಳಿಕೊಡುವರು)

(೫ ವರುಷದ ಮಗುವನ್ನು ಎತ್ತಿಕೊಂಡು ನಾಲ್ವ ಶಿವಭಕ್ತರು ಕಾಡಿನಲ್ಲಿ ವೇಗದಿಂದ ಬರುತ್ತಿದ್ದಾರೆ)

ನೀಲಕಂಠ— ಪುಂಡರ ಕೈಯಿಂದ ತಪ್ಪಿಸಿ ಓಡಿ ಓಡಿ ಬರಬೇಕಾದರೆ ಹದಿನೆಂಟು ಜನ್ಮದ ಬುದ್ಧಿ ಭೆಟ್ಟಿಯಾಯಿತು ಅಯ್ಯೋ ಮಹಾದೇವಾ ! ಶಿವ ಶಿವಾ !!

ರುದ್ರ— ಈ ಕ್ಷಣದಲ್ಲಿ ಗುರುಪುತ್ರನನ್ನು ಸುರಕ್ಷಿತವಿರುವ ಸ್ಥಾನಕ್ಕೆ ಕರೆದೊಯ್ಯಬೇಕು ! ಎಲ್ಲಿಗೆ ಹೋಗುವದು ? (ಯೋಚಿಸುವನು)

ಶಿವದೇವ— ಶಿವಕ್ಷೇತ್ರವೆಂದು ಪ್ರಸಿದ್ಧವಾಗಿರುವ ಪರಳಿಗೆ ಹೋಗುವದು ಲೇಸು ! ಅಲ್ಲಿ ವೀರಶೈವರು ಬಹಳವಾಗಿರುವರು. ಮತ್ತು ಬಲಿಷ್ಠರಾಗಿರುವರು. ಈಗಲೆ ಗುರುಕುಮಾರನನ್ನು ಕರೆದುಕೊಂಡು ನೀವು ಅತ್ತ ಸಾಗಿರಿ.

ಉಳಿದವರು— (ಸಂತೋಷದಿಂದ) ಸರಿಯಾದ ಸ್ಥಳ ! ಸರಿಯಾದ ಸ್ಥಳ !!

ಶಿವದೇವ— ನಾನು ಕಾಲಿನ ಗಾಯಕ್ಕೆ ಮದ್ದು ಸರಿಪಡಿಸಿ ಕಟ್ಟಿಕೊಂಡು ನಿಮ್ಮ ಹಿಂದೆಯೆ ಬಂದು ಬಿಡುವೆನು. ಹೂಂ ನಡೆಯಿರಿ. ದಾರಿಯಲ್ಲಿ ಗೂಢಚಾರರು ಕಲೆಬೀಳಬಹುದು ! ಜೋಕೆ ! ಮೈತುಂಬ ಕಣ್ಣಿರಲಿ !! ತಪ್ಪಿದರೆ ಅನರ್ಥವಾದೀತು !

ಎಲ್ಲರು— ಆ ಚಿಂತೆಯನ್ನು ಬಿಟ್ಟುಬಿಡು ! ಶಿವದೇವ !! ನೀನಿಲ್ಲಿ ತಡ ಮಾಡದೆ ಬಂದು ಬಿಡು !! ಕಂಡೆಯಾ !!

ಶಿವದೇವ— ಹಾಗೆ ಆಗಲಿ ವಿಲಂಬಿಸುವದಿಲ್ಲ. (ಹೋಗುವರು) (ಸ್ವಗತ) ಇನ್ನೇನು! ಜೀವಾಳವು ಉಳಿದಂತಾಯಿತು. ದೇವಾ! ನಿನ್ನ ಲೀಲೆಯು ಅಗಾಧವಾದುದು. (ಸುತ್ತ ಮುತ್ತ ನೋಡಿ) ಆ ಚಾಂಡಾಲರು ನಮ್ಮನ್ನು ಕಂಡು ಬೆನ್ನು ಹತ್ತಿರಲಿಕ್ಕಿಲ್ಲವಷ್ಟೆ! (ಸೈನಿಕರು ಬಂದೇ ಬಿಡುವರು)

ಸೈನಿಕರು— ಎಲೋ ನೀಚಾ! ಎಲ್ಲಿ ಮುಚ್ಚಿಕ್ಕಿರುವೆ! ಹೇಳು ನಿಮ್ಮ ಗುರುಪುತ್ರನನ್ನು!

ಶಿವದೇವ— ತಿಳಿಯದು! ನಾನೆ ಊ ಗಾಬರಿಪಟ್ಟು ಓಡಿಬಂದೆ.

ಸೈನಿಕ— ಸುಳ್ಳು ಬೊಗಳುವಿಯಾ! ಕಳ್ಳಾ! ನಿಜಹೇಳು. ನಿನ್ನ ಸಂಗಡ ಓಡಿ ಬಂದವರನ್ನು ಎಲ್ಲಿ ಕಳಿಸಿರುವಿ! ನಿಜಹೇಳು! ಹೇಳದಿದ್ದರೆ ರುಂಡವು ಮುಂಡದಿಂದ ಬೇರೆಯಾಯಿತೆಂದೇ ತಿಳಿ! (ಕತ್ತಿತೋರಿಸಿ ಝಳಪಿಸುವನು)

ಶಿವದೇವ— ಮಹಾ ಗುರುವಿನ ಸೇವೆಯಲ್ಲಿ ಪ್ರಾಣ ಹರಣವಾದರೆ ಮತ್ತೆ ಒಳ್ಳೇದು!

ಸೈನಿಕ— ಸತ್ಯವಾಗಿ ಗೊತ್ತಿಲ್ಲವೆ? ನಿನಗೆ!

ಶಿವದೇವ— ಗೊತ್ತಾದರೂ ಬಿಚ್ಚಲಾರೆನು

ಸೈನಿಕ— ಹಾಗಾದರೆ ಇಗೋ ಈ ಕತ್ತಿಗೆ ಬಲಿಯಾಗು ಪಶುವೇ! (ಇರಿಯುವನು)

ಶಿವದೇವ— ಹಾ ಶಂಭೋ! ಸದ್ಗುರೋ! (ಎಂದು ನೆಲಕ್ಕೆ ಬಿದ್ದು ಸಾಯುವನು)

———

೨ನೇ ಪ್ರವೇಶ

(ಪರಳಿಯ ಶ್ರೀ ವೈದ್ಯೇಶ್ವರ ಲಿಂಗಸನ್ನಿಧಿ)
೧೨ ವರ್ಷದ ಮರುಳಸಿದ್ಧರು ಪ್ರಾರ್ಥಿಸುತ್ತಿದ್ದಾರೆ.

॥ಪದ॥ ಕಮಲಹೈ ಮೋರೇ ಸಾಮು ನೇ ಎಂಬಂತೆ

ಶರಣು ಹೇ ದೀನೋತ್ತಾರಣ । ಶರಣು ಹೇ ಭಕ್ತಾವಾಸ ॥
ಮನಸಿಜಹರ ಗಿರಿವಿಹಾರ ಹರ ಕಾಲಿಕಾನಾಥ ॥
ತ್ರಿಪುರದಹನ ಕಿಂಕರಶಂಕರ ಪರಮಗತಿಯ ತೋರೊ ॥
ನಿನ್ನ ನೆನೆವ ಮನವ ಮದೀಶ । ಈಯೈ ಶ್ರೀಕರನಾಮ ॥
ಗಳಿಲನೆ ಸದ್ಧರ್ಮಪೀಠೋದ್ಧಾರವನು ಗೈಯ್ಯೊ ಈ ದೇವನೆ ॥೧॥

(ಎಂದು ಭಕ್ತಿಪರವಶರಾಗುವರು. ಅನಂತರ ಎಚ್ಚತ್ತು)

ಕೆನ್ನೀರನ್ನು ಸುರಿಸುವದರಲ್ಲಿ ಸಾತ್ವಿಕರು ಕಾಲವ ಕಳೆಯಲಾಗದೆಂದು ಪೀಠವನ್ನು ಅಗಲಿ, ಘೋರಾರಣ್ಯದ ಪರ್ಣಶಾಲೆಯಲ್ಲಿ ಇದ್ದರೂ ಅಧಮ ವೀರಸೇನನು ಅಲ್ಲಿಗೂ ದಾಳಿ ಇಡಬೇಕೇ? ಲಿಂಗದೇವಾ! ನಿನ್ನ ಅಪ್ಪಣೆಯಂತೆ ಭೂಲೋಕದಲ್ಲಿ ವೀರಶೈವ ಧರ್ಮ ಬೀಜವ ಬಿತ್ತಿ ಬೆಳೆಯಿಸಿದ ದಾರುಕರ ಮಹೋಜ್ವಲ ಗುರು ಪರಂಪರೆಯು ದಿಕ್ಕುಗಾಣದೆ ಬಿಕ್ಕಿ ಬಿಕ್ಕಿ ಅತ್ತು ಬಿಕ್ಕೆ ಬೇಡಿ ಅಲೆಯುವಂತಾಯಿತೇ? ಓ ಗಿರಿಜಾರಮಣನೆ ನೀನು ದಯಾಮಯನಲ್ಲವೆ! ಭಕ್ತರ ಬಂಧುವಲ್ಲವೆ! ನೆರೆ ನಂಬಿ ಬಂದಿರುವೆನು. ಹನ್ನೆರಡು ವರ್ಷಗಳು ಕಳೆದರೂ ನಿನಗೆ ಇನ್ನು ದಯೆಬಾರದೆ! ಉಜ್ಜಯಿನಿಯ ಸದ್ಧರ್ಮ ಸಿಂಹಾಸನವನ್ನು ಉದ್ಧರಿಸಿ ಶಿವಧರ್ಮಸೇವೆಯ ಮಾಡುವ ಸುಯೋಗವನ್ನು ಕರುಣಿಸಯ್ಯ!! ಗುರುದೇವನು ನನ್ನ ಮೇಲೆ ಇರಿಸಿದ ವಿಶ್ವಾಸಕ್ಕೆ ಕೊರತೆ ಬರದಂತೆ ಅನುಗ್ರಹಿಸು!!!

॥ಪದ॥ ರಾಗ ಚಾಂದ–ತ್ರಿತಾಳ

ಪೊರೆ ಸದಾ ಶಿವದೇವ।
ಕರುಣಾ ಭರಣ। ಶರಣಾಗತಪಾಲಕನೇ ॥ಪ॥

ಪೊರೆ ಸದಾಶಿವ ಶಾಂತಿಸದನ ।
ಭ್ರಾಂತಿಹರಣ । ಶಾಂತನುತ ಚರಣ ॥೧॥

॥ ಕಂದ ॥

ಪೊರೆ ಪರಮಾತ್ಮನೆ ಪೂತನೆ ॥
ಪರಿಹರಿಸು ಮದಿಷ್ಟಕೆತ್ತು ಕಷ್ಟವನೀಗಳ್ ।
ನಿರುಪಮ ಲೀಲಾಜಾಲನೆ ॥
ಶರಣು ಶಿವಾಧವನೆ ಭುವನಪಾಲನೆ ಶಿವನೆ ॥೧॥

(ಧ್ಯಾನಸ್ಥನಾಗುವನು)

ಆಕಾಶವಾಣಿ

ಮಗುವೇ ಮರುಳಸಿದ್ಧಾ ನಿನ್ನ ಬಯಕೆ ತಿಳಿಯಿತು. ಮರುಗದಿರು! ಬೇಗನೆ ಸಿದ್ಧಗಿರಿಯಲ್ಲಿರುವ ರೇವಣಸಿದ್ಧರ ಸನ್ನಿಧಾನವನ್ನು ಹೊಂದು ! ಸರ್ವ ಇಚ್ಛೆಗಳು ನೆರವೇರುವವು.

ಮರುಳಸಿದ್ಧ— ಆಹಾ !! ಕಡಲ ಬಲ್ದೆರೆಯ ಒಡಿತದಿಂದ ಒಟ್ಟೆ ತಪ್ಪಿ ತತ್ತರಿಸುತ್ತಿರುವ ಬಾಳೆಂಬ ಕಿರುದೋಣಿಯೊಳಗೆ ಕುಳಿತು ಕಾತರನಾದ ನನಗೆ ಕರುಣಾವರಣದಂತಿರುವ ಶಿವನವಾಣಿಯೇ ಶಾಶ್ವತ ಧೃವತಾರೆಯಾಯಿತು.

ಸಾಕಿ

ಮನದೊಳು ನೆನೆದಿಹ ಘನತರಕಾರ್ಯವು ಕೊನೆಗಾಣುವದಿನ್ನು ॥
ಘನಗುರು ರೇವಣ ಶಿವಸನ್ನಿಧಿಯನು ಕ್ಷಣದಲಿ ಪೊಂದುವೆನು ॥
ಮುಂದಿನ ಹದನವ ನರಿಯುವೆನು ॥೧॥

———

೩ನೇ ಪ್ರವೇಶ

ಕೊಲ್ಲಾಪುರ ರಾಜ್ಯ

(ಡಂಗುರ ಸಾರುವವನು ಬರುವನು)

||ಪದ||

ಸಾರುವೆ ಡಂಗುರವ ಕೇಳಿರಿ ಸಾರುವೆ ಡಂಗುರವ ||ಪ||
ಮಾಣದೆ ವಿಷದ ಕುಂಭವ ಕುಡಿದರೆ। ರಾಣಿಯರವರನೆ ಲಗ್ನವಾಗುವರೆಂದು ||೧||

ಕೇಳಿರಿ ಕೇಳಿರಿ: ಮಂತ್ರಿಸಿರುವ ವಿಷವನ್ನು ತುಂಬಿದ ಕೊಡವನ್ನು ಕುಡಿದು ದಕ್ಕಿಸಿಕೊಳ್ಳುವ ಧೀರನನ್ನು ಲಗ್ನವಾಗುವೆನೆಂಬುದಾಗಿ ಮಾಯಾರಾಣಿಯವರು ಭಯಂಕರ ಪ್ರತಿಜ್ಞೆ ಮಾಡಿದ್ದಾರೆ. ಅವರ ಕೈ ಹಿಡಿಯಬೇಕೆಂಬುವವರು ಅಗತ್ಯಬಂದು ವಿಷ ಕುಡಿಯಬೇಕು ತಿಳಿಯಿರಿ. (ಸಾರುವನು) (ಸ್ವಗತ) ಅವಿವೇಕ ರಾಣಿ ಪಟ್ಟದಲ್ಲಿ ಹಗಲು ಯಾವದೋ ! ರಾತ್ರಿ ಯಾವುದೋ ! ಮೇಲಿನವರು ಹೇಳಿದ ಹಾಗೆ ಕೆಳಗಿರುವವರು ಕೇಳಬೇಕಾಗುತ್ತದೆ. ಈ ಟಬಾಕರಿಗಾಗಿ ಮಾಡುವ ಈ ನೌಕರೀನಸಾಕರಿ. (ಹೋಗುವನು)

(ಸ್ಥಳ–ಮನೆ ಇಬ್ಬರು ಮಾತನಾಡುತ್ತ ನಿಂತಿರುವರು)

— ಎಲಾ ದೇವರೆ ! ನೀನದಿಯೊ ? ಏನಿಲ್ಲೋ? ಇಲ್ಲಂತ್ಲೆ ಹೇಳಬೇಕಾ ಗೈತಿ ! ಇದ್ದರ ಇಂತಾ ಅನ್ಯಾಯ–ಅನಾಚಾರ ಕಷ್ಟ–ನಷ್ಟರೋಗ– ದಾರಿದ್ರ್ಯ ಇವೆಲ್ಲಾ ಅಳತಿಬದ್ದು ಇಲ್ಲ ಬೆಳತಿದ್ದವ ಅಯ್ಯೋ ಅಯ್ಯೋ ! ನೆನಪಾದರ........ಕಲಮ ಮಾವಿನ ಹಣ್ಣು ಆಗಿದ್ರಿ ಬೆಳವಲದಾಗಿನ ಬಲಿತ ಬಿಳಿಜೋಳದ ತೆನಿ ಇದ್ದಾಂಗ ಇದ್ದಿರ್ರಿ ಎಂತೆಂತ ಅರಸು ಮಕ್ಕಳು–ಮುದ್ದ ಬಲ್ಲವರು ಮಾಟಾ ಮಾಡವರು ಊಫ್ ಅಂತ ಊದವರು ಒಬ್ಬರ ಇಬ್ಬರ ಮಸ್ತವಂದಿ ಈ ಮಾಯಿ ಕಾಲಾಗ ಇಸಾ ಕುಡಕುಡವ ಇಸಾ ಕುಡಕುಡದ ಸತ್ತರಪ ಮಲ್ಲಾ ! ಮಲ್ಲ ಇಸಕುಡಿಯೋದು ಅಂದ್ರೂ ಒಂದ. ಸಾವಿನ ದ ಡ್ಯಾಗ ಸಿಗುದಂದ್ರೂ ಒಂದ. ಕೀಟ ಸುದಾ ತಿಳಿಬಾರದ ಆ ಹುಚ್ಚರಿಗಿ

ಕಲ್ಲ— ಎಲೆ ಮಲ್ಲಾ ಹೊನ್ನು ಹೆಣ್ಣು ಮಣ್ಣು ಮೂರರಾಗ ಹೆಣ್ಣಿನ ನಂಜು ಬಲು ನಂಜೋ !! ನಾನಾ ಅನ್ನೋ ಸರದಾರರು ಹೆಣ್ಣಿನ ಕಾಲಾಗ ಸುದ್ದಿಲ್ಲ ಸುಣ್ಣಾದರೋ ! ಹೆಣ್ಣಿನ ಮಬ್ಬು ತಲೆಗೇರಿದಾಗ ಇದ ಮಾಡಬೇಕ ಇದ ಬಿಡಬೇಕ ಇಲ್ಲಿ ಅವರದಾರ ಇಲ್ಲಿ ಅವರಿಲ್ಲ ಹೀಗಂದಾರ ಹೀಗನ್ನಾಕಿಲ್ಲ ಅನ್ನೋದರವಷ್ಟೂ ತಿಳ್ಯಾಕಿಲ್ಲ. ಹಿಂದಕ ಅ...ಬ–ಬ–ಬಬ ಎಂತೆಂತವರಪ. ರಾವಣಾಸುರಪ್ಪ ತನ್ನ ಹತ್ತೂ ತಲೀನ ಕರಾಕರಾ ಕೊಂದು ಶಿವನಮ್ಯಾಲ ಹೂ ಇಟ್ಹಾಂಗ ಇಟ್ವ. ಮತ್ತೊಮ್ಮಿ ಮೈಯಾಗಿನ ನರಾ ಪರಪರನೆ ಕಿತ್ತು ತಂಬೂರಿಗೆ ತಂತೀಮಾಡಿ ಸಾಮವಾದ ಹಾಡಿ ಶಿವನ ಪ್ರತ್ಯಕ್ಷ ಮಾಡಿಕೊಂಡ. ಅಂತವ ರಾಮನ ಹೆಂಡತಿ ಕಳವು ಮಾಡಿ ಹೊಡದಾಡಿ ಬಡದಾಡಿ ಬೀಗರ್ನ ಬಿಜ್ಜರನ್ನ ಮಕ್ಕಳ್ನ ಕುಣ್ಯಾಗ ಕೂಡ್ರಿಸಿ ಕಡಿಗಿ ಮಣ್ಣು ಹುಡಿ ಆದ ಅವರ್ನ ಇವರನ್ನ ಹೇಳಕೊಂತ ಹೋದ್ರ ಅಂಕಿ ಹತ್ತದಾಂಗ ಹೋಗತೈತಿ ಲೆಕ್ಕ. ಅಂತೂ ಇಂತೂ ಶಿವನು ಬಲು ಬೆರಕಿ ಕುಲಬೆರಕಿ. ಎಂತಾ ಕರ್ಮದ ಬಲಿ ಒಡ್ಯಾನ ಜಗಕ್ಕ.

ಹರಿಯ ಹತ್ತು ಬಸಿರಿನಲಿ ಬರಿಸಿತ್ತು ಮಾಯೆ. ಬೊಮ್ಮನ ತಲೆಯ ಹೊಳು ಮಾಡಿತ್ತು ಮಾಯೆ. ಇಂದ್ರ ಚಂದ್ರರ ಅಂಗಕೆ ಭಂಗ ವಿಕ್ಕಿತ್ತು ಮಾಯೆ. ಲೋಕದವರನ್ನೆಲ್ಲ ಯೋನಿಯ ಮುಖದಲ್ಲಿ ಹರಿಹರಿದು ತೊತ್ತಳ ತುಳಿದತ್ತು ಮಾಯೆ. ಗರುಡ ಗಂಧರ್ವರನ್ನು ಬರಡು ಮಾಡಿ, ಕಿಂನರ ಕಿಂಪುರುಷರನ್ನು ಚುನ್ನವ ಮಾಡಿ ಸಿದ್ಧಸಾಧಕರಿಗೆ ಗುದ್ಯಾಟವನಿಕ್ಕಿ ಮುನಮುನಿಗಳ ಮನಸೆಳೆದು ಮರಣಕ್ಕೊಳಗು ಮಾಡಿತ್ತು ಮಾಯೆ. ಮುಕ್ಕಣ್ಣ ಮಾಡಿದ ಮಾಯೆಯ ನೋಡಿ ಬೆಕ್ಕನೆ ಬೆರಗಾದೆನಯ್ಯ ರಾಮನಾಥಾ ! ಅಂತ ಶಿವಶರಣನೊಬ್ಬನು ಅದಕ್ಕಂತ್ಲೆ ಹೇಳಿದಾನ.

ಮಲ್ಲ— ಈಗ ಸತ್ತವರ ಲೆಕ್ಕಾ ಹಾಕಿದರ ಸರಾಸರಿ............

ಕಲ್ಲ— ಏ ಬೆಪ್ಪ ಗುಡ್ಡ ಬಿದ್ದಾಂಗ ಬಿದ್ದಾವಲ್ಲಲೆ ಎಲಬು ಕಾಣಸವಲ್ದ

ಮಲ್ಲ— ಅವಳು ಮಾಯಮ್ಮ ಅಲ್ಲ ಮಾರವ್ವ! ಜನರನ್ನ ಕೊಲ್ಲಾಕಸ ದೇವರು ಆಕಿಗಿ ಚೆಲವಿಕಿ ಕೊಟ್ಟಾನ. ಹೆಂಗಸರ ಮುಗುಳು ನಗೆಯಲ್ಲಿ ಜನನ. ಹಾಲಿನಲ್ಲಿ ಜೀವನ, ಸಿಟ್ಟಿನಲ್ಲಿ ಮರಣ. ನಾರಿಯನ್ನು ಅರಿತರೆ ಸುಂದರಿ ಮರೆತರೆ ಮಹಾಂಕಾಳಿ ಅಂತ ಬಲ್ಲಿದರು ಹೇಳತಾರ. ಆದರ ಮಾಯಾರಾಣೀ ನಗೆ–ನುಡಿ–ನಡೆ–ಮುಡಿ–ಕೊಂಕು–ಬಿಂಕು–ಒನಪು – ಒಯ್ಯಾರ–ಚೆಲವು – ಒಲವು–ಹಾಲು–ಕಾಲು ಒಟ್ಟು ಎಲ್ಲಾದರಾಗೂ ಅರತರೂ–ಮರತರೂ ಸಾವ ಹುದುಗೈತಿ. ಯಾವ ಪುಣ್ಯ ಪುರುಷನು ಈ ಗೋಳು ಹಾಳು ಮಾಡತಾನೋ ತಿಳಿಯದು. ಕಿವಿಯಾರೆ ಕೇಳಲಾಸಲ್ಲ ಕಣ್ಣಾರೆ ನೋಡಲಾಸಲ್ಲ.

ಶಿವಶಿವಾ !! ಶಾಂತಂ ಪಾಪಂ ಶಾಂತಂ ಪಾಪಂ (ಗಲ್ಲಗಲ್ಲ ಬಡಿದುಕೊಳ್ಳುವನು)

ಕಲ್ಲ— ಅಧಾರಲ್ಲಪಾ ! ಸಿದ್ಧಗಿರ್ಯಾಗ ರೇವಣಸಿದ್ದಪ್ಪನೋರು. ಅವರಡ್ಯಾಗಬಿದ್ದ ಹೇಳಿಕೊಂಡ್ರ ಏನಾದರೂ ಬಗಿಹರಿದೀತು.

ಮಲ್ಲ— ಭೇಷ್, ಭೇಷ್ ಹೇಳಿದಿ. ಎಲಿ ಅಡಿಕಿ ಇಲ್ದ ಉದ್ದರಿ ಪಂಚಾಂಗ. ನಡಿ ಎಲ್ರೂ ಹೋಗೋಣ ! (ಹೋಗುವರು)

——

೪ನೇ ಪ್ರವೇಶ

ಸ್ಥಳ—ಸಿದ್ಧಗಿರಿ ಶ್ರೀ ರೇಣುಕಾಶ್ರಮ

(ಶಿಷ್ಯೋಪಶಿಷ್ಯರು ಭಕ್ತಿಯಿಂದ ಕುಳಿತಿದ್ದಾರೆ. ಶ್ರೀ ಜಗದ್ಗುರು ರೇವಣಸಿದ್ಧರು ಸಿಂಹಾಸನದಲ್ಲಿ ಮುಹೂರ್ತ ಮಾಡಿರುವರು)

ಶಿಷ್ಯರು— ಶ್ರೀಮಹಾಗುರುವೇ ! ಕಲಿಯುಗದಲ್ಲಿ ಆತ್ಮಸಾಕ್ಷಾತ್ಕಾರಕ್ಕೆ ಬಲು ಸರಳವಾದ ದಾರಿಯಾವುದು ? ಅಪ್ಪಣೆಯಾಗಬೇಕು. (ಸಾಷ್ಟಾಂಗ ವೆಸಗುವರು)

ರೇವಣಸಿದ್ಧ—

ಶ್ಲೋಕ

ಶಿವ ಶಿವೇತಿ ಶಿವೇತಿ ಶಿವೇತಿ ವಾ ||
ಹರ ಹರೇತಿ ಹರೇತಿ ಹರೇತಿ ವಾ ||
ಭವ ಭವೇತಿ ಭವೇತಿ ಭವೇತಿವಾ ||
ಭಜ ಮನಶ್ಶಿವ ಮೇವ ನಿರಂತರಂ ||೧||

ಉಪಾಚಾರ್ಯರೇ ಮತ್ತು ಸದ್ಭಕ್ತರೇ ಸತ್ಕರ್ಮಗಳಿಂದ ಶುದ್ಧಾಂತಃಕರಣನಾದ ದೇಹಿಯು ಶ್ರೀಗುರುವಿನ ಕರುಣೆಯನ್ನು ಪಡೆದು ಶಿವದೀಕ್ಷಾ ಸಂಪನ್ನನಾಗಿ ವಿಭೂತಿ ರುದ್ರಾಕ್ಷಗಳನ್ನು ಕ್ರಮವಾಗಿ ಧರಿಸಿ ಶಿವಮಂತ್ರ ಪುರಸ್ಸರ ನಿಜೇಷ್ಟಲಿಂಗವನ್ನು ತ್ರಿಕರಣ ಪೂರ್ವಕ ಪೂಜಿಸುತ್ತಲಿರಬೇಕು. ಮರಣದ ಪ್ರಸಂಗವು ಸಂಭವಿಸಿದರೂ ಲಿಂಗಪೂಜೆಯನ್ನು ತಪ್ಪಿಸಬಾರದು. ಮತ್ತು ಯಾವಾಗಲೂ ಪ್ರೇಮದಿಂದ ಶಿವನಾಮ ಸಂಕೀರ್ತನವನ್ನು ಮಾಡುತ್ತಲಿರಬೇಕು. ನಿರ್ಮಲ ಪ್ರೇಮಸ್ವರೂಪನಾದ ಶಿವನು ಪ್ರೇಮ ಪೂಜನದಿಂದ ಪ್ರಸನ್ನನಾಗುವನು. ಪ್ರೇಮವಿಲ್ಲದ ಸತಿಪತಿಗಳು ಅರಮನೆಯಲ್ಲಿದ್ದರೂ ಅದು ಸ್ಮಶಾನವೇ ಸರಿ. ಅಚ್ಚು ಮೆಚ್ಚಿನ ಗಂಡ ಹೆಂಡಿರು ಅಡವಿಯ ಹುಲ್ಲು ಗುಡಿಸಲಿನೊಳಗಿದ್ದರೂ ಅವರ ಪಾಲಿಗೆ ಅದು ದೇವೇಂದ್ರನ ಮಂದಿರ. ಸದ್ಗುರು ಕೃಪೆಯಿಂದ ಸುಜ್ಞಾನಿ

ಯಾವ ಸರ್ವಸಂಗಪರಿತ್ಯಾಗಿಯಾದ ವಿರಕ್ತನು ಸಹ ಆತ್ಮ ಪ್ರೇಮಿ ಯಾಗಿರುವನು. ಜಗಜ್ಜನನಿ ಶ್ರೀಭವಾನಿಗೆ ಅರೆಮೈಯನ್ನು ನೀಡಿ ದ್ದರೆ ಭಕ್ತಿಮಾತೆಗೆ ಮಾತ್ರ ಇಡಿಯ ದೇಹವನ್ನೇ ಶಿವನು ಸಲ್ಲಿಸಿರು ವನು. ಭಕ್ತಿಯುಳ್ಳ ಬೇಡನು ಭಗವಂತನಿಗೆ ನೆಚ್ಚಿನ ನಂಟನಾಗು ವನು. ಪ್ರೇಮವು ಪ್ರತಿಯೊಂದು ಪ್ರಾಣಿಗಳ ಹೃದಯ ಭೂಮಿಕೆ ಯಲ್ಲಿ ನೆಲಸಿ ಜೀವನಾಧಾರಶಕ್ತಿಯಾಗಿರುವದು. ಆನೆ ಜೇಡ ಹಾವು ಪ್ರೀತಿಯಿಂದ ಪರಮೇಶ್ವರನನ್ನು ಸೇವಿಸಿ ಮುಕ್ತವಾದ ಸ್ಥಲವು ಸುಕ್ಷೇತ್ರ ಶಿಖಾಮಣಿಯಾಗಿರುವ "ಕಾಳಹಸ್ತಿ ಎಂದು ಪ್ರಸಿದ್ಧವಾದುದು ಸಕಲರಿಗೆ ಪರಿಚಯವಾದುದಾಗಿದೆ. ಪ್ರೀತಿಯಿರದ ಉಪಚಾರಗಳು ಹೆಣದ ಸಿಂಗಾರ. ಆದ್ದರಿಂದ ನಿಮ್ಮ ಹೃದಯದೊ ಳಗಣ ಪ್ರೇಮದ ಪ್ರವಾಹವನ್ನು ಅತ್ತಿತ್ತ ವ್ಯರ್ಥವಾಗಿ ಹರಿಯಗೊ ಡದೆ ಪ್ರೇಮಸಾಗರನಾಗಿರುವ ಶಿವನತ್ತ ಅವಿಚ್ಛಿನ್ನವಾಗಿ ಸಾಗಿಸಿರಿ. ಅಮ್ಮಾ! ಅಮ್ಮಾ ಎಂದು ಕರೆದ ಕೂಡಲೆ ತಾಯಿಯ ಮೊಲೆಯ ಹಾಲು, ತಾನೆ ತಾನಾಗಿ ಹೊರಹೊಮ್ಮುವ ಹಾಗೆ ಶಿವನ ನಾಮವು ಕಿವಿಗೆ ಬಿದ್ದ ಕೂಡಲೆ ಪ್ರೇಮಾಂತಃಕರಣದಿಂದ ಕಣ್ಣೀರಿನ ಕೋಡಿ ಯನ್ನು ಹರಿಸುವವನೇ ಶಿವಾನುಭಾವಿಯು ಧನ್ಯನು ಮಾನ್ಯನು. ಕಲಿಯುಗದೊಳಗೆ ಶಿವನಾಮ ಸಂಕೀರ್ತನದಷ್ಟು ಸುಖಂಕರವಾದ ಸುಲಭ ಮಾರ್ಗವು ಮತ್ತೊಂದು ಇಲ್ಲವೇ ಇಲ್ಲ. ಹೆಣ್ಣು ಗಂಡು ಹಿರಿಯ ಕಿರಿಯ ಆಕುಲ ಈಕುಲ ಎಂಬ ಭೇದವಿಲ್ಲದೆ ಶಿವನಾಮ ವನ್ನು ನೆನೆಯಬೇಕು. ನೆನೆಯುತ್ತ ನೆನೆಯುತ್ತ ನೆನೆಯದಂತಿರ ಬೇಕು. ಮಾಡುವಂತಿರಬೇಕು. ಮಾಡದಂತಿರಬೇಕು. ಮಾಡುವ ಮಾಟದಲ್ಲಿ ತಾನಿಲ್ಲದಂತಿರಬೇಕು. ಕೊನೆಗೆ ಶಿವಾರಾಧಕನು ಇಂತಹ ಹಿರಿಯ ಜಾಣನಾಗುವನು. ಶಿವಧಾಮದ ಬಲವಿದ್ದ ಶರ ಣನು ಶಿವನನ್ನೂ ಲೆಕ್ಕಿಸುವದಿಲ್ಲ. ಪ್ರಪಂಚದಲ್ಲಿ ಸಂಗೀತ ಮತ್ತು ಸಾಹಿತ್ಯಗಳು ಸರಸ್ವತಿಯ ಕಣ್ಣುಗಳಾಗಿವೆ. ಇವೆರಡೂ ಶಿವ ನಾಮ ಸಂಕೀರ್ತನದೊಳಗೆ ಹಾಲು ಸಕ್ಕರೆಯಂತೆ ಕೂಡಿಕೊಂಡಿ ರುವದರಿಂದ ಮಲಿನವಾದ ಹೃದಯವು ಶೀಘ್ರ ಶುದ್ಧವಾಗಿ ಆತ್ಮನು ಮಹಾತ್ಮನಾಗುವನು. ಕಾರಣ ಶಿವನಾಮ ಭಜನ ಮಾಡುವಾ!

ರಾಗ—ಪೂರ್ವಿ ಆದಿತಾಳ

ಅದ್ಭುತ ವಿಗ್ರಹ ಅಮರಾಧೀಶ್ವರ। ಆಗಣಿತ ಗುಣಗಣ ಅಮೃತ ಶಿವಾ ॥
ಆನಂದಾಮೃತ ಆಶ್ರಿತ ರಕ್ಷಕ। ಆತ್ಮಾನಂದ ಮಹೇಶ ಶಿವಾ।
ಇಂದು ಕಳಾಧರ ಇಂದ್ರಾದಿಪ್ರಿಯ। ಸುಂದರ ರೂಪ ಸುರೇಶ ಶಿವಾ ॥
ಈಶ ಸುರೇಶ ಮಹೇಶ ಜನಪ್ರಿಯ। ಕೇಶವ ಸೇವಿತ ಪೂಜ್ಯ ಶಿವಾ ॥
ಉರಗಾದಿಪ್ರಿಯ ಭೂಷಣ ಶಂಕರ। ನರಕ ವಿನಾಶ ನಟೇಶ ಶಿವಾ ॥
ಊರ್ಜಿತ ದಾನವ ನಾಶಪರಾತ್ಪರ। ಆರ್ಜಿತ ಪಾಪ ವಿನಾಶ ಶಿವಾ ॥
ಋಗ್ವೇದ ಶೃತಿ ಮೌಳಿ ವಿಭೂಷಣ। ರವಿಚಂದ್ರಾಗ್ನಿ ತ್ರಿನೇತ್ರ ಶಿವಾ ॥
ೠಪವನಾದಿ ಪ್ರಪಂಚ ವಿಲಕ್ಷಣ। ತಾಪ ನಿವಾರಣ ತತ್ವ ಶಿವಾ ॥
ಏಕಾನೇಕ ಸುರೂಪ ವಿಶ್ವೇಶ್ವರ। ಯೋಗಿಹೃದಿಪ್ರಿಯ ವಾಸ ಶಿವಾ ॥
ಐಶ್ವರ್ಯಾಶ್ರಯ ಚಿನ್ಮಯ ಚಿದ್ಘನ। ಅಚ್ಯುತಾನಂತ ಗಿರೀಶ ಶಿವಾ ॥
ಓಂಕಾರ ಪ್ರಿಯ ಉರಗ ವಿಭೂಷಣ। ಹ್ರೀಂಕಾರಾದಿ ಮಹೇಶ ಶಿವಾ।
ಔರಸ ಲಾಲಿತ ಅಂತರ ನಾಶನ। ಗೌರೀಸಹಿತ ಶರೀರ ಶಿವಾ ॥
ಅಂಬರವಾಸ ಚಿದಂಬರ ನಾಯಕ। ತುಂಬುರ ನಾರದ ಸೇವ್ಯ ಶಿವಾ ॥
ಆಹಾರ ಪ್ರಿಯ ಆದಿಗಿರೀಶ್ವರ। ಭೋಗಾದಿಪ್ರಿಯ ಪೂರ್ಣ ಶಿವಾ ॥
ಶಂಭೋ ಶಂಕರ ಸಾಂಬಸದಾಶಿವ। ಸಾಂಬಸದಾಶಿವ ಸಾಂಬಶಿವಾ ॥ †

(ಒಮ್ಮಿಂದೊಮ್ಮೆ ಭೀತರಾದ ಜನರ ಗುಂಪು ಶಿವಾಶ್ರಮವನ್ನು ಪ್ರವೇಶಿಸುವದು)

ಜನರು— ಕಾಪಾಡಿರಿ ಕಾಪಾಡಿರಿ (ಅಡ್ಡಬೀಳುವರು)

ರೇವಣಸಿದ್ಧ— ಮಹಾಜನಗಳೇ ಭಯವೇಕೆ? ಏನು ಆಗಿದೆ!

ಜನ (ಕೆಲ್ಲ)– ಮಹಾಪ್ರಭುವೇ ಕರವೀರಪುರದ ಮಾಯಾರಾಣಿಯು ಮತ್ತು ಕುಟಿಲಸಿದ್ಧರು ಕೊಡುವ ಸಂಕಟಗಳನ್ನು ತಾಳಿ ತಾಳಿ ಸಾಕಾಗಿದೆ. ಪತಿವ್ರತೆಯರ ಮಾನಭಂಗವು ಕ್ಷಣ ಕ್ಷಣಕ್ಕೂ ಹೆಚ್ಚುತ್ತಲಿದೆ. ಸುಖಜೀವನವು ಮಾಯವಾಗಿದೆ. ಸೌಜನ್ಯವು

---

† ಈ ಚರಣವನ್ನು ಪ್ರತಿಚರಣದ ಕೊನೆಯಲ್ಲಿ ಹೇಳಬೇಕು.

ಕುಗ್ಗಿ ದೌರ್ಜನ್ಯವು ಬಿರುಗಾಳಿಗೆ ಭೋರ್ಗರೆವ ಸಮುದ್ರದಂತೆ ಅಬ್ಬರಿಸಹತ್ತಿದೆ. ನೇಗಿಲದ ಯೋಗಿ, ರೈತನಿದ್ದೂ ದೇಶಕ್ಕೆ ಉಪವಾಸವೇ? ಬತ್ತವಿದ್ದೂ ಜಡತನವೇ? ಸಮೀಪದಲ್ಲಿ ತಮ್ಮ ಅಸಾಧಾರಣ ಸನ್ನಿಧಿಯಿದ್ದೂ ನಮಗೆ ಈ ಉಪಟಳವೇ? ಓ ಮಹಾತ್ಮಾ ಈ ಯಮಯಾತನೆಯಿಂದ ಜಾಗ್ರತೆ ಮುಕ್ತರನ್ನಾಗಿ ಮಾಡು ಕಾಪಾಡು. (ಅಡ್ಡಬೀಳುವರು)

ರೇವಣಸಿದ್ಧ— ಮಕ್ಕಳೇ, ಈ ಸಂಗತಿಯು ತಿಳಿಗಣ್ಣಿಗೆ ಈ ಮೊದಲು ಹೊಳೆದದ್ದಾಗಿರುವದು. ಇಷ್ಟರಲ್ಲಿ ಮಾಯಾಕುಟಿಲಸಿದ್ಧರ ಗರ್ವವನ್ನು ಭಂಗ ಮಾಡಬಲ್ಲ ಮಹಾಪುರುಷನು ಶಿವಸಂಕಲ್ಪದಿಂದ ಇಲ್ಲಿಗೆ ಬಿಜಯಂಗೈಸಲಿರುವನು. ನಿಮ್ಮ ಬಳಲಿಕೆಯ ದಿನಗಳು ಕಳೆದು ಹೋಗಲಿವೆ. ಪೂರ್ವದಂತೆ ಸುಖಸಂಪನ್ನರಾಗುವಿರಿ. ನೀವು ಎಲ್ಲರು ಶಿವನಾಮ ಭಜನವನ್ನು ಭಕ್ತಿಯಿಂದ ಮಾಡುತ್ತಲಿರಬೇಕು. ಒಣಗಿದ ಚರ್ಮದಿಂದ ಮಾಡಿದ ತಿದಿಯ ಗಾಳಿ ಲೋಹಗಳಲ್ಲಿ ಕಠಿಣವಾದ ಕಬ್ಬಿಣವನ್ನು ಕರಗಿಸಿ ನೀರಿನಂತೆ ಮಾಡುವದು. ಅಂದಮೇಲೆ ಸಜೀವ ಮನುಷ್ಯನ ನೊಂದಬೆಂದ ಎದೆಯಿಂದ ಹೊರಬಂದ ಬಿಸಿಯುಸಿರು ತನಗೆ ಹಿಂಸೆ ಕೊಟ್ಟವರನ್ನು ಬೂದಿ ಮಾಡದೆ ಬಿಡುವದೇ? ನೀವು ಬೆಚ್ಚದೆ ಕೆಚ್ಚಿನಿಂದ ನಿಮ್ಮ ನಿಮ್ಮ ಕಾರ್ಯಕಲಾಪಗಳನ್ನು ನಡೆಸುತ್ತಲಿರಿ. ಶಿವಾಥವನು ಮಂಗಲವನ್ನುಂಟು ಮಾಡಲಿರುವನು. ತೆರಳಿರಿ!!

ಜನ— ರೈತನು ಹೊಲದ ಅಟ್ಟವನ್ನೇರಿ ಬಲವಾಗಿ ಬೆಳೆದ ಬೆಳಸನ್ನು ಕಂಡು ಉಲ್ಲಾಸಗೊಂಡಂತೆ ಸನ್ನಿಧಿಯ ಅಮೋಘ ವಚನದಿಂದ ಉತ್ತೇಜಿತರಾದೆವು. (ವಂದಿಸಿ ಜಯರೇವಣಸಿದ್ಧ ಎಂದು ಘೋಷಿಸಿ, ತೆರಳುತ್ತಾರೆ)

ವಟು— ಮಹಾಸ್ವಾಮಿ ಶಿವಯೋಗಿಯೊಬ್ಬನು ಸಶಿಷ್ಯನಾಗಿ ಸನ್ನಿಧಾನದ ಸಂದರ್ಶನವನ್ನು ಅಪೇಕ್ಷಿಸಿದ್ದಾನೆ.

ರೇವಣಸಿದ್ಧ— ಗೌರವದಿಂದ ಕರೆದುಕೊಂಡು ಬಾ. (ವಟು ಹೋಗುವನು) ಶಿಷ್ಯರೇ ಮಹಾಗುರುವಾಗಲಿರುವ ಮರುಳಸಿದ್ಧರೇ ಇವರು. (ಎಲ್ಲರು ಜಿನಗಾಗುಪರು ಮರುಳಸಿದ್ಧರು ಸ್ತೋತ್ರ ಹೇಳುತ್ತ ಬರುವರು)

॥ಪದ॥ ಇದೇ ಮಹಾಸುದಿನ ಎಂಬಂತೆ

ವಿಭೋ ರೇವಣಾರ್ಯ ಆ–ಆ–ಆ–ಆ । ಭಜಕ ಜೀವ ।
ಶಾಂತಿ ಸ್ವಭಾವ ॥ಪ॥
ಗುರುವರ । ಶುಭಕರ । ನಿಗಮಸಾರ । ಗಣಪಧೀರ ॥ಅ॥ಪ॥
ನಿಜದನೆಲೆಯ-ತೋರಿಸಾ ಸುಜನ–ಪಾಲ ಶ್ರೀಫಲ ॥
ಕುಜನ ಮದಗಜ ಪಂಚಾನನ ಭೋ ॥೧॥
ತರಳನಾದ ಮರುಳನ ಪೊರೆಯಬೇಕು ಸಂತತ ॥
ಪರಮ ಶಿವಧರ್ಮವ ಪಾಲಿಸುವ ॥೨॥ (ವಂದಿಸುವನು)

ರೇವಣಸಿದ್ಧ— ಮರುಳಸಿದ್ಧ ಯೋಗಿಗಳೆ!! ನಿಮ್ಮ ಆಗಮನದಿಂದ ಅತ್ಯಂತ ಸಂತೋಷವಾಯಿತು. ಈ ಆಸನವನ್ನು ಅಲಂಕರಿಸಿರಿ. (ಕೂಡ್ರುವರು) ತಪೋನುಷ್ಠಾನವು ನಿರ್ವಿಘ್ನವಾಗಿರುವದೇ? ಶಿಷ್ಯಸಮುದಾಯವು ಸ್ವಸ್ಥವಾಗಿರುವದೇ? ಅಕಸ್ಮಾತ್ತಾಗಿ ದಯಮಾಡಿಸಿರುವ ಕಾರಣವೇನು?

ಮರುಳಸಿದ್ಧ – ಗುರುರಾಜಾ! ತಮಗೆ ಅರಿಕೆಯಾಗದ ಸಂಗತಿಆವುದಿದೆ! ಉಜ್ಜಯಿನಿಯ ಜೈನವೀರ ಸೇನರಾಜನು ನನ್ನ ಗುರುದೇವನಿಗೆ ಬಹಳ ತೊಂದರೆ ಕೊಟ್ಟನು. ತಪೋಧನ ಗುರುದೇವನಿಗೂ ರಾಜನಿಗೂ ಜರುಗಿದ ಯುದ್ಧದಲ್ಲಿ ಕೊನೆಗೆ ರಾಜನೇ ಸೋತನು. ಇಷ್ಟಾದರೂ ಅವನ ಛಲವು ತೊಲಗಲಿಲ್ಲ. ಸತ್ತ್ವಸಂಪನ್ನರಾದ ಗುರುಗಳವರು ನಿರುಪಾಯರಾಗಿ ತಮ್ಮ ಧರ್ಮಪೀಠವನ್ನೇ ತೊರೆದು ಶಿಷ್ಯರೊಂದಿಗೆ ಕಾಡಿನಲ್ಲಿ ವಾಸಿಸಹತ್ತಿದರು. ಅಲ್ಲಿ ಅವರ ಅವಸಾನ ಸಮಯವು ಪ್ರಾಪ್ತವಾಗಲು ನನ್ನನ್ನು ಧರ್ಮಪೀಠದ ಉತ್ತರಾಧಿಕಾರಿಯಾಗಿ ನಿಯಮಿಸಿ ಶಿವಾಧೀನರಾದರು. ಅನಂತರ ಆ ನೀಚ

ವೀರಸೇನನು ಅಲ್ಲಿಯೂ ಬಂದು ಆಶ್ರಮವನ್ನು ಸುಟ್ಟುಹಾಕಿದನು. ಶಾಂತಿ ತತ್ತ್ವದಿಂದ ವಿಮುಖರಾಗದೆ ನಾವು ಪರಳಿಯ ವೈದ್ಯನಾಥ ಸನ್ನಿಧಿಗೆ ಬಂದು ತಪೋಲೀನರಾದೆವು. ಶಿವಾಜ್ಞೆಯನ್ನು ಅಂಗೀಕರಿಸಿ ಪೂಜ್ಯಪಾದರ ಸನ್ನಿಧಾನಕ್ಕೆ ಬಂದಿರುವದಾಗಿದೆ. ಪತಿತೋದ್ಧಾರಕ!! ಸದ್ಧರ್ಮ ಸಿಂಹಾಸನದ ಪ್ರಕಾಶನದ ಬಗ್ಗೆ ಕೈಕೊಳ್ಳಬೇಕಾದ ಯೋಜನೆಗಳು ಯಾವು? ಶಿವಧರ್ಮೋನ್ನತಿಯ ಕರ್ತವ್ಯವೇನು? ವಿವರವಾಗಿ ಅಪ್ಪಣೆಕೊಡಿಸಬೇಕು. ಈ ಬಗೆಗೆ ಸರ್ವತ್ಯಾಗವನ್ನು ಮಾಡಲು ಸಿದ್ಧನೇ ಇರುವೆನು.

ರೇವಣಸಿದ್ಧ—

ಕಂಗಳಿಗೆ ಕಣ್ಣಾಗಿ–ವಜ್ರಗಳ ಗಣಿಯಾಗಿ ॥
ಪ್ರಜ್ವಲಿಸಿ ಶೋಭಿಸುವ-ಭಾಸ್ಕರನ ಬೀಡಾಗಿ ॥
ಆದರದಿ ವಿಶ್ವವನು-ಪಾಲಿಸುವ ದೊರೆಯಾಗಿ ॥
ರಸಿಕರಿಗೆ ರಸವಾಗಿ–ಕವಿಗಳಿಗೆ ತವರಾಗಿ ॥
ಮೋಡಗಳ ಧ್ವಜ ಪಟದಿ ಮೆರೆಯುತಿದೆ ಮುಗಿಲು ॥

ಬಾಳು ಸಾಕೆಂದಳುವ ಹೇಡಿಗಳ ಕಣ್ಣೊರಿಸಿ! ಅಭಯವನು ನೀಡುತಿಹ ಶಿವಹಸ್ತದಂತಿಲ್ಲವೇ? ಅದು ಕೊನೆಯಿಲ್ಲ, ಮೊದಲಿಲ್ಲ, ತಗ್ಗು ದಿಣ್ಣೆಗಳಿಲ್ಲ, ಹರುಕಿಲ್ಲ, ಮುರುಕಿಲ್ಲ, ಮಬ್ಬಿಲ್ಲ, ಮುಸುಕಿಲ್ಲ, ನರಕಯಾತನೆ ಇಲ್ಲ. ಚಿರಶಾಂತಿಯಿಂ ತುಂಬಿ ತುಳುಕುತಿದೆ ಗಗನ ಮರುಳಸಿದ್ಧರೇ! ಅದರ ಕೆಳಗಿರುವ ನಾವೆಲ್ಲ ಕುಂದುವದೇ? ಕೊರಗುವದೇ? ಚಿಂತಿಸಬೇಡಿರಿ.

ಮನದ ಇಂಗಿತವು ಮನವರಿಕೆಯಾಯಿತು. ನಿಮ್ಮ ತಪೋಬಲಕ್ಕೆ ಅಶಕ್ಯವಾದದ್ದು, ಯಾವದೂ ಇಲ್ಲ. ಅದಕ್ಕೆ ಕೆಲವೊಂದು ಅವಧಿಯು ಬೇಕಾಗಿರುವದು. ಈಗ ಕಳೆಗುಂದಿರುವ ಶಿವಮತವು ನಿಮ್ಮ ದಿವ್ಯ ಪ್ರಭೆಯಿಂದ ದೇದೀಪ್ಯಮಾನವಾಗಿ ಬೆಳಗಲಿರುವದು. ಅದಕ್ಕೋಸುಗ ನೀವು ಕಲ್ಯಾಣದ ದೊರೆ ಸೋಮೇಶ್ವರನಲ್ಲಿಗೆ ಹೋಗಿ

ಆತನಿಂದ ಸನ್ಮಾನವನ್ನು ಪಡೆಯಬೇಕು. ಉತ್ತರದ ಉಜ್ಜಯಿನಿಯ ಆಶೆಬಿಟ್ಟು ನವೋಜ್ಜಯಿನಿಯನ್ನು ನಿರ್ಮಿಸಬೇಕು. ಸದ್ಧರ್ಮ ಸಿಂಹಾಸನವನ್ನು ಮುಂದುವರಿಸಬೇಕು. ಅದಕ್ಕೆ ನೀವೇ ಮೊದಲನೆಯ ಮಹಾಚಾರ್ಯರಾಗಲು ನಮ್ಮ ಅನುಗ್ರಹವಿದೆ.

ಇವಲ್ಲದೆ ವೇದಾಗಮ-ಉಪನಿಷತ್ತುಗಳ ಸಾರವನ್ನು ಅಚ್ಚಗನ್ನಡದಲ್ಲಿ ನಿಚ್ಚಳವಾಗಿ ತಿಳಿಸುವ ವಚನಗಳ ರಚನಾ ಪದ್ಧತಿಯನ್ನು ಪ್ರಾರಂಭಿಸಬೇಕು.

ದುರಾಚರಣದಿಂದ ಜನಕಂಟಕರಾಗಿರುವ ಮೈಲಾರದ ಕಾಪಾಲ ಭೈರವ-ಕಪ್ಪತ ಗುಡ್ಡದ ಜಟ್ಟಿಗ ಇವರನ್ನು ಮಹಿಮೆಯಿಂದ ದಂಡಿಸಿ ಸದಾಚಾರಿಗಳಾಗುವಂತೆ ಕೃಪೆ ತೋರಬೇಕು.

ಓರುಂಗಲ್ಲಿನ ಭೂಪತಿ ಗಣಪತಿಗೆ ಪುತ್ರೀ ಪ್ರದಾನವನ್ನೂ ಶ್ರೀಪತಿ ಪಂಡಿತ-ಅಮರಗುಂಡ-ಮುದನೂರಿನ ಏಕೋರಾಮ ಇತ್ಯಾದಿ ಸಮರ್ಥರಿಗೆ ಶಿವಜ್ಞಾನೋಪದೇಶವನ್ನು ದಯಪಾಲಿಸಬೇಕು. ಜೈನರನ್ನು ಶಿವದೀಕ್ಷೆಯಿಂದ ನಾವು ಲಿಂಗವಂತರನ್ನಾಗಿ ಮಾಡಿಕೊಂಡಂತೆ ನೀವು ಕೂಡ ಜೈನರನ್ನು ಲಿಂಗಧಾರಿಗಳನ್ನಾಗಿ ಮಾಡಬೇಕು. ಜೈನರ ಆಚಾರ ವಿಚಾರಗಳು ಒಳ್ಳೆಯವಾದುದರಿಂದ ಅವರನ್ನು ತಿದ್ದುವ ಹೊಣೆಗಾರಿಕೆ ಹೆಚ್ಚಾಗಿ ಬೀಳುವದಿಲ್ಲ. ಪ್ರಥಮದಲ್ಲಿ ಹರಪುರಿಯ ಜೈನರಾಜ ಚಂದ್ರಕಾಂತನು ನಿಮ್ಮ ಉಪದೇಶದ ಮೇರೆಗೆ ಶಿವಧರ್ಮವನ್ನು ಅವಲಂಬಿಸುವನು ಆಮೇಲೆ ಉದಾತ್ತ ತತ್ತ್ವಗಳಿಗೆ ಮನಸೋತ ಜೈನರು ನಾ-ಮುಂದೆ ನೀ ಮುಂದೆ ಎಂದು ಲಿಂಗವಂತರಾಗುವರು. ಮುಂದೆ ಅವರೇ ಪಂಚಮರಿಗೆ ತಾವು ಸಹೋದರರೆಂದು ಹೆಮ್ಮೆ ಪಟ್ಟು ಹೇಳಿಕೊಳ್ಳುವರು. ಆದರೆ ಇಷ್ಟೆಲ್ಲ ಮಹತ್ಕಾರ್ಯಗಳಾಗುವ ಮುನ್ನ ನಿಮ್ಮ ದಿವ್ಯಶಕ್ತಿ ಜಗತ್ತಿಗೆ ಗೊತ್ತಾಗಬೇಕಾಗಿದೆ. ಆದ ಪ್ರಯುಕ್ತ ನೀವು ಈ ಭಾಗದಲ್ಲಿ ಮಲೆತು ನಿಂತಿರುವ ಕೊಲ್ಲಾಪುರದ ಮಾಯೆಯ ಗರ್ವಭಂಗವನ್ನು

ಮಾಡಬೇಕು. ಅವಳ ಮತ್ತು ಕುಹಕ ಸಿದ್ಧರ ಕಾಟದಿಂದ ಸುತ್ತ
ಲಿನ ಪ್ರಾಂತವು ಭಯಗೊಂಡು ಗಡಗಡನೆ ನಡುಗಹತ್ತಿದೆ. ಅನೀತಿ
ಯಂತೂ ನೆಲೆಯಾಗಿ ನಿಂತಿದೆ. ಅವಳನ್ನು ಗೆಲ್ಲುವದು ನಿಮ್ಮ ಸಾಮ
ರ್ಥ್ಯಕ್ಕೆ ಸಾಧ್ಯವಿಧೆ. ಈಗ ನೀವು ಬೇರೆ ಯೋಚಿಸದೆ ಕೂಡಲೆ
ಕೊಲ್ಲಾಪುರಕ್ಕೆ ಹೋಗಿರಿ! ನಿಮಗೆ ಅನುಕೂಲವಾಗಿ ನಾವು
ಚಿತ್ಪ್ರಭೆಯನ್ನು ಆಶೀರ್ವದಿಸುತ್ತೇವೆ.

ಮರುಳಸಿದ್ಧ— ತ್ರಿಕಾಲ ಜ್ಞಾನ ಮೂರ್ತಿಯೆ ನಾನು ಹೊರಡುವೆನು
ದಯೆಯಿರಲಿ (ಎದ್ದುನಿಂತು ಕೈಮುಗಿದುಕೊಂಡು)

॥ಕಂದ॥

ಲಿಂಗಾನಂದ ವಿಲೀನನ.॥
ಜಂಗಮ ಶಿವಸಿದ್ಧ ಸಂಘ ಸಂಪಾಲಕನ ॥
ಮಂಗಲ ರೇವಣ ಸದ್ಗುರು ॥
ಪುರಗವ ನಮಲಾಂಘ್ರಿ ಕಮಲ ಕೋಲವಿಂ ಮಣಿವೆಂ ॥
(ವಂದಿಸುವನು)

ರೇವಣಸಿದ್ಧ— ವಿಜಯಿಗಳಾಗಿ ಬನ್ನಿರಿ !! (ಬಲಗೈಯೆತ್ತಿ ಹರಸುವರು)

॥ಕಂದ॥

ವಿಜಯಿಸು ಕುವರನೆ ಮಾಯೆಯ ॥
ವಿಜಯಿಸು ಕುಟಿಲಾತ್ಮರಾದ ಸಿದ್ಧರ ಗೆಲ್ದು ॥
ನಿಜ ಶಿವಯೋಗದ ತೇಜದಿ ॥
ವಿಜಯಿಸು ಸಂತಸವನಾಂತು ಬಾಳಲಿ ಜನಗಳ್ ॥

——

೫ನೇ ಪ್ರವೇಶ

ಸ್ಥಳ—ರಾಜಮಾರ್ಗ

(ಸತಿ—ಪತಿಗಳು ಮಾತನಾಡುತ್ತ ಬರುತ್ತಲಿರುವರು)

ಪತಿ— ಹೊನ್ನೀ ನಿನ್ನನ್ನು ಹೆಂಡತಿಯನ್ನಾಗಿ ಮಾಡಿಕೊಂಡ ನನ್ನ ದೈವವು ಬಣ್ಣಿಸತಕ್ಕದ್ದಾಗಿರುವದು. ಅನುಕೂಲೆ—ವಿಮಲೆ—ಸುಶೀಲೆ—ಕುಲಜೆ ಸುಂದರಿ ಎಂದು ಹೋದ ಹೋದಲ್ಲೆಲ್ಲ ನಿನ್ನ ಶ್ಲಾಘನವೇ ಶ್ಲಾಘನ ! ಜೊತೆಗಾರ್ತಿಯರು ಎಷ್ಟು ಪ್ರೇಮದಿಂದ ಒಡಹುಟ್ಟಿದವರಂತೆ ಊರು ಬಿಡುವಾಗ ನಿನ್ನನ್ನು ಕಳಿಸಲಿಕ್ಕೆ ಬಂದಿದ್ದರು. ಕಣ್ಣು ತುಂಬ ನೋಡಿ ಹಿರಿ ಹಿರಿ ಹಿಗ್ಗಿದೆನು.

ಹೊನ್ನಿ— ಇದೆಲ್ಲ ನಿಮ್ಮ ಪಾದಕಮಲದ ಪ್ರಭಾವವಲ್ಲವೇ ? ಪತಿದೇವಾ!!

ಪತಿ— ಅಲ್ಲ ಅಲ್ಲ ಹೊನ್ನೀ ಲಾಲಿಸು—ತಿನ್ನಲು ಅನ್ನವಿಲ್ಲದೆ ವಿಷವನ್ನು ನುಂಗಿರುವನು. ಮಸಣದ ಬೂದಿಯನ್ನು ನೊಸಲಿಗೆ ಬಳಿಯುತ್ತಿರುವನು. ಉಟ್ಟು ತೊಡಲು ಅರಿವೆ ಇಲ್ಲದ್ದಕ್ಕೆ ಹತ್ತು ದಿಕ್ಕುಗಳನ್ನು ಉಡಿಗೆ ತೊಡಿಗೆ ಮಾಡಿಕೊಂಡಿರುವನು. ತಿರುಗಾಡಲು ತಕ್ಕ ಕುದುರೆಯಿಲ್ಲದೆ ಮುದಿಯೆತ್ತನ್ನು ಹತ್ತುತ್ತಿರುವನು. ಅವನ ಒಡವೆಗಳೇ ಹಾವುಗಳು. ಬೆಟ್ಟವೇ ಮನೆ. ಹೀಗಿದ್ದರು ಸಕಲ ಲೋಕಗಳ ಕಲ್ಯಾಣಕ್ಕೆ ಶಿವನು ಮೂಲ ಕಾರಣನಾಗಿರುವನು. ಜಗದೇಕವಲ್ಲಭನಾಗಿರುವನು. ಇದು ಏತರ ಪರಿಣಾಮ ಗೊತ್ತೆ.

ಹೊನ್ನಿ— ಗೊತ್ತಾಗಲೊಲ್ಲದು.

ಪತಿ— ಜಗವಂಬೆಯಾದ ಅನ್ನಪೂರ್ಣಾದೇವಿಯು ಕೈಹಿಡಿದ ಪರಿಣಾಮ ! (ನಗುವಳು)

ಹೊನ್ನಿ— ಮಾತುಗಾರಿಕೆಯೊಳಗೆ ಅರಿತು ನುರಿತವರಾಗಿರುವಿರಿ. ನಿಮ್ಮಲ್ಲಿ ರಸಿಕತೆ ಮನೆ ಮಾಡಿರುವದು.

ಪತಿ— ನನಗಿಂತಲೂ ನೀನೇನು ? ಕಡಿಮೆಯವಳೇ ?

ಹೊನ್ನಿ— ಬಲಗಣ್ಣು ಬಲತೋಳೂ ಹಾರುತ್ತಲಿರುವದು.

ಪತಿ— ನೀ ಬಲು ಅಳ್ಳೆದೆಯವಳು ನೋಡೆ !

ಹೊನ್ನಿ— ಹೊಟ್ಟೆಯೊಳಗೆ ಕಸವಿಸಿ ಆಗುತ್ತಿದೆ, ಕಾಲು ಸೋತು ಹೆಜ್ಜೆ ಹಾಕಲು ಬಾರದಂತಾಗಿರುವವು, ಗಂಟಲು ಆರಿರುವದು.

ಪತಿ— ಅದೋ ನೋಡು (ತೋರಿಸಿ) ಕಾಣುವದೇ ಕೊಲ್ಲಾಪುರ. ಪೇಟೆಯಲ್ಲಿ ಹಣ್ಣು ಹಂಪಲ ಕೊಂಡು ತಿಂದು ಎಳೆನೀರು ಕುಡಿಯೋಣವಂತೆ ಬಾ. ಈ ವರೆಗೆ ಉತ್ಸಾಹದಿಂದ ಬಂದೆ !

ಹೊನ್ನಿ— ಅರಿಷ್ಟವು ನಮಗಾಗಿ ದಾರಿಯನ್ನು ಇದಿರು ನೋಡುತ್ತಲಿದೆ ಪತಿದೇವಾ !!

ಪತಿ— ಹೀಗೆ ಇಲ್ಲಲ್ಲದ್ದೊಂದು ಸಂಶಯ ಪಟ್ಟು ಹುಟ್ಟಿಸಿದರೆ ನನಗೆ ಹೊಟ್ಟೆಯಲ್ಲಿ ಕಾರ ಕಲಿಸಿದಂತಾಗುವದು. ಇನ್ನೊಂದು ಘಂಟೆಗೆ ನಮ್ಮೂರನ್ನೆ ಸೇರುವೆವು.

ಹೊನ್ನಿ— ದೇವಿ ! ಶಾಂಭವಿ ! ಜಗದ ಹಡದಮ್ಮ ! ನೀನೆ ಸಲಹಬೇಕಮ್ಮ!!! ಅಂದವಾಗಿ ಊರು ತಲ್ಪಿದರೆ ಹೊಸ ಹಸಿರು ಸೀರೆ ಉಡಿಸಿ ಜರೆಯ ಕುಪ್ಪಸ ತೊಡಿಸಿ ಹಣ್ಣುಕಾಯಿ ಉಡಿ ತುಂಬಿ ಹತ್ತು ಮಂದಿ ಮುತ್ತೈದಿಯರಿಗೆ ಬಾಗಿಣ ಕೊಟ್ಟು ಹೋಳಿಗೆ ತುಪ್ಪ ಉಣಿಸುವೆನಮ್ಮಾ!!! ಕೈ ಹಿಡಿಯಮ್ಮ ಬಿಡಬೇಡ ತಾಯಿ !!

ಪತಿ— ಇದೇ ಅಗಸೆ ಬಾಗಿಲು. (ನೋಡಿ) ಮೊಗವು ಸಪ್ಪಗೆ ಆಗಿದೆ. ತುಸು ನಗೆ ನಗು ನಗು. (ಕೆನ್ನೆ ತಟ್ಟುವನು ನಗುವಳು)

(ಮುಂದೆ ಬರಲು ಕುಟಿಲ ಸಿದ್ಧನೊಬ್ಬನು ಸೇವಕನೊಡನೆ ನಿಂತಿದ್ದು ಇವರನ್ನು ಮಾತಾಡಿಸುವನು)

ಸಿದ್ಧ— ನಿಮ್ಮದು ಯಾವ ಊರು ?

ಪತಿ— ಪಟ್ಟಣದಾಚೆಯ ಹಳ್ಳಿ.

ಸಿದ್ಧ— ಹೆಸರು

ಪತಿ— ಉದಯಭಾನು

ಸಿದ್ಧ— ಇವಳಾರು ?

ಉದಯಭಾನು— ಧರ್ಮಪತ್ನಿ (ಮುಂದೆ ಹೋಗುವರು)

ಸಿದ್ಧ— ಸೇವಕಾ ! ಬಲು ಚೆಲುವೆ ಆಕೆ

ಸೇವಕ— ಬಿಡತಕ್ಕದ್ದೇ ಅಲ್ಲ. ತಮಗೆ ಒಪ್ಪಾದ ವಸ್ತುವದು.

ಸಿದ್ಧ— ಹೀಗೇಸು ? ಅವರು ತುಳಿದ ಮಣ್ಣು ತೆಗೆದುಕೊಂಡು ಬಾ,

ಸೇವಕ— ಆಗಲಿ (ತಕ್ಕೊಂಡು ಬರುವನು) ಕೊಳ್ಳಿರಿ (ಸಿದ್ಧನು ಮಂತ್ರಿಸಿ ಚೆಲ್ಲುವನು)

ಸಿದ್ಧ— ಅವರು ಒಬ್ಬರಿಗೊಬ್ಬರು ಆಗಲಿವರು.

ಸೇವಕ— ಹೌದಲ್ರಿ ನೀವೇ ದೇವರು. (ಮತ್ತೆ ಮಂತ್ರಿಸುವನು)

ಸಿದ್ಧ— ಅವಳು ಈಗ ಗಿಡವಾಗಿ ನಿಂತಿರುವಳು ಇಕೋ ಈ ಪುಡಿಯನ್ನು ಬೊಡ್ಡೆಗೆ ಚೆಲ್ಲು ಕೋಗಿಲೆಯಾಗುವಳು, ಹಿಡಿದುಕೊಂಡು ಮನೆಗೆ ಒಯ್ಯಿ, ನಾನೂ ಬಂದೇ ಬಿಡುವೆನು. (ಸೇವಕ ಹೋಗುವನು)

ಪದ್ಯ

ಅವಳನು ಮುದ್ದಿಸಿ ರಮಿಸುವೆನಪ್ಪ । ಸವಿಸವಿ ನುಡಿಗಳ ಕೇಳುವೆನಪ್ಪ ॥
ಮನಸಿಗೆ ಬಂದ ಒಡವೆಯ ಕೊಡುವೆನು ।
ಹಣದ ಹಮ್ಮಿಣಿಯ ಕೈಯೊಳಗಿಡುವೆನು ॥೧॥
ಗಲಿಬಿಲಿ ಮಾಡದೆ । ಕುಲು ಕುಲು ನಗುತಲಿ ।
ಮಲಗಿ ಮಲಗಿ ದಿನ ಕಳೆಯುವೆ ನಾನು ॥೨॥

ಮಾಯಾ ನಗರದ ಸಿದ್ಧರ ಸಮ್ಮುಖದಲ್ಲಿ ಸತಿತ್ವದ ಪ್ರಭಾವವೇ !!! ಹಹ ! (ಕೀಚ ನಗುತ್ತ ಹೋಗುವನು)

೩ನೇ ಪ್ರವೇಶ

ಸ್ಥಳ—ಆಶ್ರಮ

(ಕೆಲವರು ಲಿಂಗಾರ್ಚನವನ್ನೂ ಹಲವರು ಯಾಗವನ್ನೂ ಮಾಡುವದರಲ್ಲಿ ತೊಡಗಿರುವರು)

ಈಶಾನಸ್ಸರ್ವ ವಿದ್ಯಾನಾ ಮೀಶ್ವರಸ್ಸರ್ವ ಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋಧಿಪತಿರ್ಬ್ರಹ್ಮಾಶಿವೋಮೇ ಅಸ್ತು ಸದಾಶಿವೋಂ ॥ ಯೋರುದ್ರೋ ಅಗ್ನೌ ಅಪ್ಸುಯ ಓಷಧೀಷು ಯೋರುದ್ರೋ ವಿಶ್ವಾಭುವನಾನಿ ವಿವೇಶ ತಸ್ಮೈರುದ್ರಾಯ ನಮೋ ಅಸ್ತು !!

(ಎಂದು ಲಿಂಗಕ್ಕೆ ನೀರೆರೆದು ಅರ್ಜಿಸುತ್ತಿದ್ದಾರೆ, ಇನ್ನೊಂದು ಕಡೆಯಲ್ಲಿ ಯಾಗಮಂಟಪದಲ್ಲಿ ಕುಂಡದ ಸುತ್ತು ಮುತ್ತು ಋತ್ವಿಜರು ಕೂತಿದ್ದಾರೆ)

ಮೇಷಾರೂಢೋ ಜಟಾಬದ್ಧೋ । ಗೌರವರ್ಣೋ ಮಹೌಜಸಃ ॥
ಆತ್ಮಾಭಿಮುಖಮಾಸೀನ ಏವಂರೂಪೋಹುತಾಶನಃ ॥

ಹೇ ಅಗ್ನೇ ಪ್ರಾಙ್ಮುಖೋದೇವ ಪ್ರತ್ಯಙ್ಮುಖಸ್ಸನ್ ಮಮಾಭಿಮುಖೋಭವ !! (ಇಂತು ಅಗ್ನಿಯನ್ನು ಪ್ರಾರ್ಥಿಸಿ ಹೊತ್ತಿಸಿ ತುಪ್ಪವನ್ನು ಸಾಟನಿಂದ ಕುಂಡದಲ್ಲಿ) ಅಗ್ನಯೇಸ್ವಾಹಾ ! ಪ್ರಜಾಪತಯೇ ಸ್ವಾಹಾ !! ಸೋಮಾಯಸ್ವಾಹಾ ! (ಎಂದು ಸುರಿಯುತ್ತಿರುವಷ್ಟರಲ್ಲಿ ಕುಟಿಲ ಸಿದ್ಧರು ಬರುವರು)

ಸಿದ್ಧ— ಎಲೋ ಕಪಟಿಗಳೇ ಏನು ಮಾಡುತ್ತಿರುವಿರಿ ? (ಅವರೆಲ್ಲ ನೋಡಿ)

ಋತ್ವಿಜರು— ಬಂದರು, ಬಂದರು, ನಮಗಿನ್ನು ಅಳಿಗಾಲವೇ ಬಂದಿತು. ತಪ್ಪಿಸಿಕೊಳ್ಳಿರಿ ಓಡಿರಿ (ಓಡಲು ಯತ್ನಿಸುವರು ಸಿದ್ಧರು ಬಂದು ಹಿಡಿದು ನಿಲ್ಲಿಸುವರು)

ಸಿದ್ಧ— ಎಲಾ ಇದೇನು ? (ಕುಂಡವನ್ನು ತೋರಿಸುವನು)

ಋತ್ವಿಜ— ಯಾಗಕುಂಡ

ಸಿದ್ಧ— ಇದರಿಂದ ಬರುವ ಲಾಭ ?

ಋತ್ವಿಜ— ಮಂತ್ರಪಠನ ಪೂರ್ವಕ ನಾವು ಅರ್ಪಿಸುವ ಹವಿಸ್ಸನ್ನು ಅಗ್ನಿಮುಖದಿಂದ ಇಂದ್ರಾದಿ ದೇವತೆಗಳು ಉಂಡು ಸಂತುಷ್ಟರಾಗುವರು. ಕಾಲಕಾಲಕ್ಕೆ ನಮಗೆ ಮಳೆ ಬೆಳೆ ಕೊಡುವರು.

ಸಿದ್ಧ— ನೀವೇನು ಮಾಡುತ್ತಿದ್ದಿರಿ.

ಶೈವ— ಲಿಂಗಾರ್ಚನೆ ಮಾಡುತ್ತಿದ್ದೆವು.

ಸಿದ್ಧ— ನಿಮಗೆ ಆಗುವ ಪ್ರಯೋಜನ.

ಶೈವ— ಲಿಂಗಾರ್ಚನದಿಂದ ಮನಸ್ಸಿನ ಹರಿದಾಟವು ಅಡಗಿ ಅಂತಃಕರಣವು ಸ್ವಚ್ಛವಾಗುವದು. ಅಂಗಗುಣಗಳು ಅಳಿದು ಲಿಂಗಕಳೆಗಳು ಬೆಳೆದು ಆತ್ಮಸಾಕ್ಷಾತ್ಕಾರವಾಗುವದು. ಆ ಮೇಲೆ ಹುಟ್ಟುವದೂ ಸಾಯುವದೂ ತಪ್ಪುವದು. ಶಿವಾನಂದವು ಕೈಸೇರುವದು.

ಸಿದ್ಧ— ಥೂ ತಿಳಿಗೇಡಿಗಳೇ. ದೇಹವೇ ಪರಬ್ರಹ್ಮವಾಗಿದೆ. ಇದು ಸುಟ್ಟು ಹೋದ ಮೇಲೆ ತಿರುಗಿ ಬರಲಾರದು. ಸುರಾಪಾನ ಧೂಮ್ರಪಾನಗಳನನ್ನು ನಡೆಸುತ್ತಾ ಸಿಕ್ಕ ಸಿಕ್ಕ ಸುಂದರಿಯರನ್ನು ಸ್ವೇಚ್ಛೆಯಾಗಿ ರಮಿಸುವದೇ ಮೋಕ್ಷ. ಆದ್ದರಿಂದ ಸಾಲ ತಂದಾದರೂ ತುಪ್ಪವನ್ನು ತಿಂದು ತೇಗಬೇಕು. ಇದೊ ಕುಡಿಯಿರಿ. (ಬಾಟ್ಲ ತೋರಿಸುವನು)

ಶೈವ— ಇದೇನಪ್ಪ

ಸಿದ್ಧ— ಇವಳು ಸುರಾದೇವಿ

ಎಲ್ಲರು— ಹೆಂಡ-ಹೆಂಡ

ಸಿದ್ಧ— ಛೀ ನೀಚರೆ ಹೆಂಡವೆಂದು ಹೀಯಾಳಿಸಿ ಮಾತನಾಡುವಿರಾ ?

ಕುಡಿದರೆ ಸರಿ. ಒಲ್ಲೆ ಅಂದರೆ ಬಲಾತ್ಕಾರವಾಗಿ ಕುಡಿಸಲಾಗು ವದು. ಹೂಂ ಕೊಳ್ಳಿರಿ (ಸೀಸೆ ಕೊಡಲು ಯತ್ನಿಸುವನು)

ಎಲ್ಲರು-- ನಮ್ಮಿಂದ ಆಗದು.

ಸಿದ್ಧ-- ಸಿದ್ಧರೆ ಇವರನ್ನೆಲ್ಲ ಸೆರೆ ಹಿಡಿಯಿರಿ. ಚೆನ್ನಾಗಿ ಥಳಿಸಿ (ಹೊಡೆ ಯುವರು)

ಎಲ್ಲರು-- ಶಿವ ಶಿವಾ !! ನಮ್ಮನ್ನು ಕೇಳುವವರೇ ಇಲ್ಲವಾಯಿತಲ್ಲಾ ?

ಸಿದ್ಧ— ಈಗಾವರು ಕುಡಿಯುವಿರೋ ಇಲ್ಲವೊ ?

ಎಲ್ಲರು— ನಾವೆಂದೂ ಕುಡಿದಿಲ್ಲ.

ಸಿದ್ಧ— ಈಗ ಸ್ವಲ್ಪ ಕುಡಿಯಿರಿ. ಬರಬರುತ್ತ ತಾನಾಗಿ ರೂಢಿಯಾಗು ವದು. ಕೈಯಲ್ಲಿ ಹಿಡಿಯಿರಿ. ಹೂಂ ಕೆಳಕ್ಕೆ ಹಾಕಿದರೆ ತಲೆ ನೆಲಕ್ಕೆ ಉರುಳುವದು. (ಕೊಡುವನು ತೆಗೆದುಕೊಳ್ಳುವರು)

ಋತ್ವಿಜ— (ಬಾಯಿಗೆ ಒಯ್ದು) ಅಯ್ಯೋ ಕೆಟ್ಟ ನಾತ ! ವಯಃಕ್(ವಾಂತಿ ಮಾಡಿಕೊಳ್ಳುವನು ಸೀಸೆ ಬೀಳುವದು)

ಸಿದ್ಧ—(ಸಿಟ್ಟಾಗಿ) ಎಲಾ ಚಾಂಡಾಲರೆ ಈ ಸಿದ್ಧರು ಅನುಗ್ರಹಿಸಿ ಕೊಟ್ಟ ಸುರೆಯನ್ನು ಸುರುವಿ ಅಪಮಾನ ಮಾಡಿದಿರಾ ? ಹೆಡಮುರಿಗೆ ಕಟ್ಟಿ ಸರಿಯಾಗಿ ಕುಟ್ಟಿರಿ (ಚಾಟಿನಿಂದ ಹೊಡೆಯುವರು)

ಎಲ್ಲರು— ಶಿವ ಶಿವಾ ! ಅನಾಥರಕ್ಷಕಾ ! ಈ ಸಂಕಟದಿಂದ ನಮ್ಮನ್ನು ಪಾರುಗೊಳಿಸು !

ಸಿದ್ಧ— ಶಿವ ಎಲ್ಲಿದ್ದಾನೆ ಸತ್ತಮೇಲೆ ಶವ. ಈಗಲ್ಲ (ಮತ್ತೆ ಹೊಡೆಯು ತ್ತಾರೆ)

ಎಲ್ಲರು— ಶಿವ ಶಿವಾ ! ಶಿವ ಶಿವಾ !! (ಪೆಟ್ಟು ತಾಳದೆ ಉರುಳಾಡುವರು)

ಸಿದ್ಧ— ನಿಮ್ಮ ಶಿವನನ್ನು ತೋರಿಸಿರಿ ನೋಡೋಣ. ನಾವೇ ನಿಮ್ಮ ಶಿವ. ನೀವೆಲ್ಲಾ ನಮ್ಮನ್ನೇ ಗೌರವಿಸಬೇಕು. ಬೇಡಿದ್ದನ್ನು ಕೊಡಬೇಕು. ಇದಲ್ಲದೆ ಸುರೆಯನ್ನು ಸೇವಿಸಬೇಕು. ಈ ನಿಯಮಕ್ಕೆ ಒಪ್ಪಿದರೆ ನಿಮ್ಮನ್ನು ಬಿಟ್ಟುಬಿಡುವೆವು.

ಎಲ್ಲರು— ಬೇಡಿದ್ದನ್ನು ಕೊಡುವೆವು. ಇದನ್ನು ಕುಡಿಯಲಾರೆವು.

ಸಿದ್ಧ— ಒಂದು ಬಿಟ್ಟು ಒಂದು ಕೇಳಿದರೆ ನಾವು ಕೇಳತಕ್ಕವರೇ ಅಲ್ಲ. ಹೂಂ ಏನನ್ನುವಿರಿ (ಹೊಡೆಯುವರು)

ಎಲ್ಲರು— ಶಿವ ಶಿವಾ ! ಸತ್ತೆವು ಸತ್ತೆವು (ಉರುಳಾಡುವರು)

ಸಿದ್ಧ— ಗಟ್ಟಿಯಾಗಿ ಹಿಡಿದು ಇವರ ಬಾಯಿ ತೆರೆಯಿರಿ ನಾನು ಸುರೆ ಸುರುವುತ್ತೇನೆ. (ಹಾಗೇ ಮಾಡುವರು)

ಎಲ್ಲರು— ಅಯ್ಯೋ ಕೆಟ್ಟೇ ಬಿಟ್ಟೆವು !!

ಸಿದ್ಧ— ಹೋಗಿರಿ ಎಲ್ಲಿಗಾದರೂ ಹೋಗಿ ಬದುಕಿಕೊಳ್ಳಿರಿ (ಹೊಡೆಯ ಹತ್ತಲು ಎಲ್ಲರು ಓಡುವರು)

— ಪ್ರಥಮಾಂಕಂ ಸಮಾಪ್ತಮ್ —

ದ್ವಿತೀಯಾಂಕ

೧ನೇ ಪ್ರವೇಶ

ಸ್ಥಳ—ವೀರವರ್ಮ ಮಹಾರಾಜನ ದರ್ಬಾರು

(ಸಿಂಹ ಪೀಠದಲ್ಲಿ ವೀರವರ್ಮ ಮಹಾರಾಜನು ಮಂಡಿಸಿರುವನು. ಚಾಮರ ಢಾಳಿಸುವ ಕನ್ನಿಕೆಯರಿಬ್ಬರು ಎರಡು ಪಕ್ಕದಲ್ಲಿ ನಿಂತುಕೊಂಡಿರುವರು. ಪ್ರಧಾನ ಮತ್ತು ಸೇನಾನಾಯಕರು ಸಮುಚಿತಾಸನದಲ್ಲಿರುವರು।

(ಸರ್ವರು ಬಂದು ನಿಂತು ವಿಜಯ ಕೋರುವರು.)

ಪದ–ರಾಗ-ಮೋಹನ ಝಂಪಾ ತಾಳ.

ವಿಜಯವಾಗಲಿ ವೀರವರ್ಮ ಭೂಮೀಪತಿಗೆ ॥
ಪ್ರಜೆಗಳನು ಪಿತನಂತೆ ಸತತ ಸಲಹುತಲಿಹಗೆ ।ಪ॥

ಮಾರಾಂತ ವೈರಿಗಳ ತುಳಿದ ಕೆಚ್ಚೆದೆಯವಗೆ ॥
ಮಾರ ಹರಣನ ಚರಣ ಸರಸಿಜವ ಪೂಜಿಪಗೆ ॥
ಸಾರ ಸುಗುಣಗಳೆಂಬ ರತ್ನಗಳ ತಳೆದವಗೆ ॥
ಭೂರಿ ಸುಂದರನಾಗಿ ರಾರಾಜಿಸುತಲಿಹಗೆ ॥೧॥

ವೀರವರ್ಮ— ಸಚಿವಾಗ್ರಣಿ ಶಿವಕುಮಾರಾ ! ಏನು ವಿಶೇಷ !!

ಶಿವಕುಮಾರ— ಹೆಚ್ಚಿನ ಸಂಗತಿ ಯಾವುದಿದೆ ! ನಾಡಿನ ಜನಗಳು ಕಾಲ ಕಾಲಕ್ಕೆ ಮಳೆ ಬೆಳೆಗಳಾಗಿ ಸುಖಿಗಳಾಗಿರುವರು. ವಿರೋಧಿಗಳ ಹಾವಳಿಯು ಹೇಳಹೆಸರಿಲ್ಲದಾಗಿರುವದು. ನೇಗಿಲಧ ಯೋಗಿ ಒಕ್ಕಲಿಗರಿಗೆ ಸೌಕರ್ಯ ವಿಶೇಷಗಳು ಒದಗಿಸಲ್ಪಟ್ಟಿರುವವು. ವಿವಿಧ ಕಲಾಕುಶಲರಾಗಿರುವ ವಿದ್ವಾಂಸರು ಸನ್ಮಾನಿತರಾಗಿ ಸ್ವಕರ್ತವ್ಯ ಧುರಂಧರರಾಗಿರುವರು. ಬಡವಬಲ್ಲಿದರೆಂಬ ವ್ಯತ್ಯಾಸವಿಲ್ಲದೆ ಎಲ್ಲರು ಪರಸ್ಪರ ಸಹೋದರಭಾವದಿಂದ ವರ್ತಿಸುತ್ತಲಿರುವರು. ಹಣೆಯಲ್ಲಿ ವಿಭೂತಿ, ಕೊರಳೊಳಗೆ ರುದ್ರಾಕ್ಷಿ, ಎದೆಯ ಮೇಲೆ ಶಿವಲಿಂಗ, ಮುಖದಲ್ಲಿ ಶಿವಮಂತ್ರ, ಹೃದಯದಲ್ಲಿ ಶಿವಾನುಸಂಧಾನ ಇವುಗಳಿಂದ ಕಂಗೊಳಿಸುವ ಲಿಂಗವಂತರು ರಾಜ್ಯದಲ್ಲಿ ದೇಶಸೇವೆಯೇ

ಈಶಸೇವೆ ಎಂದು ತಿಳಿದು ಜನಕಲ್ಯಾಣಕಾರ್ಯಗಳಲ್ಲಿ ಕಂಕಣಬದ್ಧರಾಗಿ ನಿರ್ವಂಚನೆಯಿಂದ ದುಡಿಯುತ್ತಲಿದ್ದಾರೆ. ಈ ಪ್ರಕಾರವಾದ ಧರ್ಮರಾಜ್ಯವನ್ನು ಭೂಮಂಡಲದ ಭಿತ್ತಿಯಲ್ಲಿ ಚಿತ್ರಿಸಿದ ತಮ್ಮ ಕುಶಲ ಸಾಹಸವನ್ನು ಮುಕ್ತಕಂಠದಿಂದ ಪ್ರಪಂಚಕ್ಕೆ ಪ್ರಪಂಚವೇ ಕೊಂಡಾಡುತ್ತಲಿದೆ ಮಹಾಪ್ರಭೋ

ವೀರವರ್ಮ— ನಿಮ್ಮಂಥ ರಾಜ್ಯಭಾರ ಕೋವಿದರು ಅವಿಶ್ರಾಂತವಾಗಿ ಪ್ರಯತ್ನಿಸಿದ ಫಲವು ಈ ಪ್ರಶಂಸೆಗೆ ಪಾತ್ರವಾಗಿರುವದು. ಸಂತೋಷ !! (ಯೋಚಿಸಿ) ಮಂತ್ರಿವರ್ಯಾ ! ಸತ್ತ್ವರಜಸ್ತಮೋಗುಣಗಳ ಸಮಾಗಮ ಮೂಲಕ ವಿವಿಧತೆಯು ಜಗತ್ತಿನಲ್ಲಿ ತುಂಬಿತುಳುಕುತ್ತಲಿದೆ. ಈ ಮೂರುಗುಣಗಳಿಂದ ಬಿಡಲ್ಪಟ್ಟರೆ ಜಗದ ಜಂಜಡವು ಜಾರುವದಲ್ಲದೆ ಆತ್ಮಶಾಂತಿಯೂ ಲಭಿಸಿ ಚಿರಸುಖಿಯಾಗ ಬಹುದಲ್ಲವೇ ?

ಶಿವಕುಮಾರ— ನಿಸ್ಸಂಶಯ ! ನಿಸ್ಸಂಶಯ !

ವೀರವರ್ಮ— ಹಾಗಾದರೆ ಸಾತ್ತ್ವಿಕ-ರಾಜಸ-ತಾಮಸ ಈ ಮೂರು ತೆರನಾದ ಜನರು ಮುಖ್ಯವಾಗಿ ಆಚರಿಸಬೇಕಾದ ಸಾಮಾನ್ಯ ನೀತಿ ಯಾವುದು.? ಹೇಳಬಲ್ಲೆಯಾ ?

ಶಿವಕುಮಾರ— ಸಮಾಜದಲ್ಲಿ ದೇವತೆಗಳಂತೆ ದೈವುಳ್ಳವರು ಸಂಯಮನವನ್ನು ಸಾಧಿಸಬೇಕು. ಯಾಕಂದರೆ ಅವರು ದೊಡ್ಡಸ್ತಿಕೆಯಿಂದ ಮಂದಿಗೆ ತೊಂದರೆ ಕೊಡಬಹುದು. ಮನುಷ್ಯರಂತೆ ಸಮಾನ ಯೋಗ್ಯತೆಯಿದ್ದವರು ಬಂಧುಗಳನ್ನು ಪ್ರೀತಿಸುತ್ತ ದಾನವೀರರಾಗಬೇಕು. ಕೇಡಿಗಳಾದ ದೈತ್ಯರಂತೆ ಉಪದ್ರವಿಯಾದವರು ಕನಿಕರದಿಂದ ದಯಾಧರ್ಮಿಗಳಾಗಬೇಕು. ದಿವ್ಯಧ್ವನಿಯಾದ ಗುಡುಗಿನಲ್ಲಿ ದ-ದ-ದ ಎಂದು ಕೇಳಬರುವಾಗ ದಮನ-ದಾನ-ದಯೆ ಇವನ್ನು ಆಚರಿಸಿರಿ ಎಂಬ ಅಭಿಪ್ರಾಯವು ಹೊಳೆದು ಹೋಗುವದು. ಸತ್ವ ರಜಸ್ತಮೋಗುಣ ಪ್ರಧಾನವಾಗಿರುವ ದೇವ-ಮಾನವ-ದಾನವ ವರ್ಗ

ವನ್ನು ದಮನ-ದಾನ-ದಯಾ ಇವು ಸಾರ್ಥಕವನ್ನಾಗಿ ಮಾಡುವವು. ಆದ್ದರಿಂದ ಮಹಾರಾಜನೇ ಸಾತ್ತ್ವಿಕರು ಪ್ರಾಮುಖ್ಯವಾಗಿ ನಿಗ್ರಹ ನೀತಿಯನ್ನೂ ರಾಜಸರು ದಾತೃತ್ವ ನೀತಿಯನ್ನೂ ತಾಮಸರು ಅಹಿಂಸಾನೀತಿಯನ್ನೂ ಅನುಸರಿಸಬೇಕು. ಇದೇ ತಮ್ಮ ಪ್ರಶ್ನೆಯ ಸಾರವಾಗಿರುವದು.

ವೀರವರ್ಮ— ಶಹಬಾಸ್, ಶಹಬಾಸ್ ಮಂತ್ರಿ ಮುಖ್ಯಾ ! ಶಹಬಾಸ್ ಬೃಹಸ್ಪತಿಗೆ ಸರಿತೂಕವುಳ್ಳ ನಿನ್ನ ಬುದ್ಧಿ ಕೌಶಲ್ಯವು ವರ್ಣನೀಯ ವಾಗಿರುವದು. ಅಮೂಲ್ಯಗಳಾದ ದಮನ-ದಾನ-ದಯಾ ನೀತಿ ಗಳನ್ನು ನಮ್ಮರಾಜ್ಯದಲ್ಲಿ ಪ್ರಚಾರಪಡಿಸು. ಶಿವಭಕ್ತಿಯನ್ನು ಹೆಚ್ಚಿಸು. ಪ್ರಜೆಗಳು ನೀತಿವಂತರಾಗಿ ಶಿವಭಕ್ತಿಯಿಂದ ಬಾಳಲಿ, ಸುಖಿಸಲಿ ! ಈ ಮೂರು ಸುನೀತಿಗಳಿಂದ ಅನೀತಿಗೆ ಆಸ್ಪದವೇ ಇಲ್ಲ ದಂತಾಗುವದು

ಶಿವಕುಮಾರ— ಹಾಗೇ ಆಗಲಿ ಮಹಾರಾಜಾ. (ದರ್ಬಾರು ಮುಗಿ ಯುವದು)

---

೩ ನೆಯ ಪ್ರವೇಶ.

ಸ್ಥಳ— ರಾಜಮಾರ್ಗ

(ಡಂಗುರದವನು ಬರುವನು)

ಕೇಳಿರಿ–ಕೇಳಿರಿ ವೀರವರ್ಮ ಮಹಾ ಪ್ರಭುಗಳವರ ಸಂದೇಶವನ್ನು ಕೇಳಿರಿ. ನಮ್ಮ ರಾಜ್ಯದಲ್ಲಿ ಸರ್ವರು ತಾಳ್ಮೆಯುಳ್ಳವರಾಗಬೇಕು. ದಾನ ಮತ್ತು ಪರೋಪಕಾರದಲ್ಲಿ ಯಥಾಶಕ್ತಿ ನಿರತರಾಗಿರಬೇಕು. ಕ್ರೂರಿಗಳಾಗದೆ ದಯಾ ಧರ್ಮಿಗಳಾಗಿ ಅಹಿಂಸೆಯನ್ನು ಪರಿಪಾಲಿಸಬೇಕು. ಇದಲ್ಲದೆ ಶಿವನಾಮಭಜನದಲ್ಲಿ ತನ್ಮಯರಾಗಿರತಕ್ಕದ್ದು. ಹೇಡಿಗಳಾಗದೆ ಧೀರರಾಗಿ ದೇಶ ಸೇವಾಸಕ್ತರಾಗಿರಬೇಕು. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ರಾಜ್ಯದಿಂದ ಅವರನ್ನು ಹೊರದಬ್ಬಲಾಗುವದು. ಎಚ್ಚರಿಕೆ ಎಚ್ಚರಿಕೆ !!! (ಡಂಗುರ ಹಾಕುವನು ಹೋಗುವನು)

---

೩ ನೆಯ ಪ್ರವೇಶ

ಸ್ಥಳ— ಮಾಯಾರಾಣಿಯ ಉಪವನ

(ನೂರಾರು ಸಿದ್ಧರು ಸುರಾಪಾನದಲ್ಲಿ ತೊಡಗಿರುವರು. ಹಲವರು ಭಂಗೀಸೇದುತ್ತಿರುವರು)

ಒಬ್ಬನು ಸೆರೆಕುಡಿದ ಮಬ್ಬಿನಲ್ಲಿ ಬಾಟ್ಲಯನ್ನು ಕುಣಿಸುತ್ತ—

ಪದ್ಯ

ಏನ ಸವಿ ಏನ್ ಸವಿ ಜಗವಾಗ ॥
ಸೆರೆಯನು ಕುಡಿವುದೇ ಸುಖವೀಗ ॥ ೧ ॥

ಸುರರ ಸ್ವರ್ಗದ ಅಮೃತವಿದು ॥
ಧರೆಯೊಳಗಿಳಿದಿದೆ ಸುರೆಯಾಗಿ ॥ ೨ ॥

ಬ್ರಾಂಡಿ ವ್ಹಿಸ್ಕಿ ಬೀರ ಹಲಕೋಲಾ ॥
ಹೆಂಡದ ಹೆಸರಿಗೆ ಅನುಕೂಲಾ ॥ ೩ ॥

ಅ...ಹ—ಹಹ—ಹ ವಿಲಾಸಿನಿಯರ ಸಮೂಹದಲ್ಲಿ ಸುಹಾಸ ಸಂಗೀತದ ಜೊತೆಗೆ ಸುಳಿಸುಳಿದು, ಸುಂದರಿಯರ ಸುಮನೋ ಮಂದಿರದಲ್ಲಿ ನೆಲಸಿ "ಸುಮಧುರೆ" ಎಂಬ ನಾಮಾಂಕಿತವನ್ನು ಧರಿಸಿ ನವ ತರುಣಿಯರೊಂದಿಗೆ ಕುಣಿ-ಕುಣಿಯುತ್ತ, ರಾಜ ಮಹಾರಾಜರಿಗೆ ಪಟ್ಟದ ಅರಸಿಗಿಂತ ದೇಶಕ್ಕಿಂತ ಅತಿ ಪ್ರಿಯತಮೆಯಾಗಿರುವ ಸುರಾದೇವಿ-ಹಡದವ್ವ—ಶರಣವ್ವಾ! ನಿನಗೆ ಶರಣು!! ಲಕ್ಷ್ಮೀ ಸರಸ್ವತಿಯರ ಹಾಗೆ ನೀನು ಚಂಚಲವೃತ್ತಿಯವಳಲ್ಲ! ಇವರು—ಬಡವರು ಇವರು ಸಿರಿವಂತರು ಹಿರಿಯರು—ಕಿರಿಯರು—ಜಾಣರು ದಡ್ಡರು—ಹೆಣ್ಣುಗಂಡು ಮುಂತಾದ ಪಕ್ಷಪಾತವೇ ನಿನಗಿಲ್ಲವಮ್ಮ!! ಎಲ್ಲರಿಗೆ ಸರಿಯಾಗಿ ನೆಮ್ಮದಿಯಾಗಿರುಯಮ್ಮ!! ನಿನ್ನ ಕಾಣಲಾರದ ತಾಣವೇ ಇಲ್ಲ. ಮನೆಯಲ್ಲಿ—ಮಠದಲ್ಲಿ—ಜೇಬಿನಲ್ಲಿ—ಪೇಟಿಯಲ್ಲಿ-ಪೆಟ್ಟಿಗೆಯಲ್ಲಿ ತೋಟದಲ್ಲಿ—ಹೊಲದಲ್ಲಿ-ಸಿನೇಮಾದಲ್ಲಿ—ನಾಟಕದಲ್ಲಿ ಎಲ್ಲಿ ನೋಡಿದರಲ್ಲಿ ನನ್ನ ಕಣ್ಣಿಗೆ ನೀನೆ ಕಂಗೊಳಿಸುತ್ತಿರುವೆಯಮ್ಮ!! ನನ್ನ

ಕಣ್ಣಾಗ ನೀ ಬಿದ್ದಿಯೋ; ನಿನ್ನ ಕಣ್ಣಾಗ ನಾ ಬಿದ್ದೇನೋ!
ಏನಮ್ಮ ಈಚಲ ಪುರದಮ್ಮಾ!! ನಿನ್ನ ಕಸುವಾದರು ಹಗರ
ಅನಬೇಕ. ಅಲ್ಲ-ಅಲ್ಲ ;(ಗಲ್ಲ ಬಡಿದುಕೊಳ್ಳುವನು) ಲಕ್ಷಾಪ
ಯನ್ನೋಯ್ದು ಭಿಕ್ಷಾಪತಿ ಮಾಡುವೆ. ಚಾಕರಿ ಮಾಡುವವರನ್ನ
ನೌಕರೀ ಬಿಡಿಸಿ ಇರ್ದಚೌರ ಮಾಡಿಸುತ್ತೀ! ಸೀಸೆ ತುಂಬ ನಿ
ತುಂಬಿ ಲಂಚ ಕೊಟ್ಟರ ತೀರೇಹೋತು ಆಗಿಹೋತು ಗುಡ್ಡದಂ
ದೊಡ್ಡಕೆಲಸ ಕಡ್ಡಿಗಿಂತ ಕಡಿಮಾಡಿ ಕೊಡ್ರಿಸುತ್ತಿಯೇ ಜಗದಂಬೆ
ಬಳಗಾದರೂ ಸಣ್ಣದಿದೆಯೇ? ಛೀ-ಛೀ ಛೀ (ತಲೆ ಅಲ್ಲಾಡಿಸಿ
ದಮ್ಮು-ಕೆಮ್ಮು-ಹುಚ್ಚು-ಕ್ಷಯ-ಕಾಲರಾ-ಪ್ಲೇಗು-ಕಜ್ಜಿ-ಹುಣ್ಣು
ಬಾಳಂತೀಬೇನೆ-ಹೃದಯವಿಕಾರ-ಮೂಲವ್ಯಾಧಿ,ಅಮಶೌಚ ಇವೆಲ್ಲ
ಒರೆ ನಿನ್ನ ಮಕ್ಕಳು. ಮೊಮ್ಮಕ್ಕಳು-ಗಿರಿಮೊಮ್ಮಕ್ಕಳು-ಜೇರಿ
ಸಾಸುವೆ ಮಕ್ಕಳು ಅವರಿನ್ನ ಬಾಕಿ ಅದಾರ. ಹ-ಹ-ಹ-ಹ-

॥ಪದ॥ ಎಲ್ಲಿಕಾಣೆಲ್ಲಿಕಾಣೆ ಈಚಲಮ್ಮನಂತಾಕಿನ್ನೆಲ್ಲಿಕಾಣೆ ॥

(ಅನ್ನುತ್ತ ಮಬ್ಬುಹತ್ತಿ ಮಲಗುವನು)

(ಅಷ್ಟರಲ್ಲಿ ಚಿಲುಮೆ ಬೆಂಕಿ ಪಟ್ಟ ಹಿಡಿದುಕೊಂಡ ಭಂಗೀ ಸಿದ್ಧನು ತಲೆಹಾಕುತ್ತ)

॥ಪದ॥

ಲಿಂಗಕ್ಕಿಂತ ತಂಬಾಕ ಮೆಚ್ಚು ॥
ಮಂಗನಿಗಿಂತ ನಾವೇ ಹೆಚ್ಚು ॥
ಗುಂಗಿನಲಿರುವದ ಶಿವಕೈಲಾಸ ॥
ಸಂಗಿಯು ದೊರಕಲು ನಾಪರಮೇಶ ॥

ಲಗು ಮುಕ್ತಿಬೇಕು. ಲಗು ಲಗು ಮುಕ್ತಿ ಆಗಬೇಕ ಅಂತ ಎಷ್ಟೊ
ದಾರಿಬಿಟ್ಟ ಕಡಿಬಿಡಿಕಿಗಳು ಗುಡುಗುಡು ಬಡಬಡಸತಾವ್. ಆದ
ಅದ ಎಲ್ಲಿ! ಹೆಂಗ ಸಿಕ್ಕತೈತಿ ಅನ್ನೋದೆ ಹೊಳುದಿಲ್ಲ. ನಾನು
ಹೇಳಾಕ ಹೋದರ ಹೋಗ ಹುಚ್ಚಮೂಳ ಅಂತ ತಿರುಮಂತ್ರ ನನ
ಊತ್ತಾರ. ಕಾಶಿಗೆ ಹೋಗಬೇಕಂತ ಲಂಕಿ ಹಾದಿ ಹಿಡಿದ

ಯುಗ ಹೋದ್ರು ಸಿಕ್ಕಿತೇನ್ರಪ ಕಾಶಿ. "ಜ್ಞಾನಾ ದೇವತು ಕೈವಲ್ಯಂ" ಬರೆಜ್ಞಾನದಿಂದ ಮೋಕ್ಷವ-ನಿಗೆ ಬರುತ್ತದೆಂಬುದಾಗಿ ಉಪನಿಷತ್ತುಗಳು ಗಂಟಲು ಹರಿವಾಂಗ ಚೀರಿ-ಚೀರಿ ಹೇಳತಾವ. ಅದಿಲ್ಲದ ಏನ ಲಾಗಾಹೊಡೆದರೂ ಹೊಳ್ಯಾಗ ಹುಣಸೀಹಣ್ಣು ತೊಳದಾಂಗ, ಬೂದ್ಯಾಗ ಹೋಮ ಮಾಡಿದಾಂಗ, ಗಾಳೀಕೂಡ ಗುದ್ಯಾಡಿದಾಂಗ ಮಟ್ಟಮೊದಲು ಕಟ್ಟಕಡಿಗಿ ಜ್ಞಾನಾ ಸಂಪಾದಿಸೋದೆ ಮನಿಸ್ಯಾನ ಕೆಲಸ. ಗ್ಯಾನ ಹೋಡಲಾಕ ಒಂದೇ ಒಂದು ಸಾಧನ ಐತಿ. ಕೈಹಿಡಿದರ ವೈಹಾಂಗ ಸಿಗತೈತಿ ಹಂಗ ಇದರಿಂದ ಗ್ಯಾನ ಸುದ್ದಿ ಸಪ್ಪಳ ಇಲ್ಲದನ ಸಿಗುತ್ತದ. ಸಂಸ್ಕೃತದಾಗ ನಮ್ಮಂತ ಸಿದ್ಧರು ಇದಕ "ಜ್ಞಾನವಲ್ಲೀ" ಅಂತ ಕೂಗತಾರ ಕಚ್ಚಗನ್ನಡದಾಗ ಬಿಚ್ಚಿದರ ಹೊಗೆಸೊಪ್ಪು ಅದತಪ್ಪಿದರೆ ತಂಬಾಕ ಅಂತಾರ. ಇವರಾಗ ಒಂದಿಟ ಕಡಿಮಿ ಹೆಚ್ಚ ಮಾಡಿಕೊಂಡರ ಆಗತೈತಿ ಭಂಗೀ. "ಹಿಂದೀಮೆ ಕಹಾ ಜಾತಾಹೆ ಕಿ ಭಾಂಗ" ಇದ ಹಿಂದೀ ಮಾತಿಗೆ ಹೋದ್ರ ಭಾಂಗ ನೋಡ್ರಿ. ವಿರತಿ ಹುಟ್ಟಸುವಂತ ಇದರ ಸರಿ ಜೀನಸ ಇದು ತನಕ ಕೇಳಿಲ್ಲ ಕಾಣಾನಿಲ್ಲ. ಶಿವನು ಕೈಲಾಸ ಬಿಟ್ಟ ಜಗದ ಹಡದಾಕಿ ಅದಾಳಲ್ಲ ಪಾರತಮ್ಮ ಆಕಿನ್ನೂ ಬಿಟ್ಟ ಎದ್ದ. ಹರೇದ ಎತ್ತು ಮುತ್ತಿನಂತ ಮಕ್ಕಳು ಎಲ್ಲಾ ಬಿಟ್ಟು ಕೊಟ್ಟ. ಯಾಕ ಬಿಟ್ಟಾ! ಗೊತ್ತಾತ್ರ ಭಂಗೀ ಸೇದಿದ ಗುಂಗು ಹೆಚ್ಚಾಗಿ ಇವನ್ನೆಲ್ಲಾ ಬಿಟ್ನರ್ರಿ. ಈಟೊಂದು ರುಚಿಕಟ್ಟು ಎದರಾಗೂ ಹುಟ್ಟಲಿಲ್ಲಂತ ಕಂಡು ಎಲ್ಲಾ ತೊರದು ಬೈರಾಗಿ ಆದ. ಒಂದು ವ್ಯಾಳ್ಯೆ ಇದು ಇಲ್ಲದಿದ್ದರ ಅವನೇನು ಬಿಟ್ಟಪ್ಪೇನ್ರಿ? ವೈರಾಗ್ಯ ಬಂದು ಬೈರಾಗಿ ಆಗಬೇಕಂದರೆ ಇವನ ಬಿಟ್ಟರ ಬೇರೆ ಹಾದೀನ ಇಲ್ಲ. ಇವನ ಒಂದ ಜುರಿ ಎಳೆದರ ಸ್ವರ್ಗ, ಎರಡನೇ ಜುರಿಗೆ ಇಟೋಬನ ವೈಕುಂಠ, ಮೂರನೇ ಜುರಿ ಜಗ್ಗಿದರ ಮುಕ್ಕಣ್ಣನ ಆಗತಾನ, ನಾಲ್ಕರ ಜುರಿ ದಾಟಿತಂದರ ತಾನತಾನಾಗಿ ತಲೀನ ಹಾಕತಾನ. ಈಗಂತೂ ಹೊಗೆಸೊಪ್ಪು ಚಪ್ಪರಿಸುವವರು ಎಲ್ಲಿ ಹೋದರೂ ಎಲ್ಲಿ ನೋಡಿದರೂ ಬೆಳೆದಾರ್ರಿ. ಸೇದಿದಬಾಯಿ ತೆರದರ ಗೊಮ್ಮ-ಗೊಮ್ಮ ಅನ್ನೋ ಸುವಾಸಿ

ನಿಗಿ ಮೊಸಳಿ ಸುದ್ದಾ ಮಾರೀ ತೆರೆಯುತ್ತಿ. ಇರಲಿ! ನಾನಂತೂ ಚಿನ್ನಾ ಕಂಡೆ, ರನ್ನಾ ಕಂಡೆ, ಮುತ್ತು ಕಂಡೆ, ಮಾಣಿಕ ಕಂಡೆ, ಹುತ್ತಿನಂಥ ಈ ಬತ್ತಿ ಕಂಡೆ, ಥಾಗೀ ಮುಪ್ಪೀನೂ ಉಂಡೆ.

॥ಪದ॥

ಚಿಲುವೆಯೊಂದೆ ಸಾಕು ॥
ಇದಕ ಭಂಗಿ ಬೇಕು ॥೧॥
ಒಲವು ಬಲವು ಛಲವು ॥
ಚಿಲುವೆಯಿಂದ ಗೆಲವು ॥೨॥

ಭಂಗಿಯನ್ನೂ ಸುರೆಯನ್ನೂ ಅವರವರಿಗೆ ಕೊಡುತ್ತ ಜಗನ್ಮೋಹಿನಿ ನೃತ್ಯ ಜರುಗವದು. ನಟಿಗೆ ಹಣದ ಸುರಿಮಳೆಯಾಗುವದು.

(ತೆರೆ ಬೀಳುವದು)

೩ನೇ ಪ್ರವೇಶ

ಸ್ಥಳ— ಕೊಲ್ಲಾಪುರದ ಬೀದಿ.

(ತಿರುಕನೊಬ್ಬನು ಪದ ಹೇಳುತ್ತ ತಿರುಪೆಗಾಗಿ ಅಲೆಯುತ್ತಲಿದ್ದಾನೆ)

ಪದ–ರಾಗ–ಮಾಂಡ ತ್ರಿತಾಳ

ನಿನ್ನ ನಾಮ ನೆನೆವೆ ನಟೇಶ ||ಪ||

ಭಾವಜ ಭಂಜನ | ಭಕ್ತ ವಿತಾನ ||
ಪಾವನ ಚರಣ | ಕಲಿಸಂತರಣ ||೧||

ಭವತಿ ಭಿಕ್ಷಾಂದೇಹಿ, ಭವತಿ ಭಿಕ್ಷಾಂದೇಹಿ. ತಾಯಂದಿರೇ ಭಿಕ್ಷೆಯ ನೀಡಿರಮ್ಮ! ಭಿಕ್ಷಾಕೊಡಿರಿ. ನಿನ್ನೆಯಿಂದ ಅನ್ನವಿಲ್ಲದೆ ಕಂಗೆಟ್ಟಿರುವೆನು. ಹಸಿದ ಹೊಟ್ಟೆಗೆ ತುತ್ತು ಅನ್ನವ ಇಕ್ಕಿದರೆ ಪಶುಪತಿಯು ಪ್ರಸನ್ನನಾಗುವನು. ಮಕ್ಕಳು ಮೊಮ್ಮಕ್ಕಳು ಭಾಗ್ಯಶಾಲಿಗಳಾಗಿ ಬದುಕುವರಮ್ಮಾ!! ದಯಮಾಡಿ ಅನ್ನವನ್ನು ನೀಡಿರಿ. ಅನ್ನಪೂರ್ಣಮ್ಮನವರೆ ಅನ್ನವಕೊಡಿರಿ. ಹುಟ್ಟಿಕೊಡಿರಿ ಕೊಟ್ಟು ಪಡೆಯಿರಿ. ಭವತಿ ಭಿಕ್ಷಾಂದೇಹಿ!!!

(ಇಷ್ಟರಲ್ಲಿ ಭೈರವನೊಬ್ಬನು ಬರುವನು)

ಭೈರವ— ಏ ಗೊರವಾ! ಮಾಯಾರಾಣಿಯ ಪಟ್ಟಣದಲ್ಲಿ ತಿರುಪೆಗೆ ಬಂದೆಯಾ? ಯಾರಾದರೂ ಹೇಳಿಕೊಟ್ಟರೆ? ಅಥವಾ ನೀನೆ ಬಂದೆಯೋ? ಬಹಳ ಯಡ್ಡ ಇದ್ದಹಾಗಿದೆ ಯಡ್ಡ.

ತಿರುಕ— ತಿರುಕರಿಗೆ ಹಳ್ಳಿಯಾದರೇನು? ದಿಳ್ಳಿಯಾದರೇನು? ಊರೆಲ್ಲ ಕೊಳ್ಳೆಹೊಡೆದುಕೊಳ್ಳಿಹ ಚ್ಯಾಕ ನಾವೇನಾದರೂ ಬಂದಿರುತ್ತೇವೆಯೇ? ಕನಿಕರವಿದ್ದವರು ಹಿಡಿಜೋಳಾ ನೀಡುವರು. ತುತ್ತು ಅನ್ನ ಕೊಡುವರು. ರೊಟ್ಟಿ ಚೂರಾದರೂ ಕಡೆಗೆ ನಮ್ಮ ಪದರಿಗೆ ಬೀಳುವದು. ಕೊಟ್ಟರೂ ಶಿವಾ! ಕೊಡದಿದ್ದರೂ ಶಿವಾ! ಚೋಟು ಹೊಟ್ಟೆ ಕಾಲಾ

ಗಲ್ಲ ಈ ಕಿಟಿ ಕಿಟಿ. ಉಪ್ಪರಿ ಕೊಟ್ಟವರ್ಪ್ಹಾಂಗ ಏನು ಗಪ್ಪರಸ್ತಿಯ
ಮಾರಾಯಾ !!

ಭೈರವ— ಥೂ ಬಾಯಿಗೆ ಬಂದಂತೆ ಬೊಗಳುವ ಕುನ್ನಿಯೇ ! ಸಿದ್ಧರ ಇ
ಕೆಯು ಎಳ್ಳಷ್ಟಾದರು ಇಲ್ಲದೆ ತಿರುಗಿ ಉಪದೇಶ ಹೇಳಲು ಬಂದಿ
ವೆಯಾ ? ತಗಣಿಒರಸಿದಂತೆ ಒರಸೇನು ? (ಜೋಳಿಗೆ ಕಸಿ
ಕೊಂಡು ಏಟು ಹಾಕುವನು)

ತಿರುಕ— ಅಯ್ಯಯ್ಯೋ ಕಾಲಿಗೆ ಬೀಳತೇನ್ರಿ ನನಗೆ ಗೊತ್ತಾಗಲಿಲ್ಲ
ಇಕಾಡಿಯವನಲ್ಲ ಕಿತ್ತೂರು ಕಡೆಯವನರಿ. ದಮ್ಮಯ್ಯ ! ನಿ
ಜೊಚ್ಚಲು ಮಗನರಿ. ನಾನ್ಯಾರಿಗೂ ಏನಂದಿಲ್ರಿ. ಮಾಡಿಲ್ಲ
ಹೋಗತೇನಿ ಬಿಟ್ಟುಬಿಡಿರಿ. (ಕಾಲಿಗೆ ಬೀಳುವನು)

ಭೈರವ— ಯೋಗ್ಯ ಭಿಕ್ಷೆಯಾಗಬೇಕು ಯೋಗ್ಯ ಭಿಕ್ಷೆ. ದಯಾಧರ್ಮ
ಯೋಗ್ಯ ಶಿಕ್ಷೆಯಾಗಬೇಕು. (ಬೂದಿ ಮಂತ್ರಿಸಿ ಚಲ್ಲಲು ತಿರುಕ
ಕಲ್ಲಾಗುವನು) ನಿಂತಿರು. ಕಲ್ಲಾಗಿ ಬೇಕಾದಷ್ಟು ಬಿಕ್ಕೆ ಸಿಕ್ಕುವ
(ಎದೆತಟ್ಟುತ್ತ) ಈ ಸಿದ್ಧನ ಸಮ್ಮುಖದಲ್ಲಿ ನಿಂತು ಸರಸವಾಡಿ
ಪ್ರತ್ಯಕ್ಷ ಪರಮೇಷ್ಠಿಗಾದರೂ ಉಳಿಗಾಲವಿಲ್ಲ, ಹುಲ್ಲು ಹುಳ
ಪಾಡೇನು? (ಹೋಗುವನು)

——

೪ ನೇ ಪ್ರವೇಶ

ಸ್ಥಳ- ಹಳ್ಳಿಯ ಓಣಿ

(ಗೆಳತಿಯರೀರ್ವರು ಮಾತಾಡುತ್ತಲಿರುವರು)

(ವಿಧವೆ ಸರಳಾ ಚಂಪೆಯನ್ನು ಗುಡಿಗೆ ಕರೆದೊಯ್ಯಲು ಬಂದಿರುವಳು)

ಸರಳಾ— ಚಂಪಾ ! ಹೊರಗಿರುವ ಈಶ್ವರನ ಗುಡಿಯಲ್ಲಿ ಸಾಧುಗಳು ಬಂದಿರುವರಂತಲ್ಲೇ ?

ಚಂಪಾ— ಬಂದಿರುವರೆಂದು ಕೇಳಿದ್ದೇನೆ ಸರಳಾ !

ಸರಳಾ— ಜನ ಜಾತ್ರೆಯಂತೆ ! ಅಲ್ಲಿ !! ಊರಿನವರು ಬರುವದೂ ಹೋಗುವದೂ ಸಾಗಿಯೇ ಇದೆ.

ಚಂಪಾ— ಜನ ಮರುಳೋ ! ಜಾತ್ರೆ ಮರುಳೋ !! ನೀನೂ ಅಲ್ಲಿಗೆ ಹೊರಟಹಾಗೆ ತೋರುತ್ತೆ.

ಸರಳಾ— ಹೌದು. ಕರೆದುಕೊಂಡು ಹೋಗಲಿಕ್ಕೆ ಬಂದಿದ್ದೇನೆ. ಬಾರೆ ! ಹೋಗೋಣ.

ಚಂಪಾ— ಗಂಡುಳ್ಳ ಗರತಿಯರು ಹೊಸ್ತಿಲದ ಹೊರಗೆ ಕಾಲು ಇಡ ತಕ್ಕದ್ದೇ ಅಲ್ಲ !

ಸರಳಾ— ಅಲ್ಲಿಗೆ-ಇಲ್ಲಿಗೆ ಹೋಗತಕ್ಕದ್ದಲ್ಲ. ದೇವರ ದರ್ಶನಕ್ಕೆ ಹೋಗ ಲಿಕ್ಕೇನು ?

ಚಂಪಾ— ಸಾಧುವಿದ್ದಾನಲ್ಲೆ, ಅಲ್ಲಿ ಕುಲಶೀಲ ಗೊತ್ತಾಗದೆ ತಲೆಬಾಗು ವದು ನನ್ನಿಂದ ಆಗದಪ್ಪ !!

ಸರಳಾ— ಸಾಧಾರಣ ಸಾಧುವಲ್ಲಂತೆ ಇವನು, ಮಕ್ಕಳಿಲ್ಲದವರಿಗೆ ಮಕ್ಕಳ ಕೊಡುವನಂತೆ ! ಬೇನೆ ಇದ್ದರೆ ಮದ್ದು ಕೊಡುವನಂತೆ ! ಗಂಡು

ಹೆಂಡಿರು ಹೆಚ್ಚು ಕಡಿಮೆ ಆದರೆ ಸರಿಗೊಳಿಸುವನಂತೆ. ಕೈ ನೋಡಿ ಆಗು ಹೋಗುಗಳನ್ನು ಹೇಳುತ್ತಿರುವನಂತೆ ನೂರಕ್ಕೆ ನೂರು ನಿಜವಾಗುತ್ತಿರುವವೆಂದು ಊರು ತುಂಬ ಸುದ್ದಿ ಹರಡಿದೆ.

ಚಂಪಾ— ಆ ಕೆಡುಕ ಹಾಳುಸಿದ್ದರ ಹಾವಳಿ ಕೇಳದ್ದಿಯೋ! ಇಲ್ಲೋ!! ಲೆಕ್ಕ ಹತ್ತದಷ್ಟು ಗರತಿಯರನ್ನು ಸದ್ದಿಲ್ಲದೆ ಎಗರಿಸಿದ್ದಾರಂತೆ! ಅವರು ಹೀಗೆ ಬಂದಾಡು, ಬರಲಿಕ್ಕಿಲ್ಲ ಅನ್ನುವಹಾಗಿಲ್ಲ ಸರಳಾ !!

ಸರಳಾ— ನಾನಿರುವಾಗ ನಿನಗೇನೆ? ಅಂಜಿಕೆ! ಹೋಗಿ ನೋಡಿದರೆ ಒಳಗಿನದೂ ಹೊರಗಿನದೂ ಬಣ್ಣವು ಬೈಲಿಗೆ ಬೀಳುವದು.

ಚಂಪಾ— ಯಾಕೋ ಅಲ್ಲಿಗೆ ಎಂದರೆ ಎದೆ ದಡಗುಟ್ಟಿ ನಡಗುತ್ತಿದೆ.

ಸರಳಾ— ರೂಪವು ಹೆಚ್ಚಿದ್ದಂತೆ ನಿನ್ನಲ್ಲಿ ಪುಕ್ಕತನವೂ ಬಲವಾಗಿ ಬೇರೂರಿದೆ. ಏನೇನೋ ಸಂದೇಹ!

ಚಂಪಾ— ನಡೆಯವ್ವಾ ನಡೆ. ಬೇಗಬಂದು ಬಿಡಬೇಕು ನೋಡು!!

ಸರಳಾ— ಹಾಗೇ ಮಾಡೋಣ. ಸರಕ್ಕನೆ ಹೋಗಿ ಭರಕ್ಕನೆ ಬರೋಣ!
(ಹೋಗುವರು)

೫ನೇ ಪ್ರವೇಶ

ಸ್ಥಳ— ಶಿವದೇವಾಲಯ.

(ಸಾಧು ಕೂತಿರುವನು ಬಳಿ ಒಬ್ಬರೂ ಇಲ್ಲ. ಜನರು ಬರುತ್ತಿರುವದನ್ನು ಕಂಡು "ಭಂ-ಭಂ-ಕಾಳೀ-ಭಂ-ಭಂ-ಕಾಳೀ" ಅನ್ನ ಹತ್ತುವನು)

ಸರಳಾ— ಸಾಧುಗಳಿಗೆ ನಮಸ್ಕಾರ (ಕೈ ಮುಗಿಯುವಳು ಚಂಪಾ ಸರಳೆಯ ಹಿಂದೆ ಸುಮ್ಮನೆ ನಿಂತಿದ್ದಾಳೆ)

ಸಾಧು— ಅಷ್ಟಪುತ್ರ ಸೌಭಾಗ್ಯವತೀಭವ!

ಚಂಪಾ— ಸಾಧುಗಳೇ ಇವಳ ಯಜಮಾನರು ತೀರಿಕೊಂಡು ನಾಲ್ಕೈದು ವರ್ಷಗಳಾದವು. ಎಂಟು ಮಂದಿ ಮಕ್ಕಳಾಗಲೆಂದು ಹರಕೆ ಕೊಟ್ಟಿರಲ್ಲಾ !! (ನಗುವಳು)

ಸಾಧು— ಅಷ್ಟಪುತ್ರರಾಗದಿದ್ದರೂ ಅಷ್ಟಮಿತ್ರರಂತೂ ಆಗೇಬಿಡುವರು.

ಚಂಪಾ— ಮಿತ್ರರೆಂದರೆ........

ಸಾಧು— ಪುತ್ರ ಮತ್ತು ಮಿತ್ರ ಶಬ್ದಗಳು ಒಂದೇ ಲಿಂಗವಾಗಿರುವವು. ಈ ಸಿದ್ಧರ ಹರಕೆಯಿಂದಸತ್ತವರು ಮರಳಬಹುದು. ಇದ್ದವರು ತೆರಳಬಹುದು.

ಸರಳಾ— ಕೂತುಕೊಳ್ಳೇ ಚಂಪಾ. (ಕೂಡ್ರುವರು) ಮಲಗಿದಾಗ ರಾತ್ರಿ ಕೆಟ್ಟ ಕೆಟ್ಟ ಕನಸು ಬಿದ್ದು ಹೆದರಿಕೆ ಬಂದು ಜ್ವರಬರುತ್ತವೆ. ಕೊಂಚ ಬೂದಿ ಮಂತ್ರಿಸಿ ಕೊಡುತ್ತೀರಾ ?

ಸಾಧು— ನಾಡೀ ನೋಡಬೇಕು. ಕೈ ತಾರಮ್ಮ (ಕೈ ಕೊಡುವಳು, ನಗುವಳು) ನಿನ್ನ ಹೆಸರು ಏನು ?

ಸರಳಾ— ಸರಳಾ

ಸಾಧು— ಹೆಸರಿನಹಾಗೆ ಬೇನೆಯೂ ಸರಳವಿದೆ. (ನೋಡಿ) ಈಕೆ ಯಾರು?

ಸರಳಾ— ನನ್ನ ಗೆಳತಿ?

ಸಾಧು— ಹೆಸರು

ಸರಳಾ— ಚಂಪಾ

ಸಾಧು— (ಸ್ವಗತ) ಆಹಹ!! ಏನು ಸೌಂದರ್ಯವಿದು. ಮಾಯಾರಾಣಿ ಗಿಂತಲೂ ಒಂದು ಗುಂಜಿ ಹೆಚ್ಚಿಂದೇ ಹೇಳಬೇಕು ಇವಳ ಅಂಗವನ್ನು ಸಂಗಿಸದ ಜನ್ಮವು ಭಂಗ!!! (ಯೋಚಿಸಿ) ಹಾ. ಹೀಗಾದರೆ ಕಸ್ತೂರಿ ಕೈಯಲ್ಲಿಯೆ. (ಪ್ರಕಟ) ನಿನ್ನ ಗೆಳತಿಯ ಹೆಸರ ರಂಜಕವಾಗಿದೆ.

ಚಂಪಾ— ಹೊತ್ತಾಯಿತು ಹೋಗೋಣೇಳೇ! ಸರಳಾ!

ಸಾಧು— (ಸ್ವಗತ) ಬೇಟೆ ಬಲೆಯಿಂದ ಜಾರುವಂತಿದೆ. (ಪ್ರಕಟ) ಸರ ಳಮ್ಮಾ ಈ ಬೂದಿ ದಿನಾಲು ಮೈಗೆ ಸವರಿಕೊಂಡು ಮಲಗು! ಸರಿ ಹೋಗುವದು. ಚಂಪಾ, ಕಾಳಿಕಾ ಪ್ರಸಾದದ ಕುಂಕುಮ ಕೋ ಅಮ್ಮ, ಹಣೆಗೆ ಇಟ್ಟುಕೊ!! (ತೆಗೆದುಕೊಂಡು ಹಣೆಗೆ ಹಚ್ಚಿಕೊ ಳ್ಳಲು ಗಿಳಿಯಾಗುವಳು)

ಸರಳಾ— ಅಯ್ಯೋ ಸಾಧು ಚಂಪೆಯನ್ನು ಗಿಣಿ ಮಾಡಿದೆಯಲ್ಲಾ! ನನ್ನ ಮಾತ್ರ ಮಾಡಬೇಡಪ್ಪ ಕಾಲಿಗೆ ಬೀಳುವೆನು. (ಬಾಗುವಳು)

ಸಾಧು— (ಕೈ ಹಿಡಿವೆತ್ತಿ ಕೆನ್ನೆ ಕುಲುಕಿ) ನೀನು ಸರಳ ಇರುವಿ ಎಂದು ಆಗ ಹೇಳಲಿಲ್ಲವೇ? (ಮುದ್ದಿಸುವನು) (ಸರಳಾ ಸಾಧು ಕೈಬ್ರಾಸ್) (ಜೋಳಿಗೆಯಲ್ಲಿ ಗಿಳಿ ಇಟ್ಟುಕೊಂಡು ಹೊರಡುವನು. ಸರಳೆ ಬೆನ್ನು ಹತ್ತುವಳು)

ಸ್ಥಳ— ಕೊಲ್ಲಾಪುರ, ಪಕ್ಕದ ಅರಣ್ಯ

(ಮರುಳಸಿದರು ಬರುವರು. ಒಬ್ಬನು ಹಿಂಬಾಲಿಸುವನು)

॥ ಪದ ॥ ರಾಗ ಕಲ್ಯಾಣಿ ಆದಿತಾಳ.

ಮನದಲಿ ಶಿವಯೋಗವ ಬಲಿಸುವದೈ । ಬಲಿಸುವದೈ । ವನಚರಿಸುವದೈ ॥ ಪ ॥
ತನ್ನಾತ್ಮೋನ್ನತಿ । ಯನ್ನು ವರ್ಧಿಸುತ । ಉನ್ನತ ಶಿವಸೌಖ್ಯವ ಪಡೆಯುವದೈ ॥೧॥

ಕನ್ನಡ ನಾಡಿನ ಎಣೆಯಿಲ್ಲದ ಸರ್ವಾಂಗ ಸುಂದರ ಸಂಸ್ಕೃತಿಯು ಜಗತ್ತಿಗೆ ಸನ್ಮಾರ್ಗದರ್ಶಕ ದೀಪವಾಗಿರುವದು. ಅಮರವಾದ ಶಿವ ಸಿದ್ಧಾಂತದ ಮಾದರಿಯ ಮೂರ್ತಿಯಾಗಿರುವದು. ಇಲ್ಲಿಯ ನಿಸರ್ಗದ ಸೊಗಸು ಅನಂತ ಶಿವಸೌಂದರ್ಯದ ಪಡಿನೆಳಲಂತೆ ತುಂಬ ಮನೋಮೋಹಕವಾಗಿರುವದಲ್ಲವೇ ? ನಿರಂಜನ !!

ನಿರಂಜನ— ಹೌದು ಮಹಾಸ್ವಾಮಿ

ಮರುಳಸಿದ್ಧ— ಇಂಥ ರಮಣೀಯ ಸ್ಥಾನಗಳು ಶಿವಯೋಗ ಸಂಪನ್ನತೆಗೆ ಸಂಪೂರ್ಣ ಸಹಕಾರಿಯಾಗುವವು ಜಗದ್ರೂಪವಾಗಿ ರಾರಾಜಿಸುತ್ತಿರುವ ಘನಲಿಂಗ ದೇವನ ಸಾಕಾರ ಸೌಂದರ್ಯವೇ ಇನಿತು ಪರಮಾನಂದಕರವಾಗಿರುವದು. ಇದರ ಹಿನ್ನೆಲೆಯಲ್ಲಿರುವ ಮೈ-ಮನಾತೀತ-ಮನಂಗಳತ್ತತ್ತ ನಿರಾಕಾರವಾಗಿ ಉಪಮಿಸಲುಬಾರದ ಸಾಂಬನ ಸುವಿತ್ಸೌಂದರ್ಯವು ಇನ್ನೆಷ್ಟು ಸುಂದರವಾಗಿರಬೇಕು ಸಂತೃಪ್ತಿಕರವಾಗಿರಬೇಕು. ಇದರ ಅನುಭವವಿಲ್ಲದ ಹೃದಯವೂ ಅರಿಯದ ಬುದ್ಧಿಯೂ ಲೋಕದೊಳಗೆ ಇದ್ದೂ ಇಲ್ಲದಂತೆ! ಸತ್ಯ-ಸಮ್ಯಗ್-ಜ್ಞಾನ-ಸೌಂದರ್ಯಗಳ ಮೃದು ಮಧುರ ಮಿಲನವೇ ಲಿಂಗಾಂಗ ಸಮರಸ. ಇದುವೆ ಶಿವಶಕ್ತಿಯರ ಸಂಯೋಗ. ಆರುರಸಗಳ ರುಚಿಯನ್ನು ನಾಲಿಗೆಯೂ ಕಾವ್ಯರಸದ ಸೊಬಗನ್ನು ರಸಿಕನೂ ಕುಸುಮಸಾರವನ್ನು ಭ್ರಮರಗಳೂ ಸುಧೆಯ ಸ್ವಾರಸ್ಯವನ್ನು ಸುರರೂ ತಿಳಿಯಲು ಶಕ್ತರಾಗಿರುವಂತೆ ಸಾಧನದಸಿದ್ಧಿಯಾದ ಆತ್ಮನು ಪರಮಾತ್ಮನಾದಾಗ ಈ ಬಗೆಯ ಅನಂತಾನುಭವವು ವೇದ್ಯವಾಗುವದು. ಆದರೆ ಮಾಯಾಪ್ರಪಂಚದ ಬಂಧನಗಳು ವಜ್ರದಹಾಗೆ ಬಹು ಕಠಿಣವಾಗಿರುವವು. ಅಜ್ಞಾನದ ಅಂಧಕಾರವು ನಿಬಿಡವಾಗಿರುವದು. ಚಕ್ಷುರಾದೀಂದ್ರಿಯಗಳ ಚಾಪಲ್ಯವು ಪ್ರಳಯಾಗ್ನಿಗೆ ಸಮಾನವಾದ

ದಾಗಿರುವದು. ಪ್ರಲೋಭಗಳ ಸೆಳೆತವು ನಿವಾರಿಸಲು ಬಾರದಾಗಿರುವದು. ಮಾಯಾ ಬಂಧನಗಳ ಗಹನದುರ್ಭೇದ್ಯವಾದ ನಿಬಿಡಾರಣ್ಯವನ್ನು ಕೊಚ್ಚಿಹಾಕಲು ಪರಶುರಾಮನ ಕುಠಾರದಂತಿರುವ ಆತ್ಮಶಕ್ತಿಯು ಅಗತ್ಯವಾಗಬೇಕು. ಅವಿಶ್ರಾಂತ ಸಾಹಸವೂ ಬೇಕು. ದೃಢವಾದ ಏಕಾಗ್ರತೆಯೂ ಬೇಕು. ನಿರಂತರ ಸಾಧನದಿಂದಲ್ಲದೆ ಸಿದ್ಧಿಯು ಲಭಿಸಲಾರದು. ಕೇವಲ ಸೌಜನ್ಯವು ಸಿದ್ಧಿಯ ಸಹಜ ಲಕ್ಷಣವಾಗಿರುವದು. ಈ ಬಗೆಯಾಗಿ ಮಾನವನನ್ನು ಮಹಾದೇವನನ್ನಾಗಿ ಮಾಡಬಲ್ಲ ಸಾಧನ ಸಮಷ್ಟಿಯು ಶಿವಯೋಗವೇ ಆಗಿರುವದು. ಶಿವಮತೋತ್ಪಾದಕರಾದ ಶ್ರೀಮಜ್ಜಗದ್ಗುರು ರೇಣುಕಾದಿ ಮೂಲ ಪಂಚಾಚಾರ್ಯರು ಸರ್ವದಾ ಶಿವಯೋಗ ಸಮಾಧಿಯಲ್ಲಿ ತನ್ಮಯರಾಗಿರುತ್ತಿದ್ದರು. ನಾವು ಇನ್ನು ಕೆಲವು ಕಾಲ ಶಿವಯೋಗಾನುಸಂಧಾನದಲ್ಲಿ ತಲ್ಲೀನರಾಗುವೆವು. ನಿರಂಜನಾ !! ನೀನು ಮಾತ್ರ ಒಲು ಜೋಕೆ !!

ನಿರಂಜನ— ಅಪ್ಪಣೆ ಮಹಾಪ್ರಭೋ !

(ಮುರುಳಸಿದ್ಧರು ಧ್ಯಾನಾಸನದಲ್ಲಿ ಮುಹೂರ್ತ ಮಾಡುವರು).

। ಪದ ॥ ರಾಗ— ಮೂಲಕಂಸ-ಆದಿತಾಳ

ಶಿವ ಶಿವ ಶಿವ ಹರ ಶರಣಾಗಿರುವೆನು ॥
ಭವ ಹರ ಶಂಕರ ಪಾರ್ವತೀಪತೆ ಹರ ॥
ಶಿವನೇ ನನ್ನೊಳು । ನಾನೇ ಶಿವನೊಳು ।
ಶಿವಜೀವರ ಸಮರಸವದು ಸಹಜ ॥
ಗರಧರ । ಗಿರಿವರ । ಶಶಿಧರ । ಪುರಹರ ॥೧॥

(ಧ್ಯಾನಸ್ಥರಾಗುವರು—ನಿರಂಜನ ಹಿಡುವನು)

ದ್ವಿತಿಯಾಂಕ ಸಮಾಪ್ತಂ

ತೃತೀಯಾಂಕ

೧ ನೆಯ ಪ್ರವೇಶ

ಸ್ಥಳ— ಮೋಹನಾಲಯ (ದರ್ಬಾರು)

ವಂದಿ ಮಾಗಧರೊಂದಿಗೆ ಮಾಯಾ ಮಂಟಪ ಪ್ರವೇಶ. ಸೇನಾನಾಯಕರ ಮಂತ್ರಿಗಳ ಖಡ್ಗ ರಚಿತ ಮಾರ್ಗವಾಗಿ ಮಾಯಾ ಪೀಠವನ್ನು ಆರೋಹಿಸುತ್ತಾಳೆ ಅನಂತರ ಖಡ್ಗಾಭಿವಂದನ.

ವೈಭವ ವಿಲಾಸದಿಂದ ಮಾಯಾರಾಣಿ ಕೂತಿರುವಳು. ಎಡಬಲದಲ್ಲಿ ರೋಹಿಣಿ ನಾಗವೇಣಿಯರು ನಿಂತು ಬೀಸಣಿಗೆಯಿಂದ ಗಾಳಿಹಾಕು ತ್ತಿದ್ದಾರೆ ಮುಖ್ಯ ಮಂತ್ರಿ ಶಿಲಾಸಿದ್ಧ ಮೊದಲಾದವರು ತಮ್ಮ ತಮ್ಮ ಆಸನಗಳಲ್ಲಿ ಕುಳಿತಿರುವರು. ಮಾಯಾ ರಾಣಿಯು ಕೈ ಕಪಾಲವನ್ನು ಮಂತ್ರಿಸಿ ಸಭಾಂಗಣ ಮಧ್ಯದಲ್ಲಿ ಚಲ್ಲಲು ಅಲ್ಲಿಯೆ ವ್ಯಾಧ ನೃತ್ಯ ಕಾರನು ಅವಿರ್ಭವಿಸುವನು. ನೃತ್ಯವು ಆರಂಭವಾಗುವದು. (ನೃತ್ಯವು ಮುಗಿದ ತಕ್ಷಣ ನರ್ತಕನು ಮಾಯವಾಗುವನು)

ಶಿಲಾಸಿದ್ಧ— ದೇವಿಯವರ ಅಗಣ್ಯ ಲಾವಣ್ಯದ ರಾಶಿಯನ್ನು ಸಂದರ್ಶಿಸಿ ಪುಣ್ಯವಂತರಾಗಬೇಕೆಂದು ಈ ದಿನ ಸಿದ್ಧರ ಪರಿಶಿಯೇ ನೆರೆದಿರುವದು

ನಾಗವೇಣಿ— (ಶಿಲಾಸಿದ್ಧನನ್ನು ಕಡೆಗಣ್ಣಿನಿಂದ ನೋಡಿ) ಭಗವತಿ ! ಮಧುರ ವಚನದಿಂದ ಸಕಲರನ್ನು ಸಂತೋಷಪಡಿಸು.

ಮಾಯಾರಾಣಿ— ಸಿದ್ಧಸಮೂಹವೇ ಯಶಸ್ವಿಯಾದ ನಿಮ್ಮ ಆಳ್ವಿಕೆಯಲ್ಲಿ ಸರ್ವವು ಸುರಕ್ಷಿತವಾಗಿರುವದೇ ?

ಸಿದ್ಧರು— ದೇವಿ ! ದರ್ಪಕ್ಕೆ ದಾರಿ ದೀವಿಗೆಯಾದ ತಮ್ಮ ಪ್ರತಾಪದಿಂದ ಸಕಲವು ಸುಲಭವಾಗಿರುವದು. ಸರಾಗವಾಗಿರುವದು, ಕರವೀರ ಪುರವ ಪ್ರಾಂತವನ್ನು ವೈರಿಗಳು ಸ್ವಪ್ನದಲ್ಲಿ ಸಹಸ್ಮರಿಸದಂತಾಗಿರುವದು.

ಮಾಯಾರಾಣಿ— ಸಂತೋಷ ! ವಿಷಕುಂಭ ಪಾನಕ್ಕೆ ಈ ದಿನ ಯಾರಾದರೂ ಬಂದಿರುವರೇ ?

ಶಿಲಾಸಿದ್ಧ-- ಯಾರೂ ಇಲ್ಲ.

ಮಾಯಾರಾಣಿ-- ವಿಶಿಷ್ಟ ಘಟನೆಗಳು ರಾಜ್ಯದಲ್ಲಿ ಸಂಘಟಿಸಿದರೆ ತಕ್ಷಣ ಅರಿಕೆ ಮಾಡಿಕೊಳ್ಳಬೇಕು. ಆಲಸ್ಯ ಮಾಡಲಾಗದು, ತಿಳಿಯಿತೆ; ಶಿಲಾಸಿದ್ಧ ಮಂತ್ರಿಗಳೇ !

ಶಿಲಾಸಿದ್ಧ— (ಎದ್ದು ನಿಂತು) ಆಜ್ಞೆಯಂತೆ ನಡೆದುಕೊಳ್ಳುವೆನು.

ಸಿದ್ಧರು— ಮಾಯಾರಾಣಿಯವರಿಗೆ ಗೆಲುವಾಗಲಿ !!

ತೆರೆ ಬೀಳುವದು

—o—

೨ ನೆಯ ಪ್ರವೇಶ

ಸ್ಥಳ— ವಸಂತೋದ್ಯಾನ.

(ನಿರಂಜನನು ಓಡೋಡಿಬರುವನು.)

ಸಾಕಪ್ಪಾ ! ಸನ್ಯಾಸಿ ಸಹವಾಸ !! ದೊಡ್ಡ ಊರಿಗೆ ದೊಡ್ಡ ಭಕ್ತರ ಮನಿಗೆ ಹೋಗುತ್ತಾನೆ ಅಂತಾ ಲೆಕ್ಕಾ ಹಾಕಿ ನಾ ಬೆನ್ನುಹತ್ತಿದರೆ ಕಲ್ಲು ಕೂತ ಹಾಗೆ ಮಾರಾಯಾ ಅಡಿವ್ಯಾಗನ ಕೂತ. ಒಳ್ಳೇ ಪೀಕಲಾಟ ಹತ್ತಿತ್ತು. ದೇವರು ದೊಡ್ಡವನು, ಹಾಗೆ ಯಾಕೆ ಮಾಡ್ಯಾನು ! ಜಪ್ಪಿಸಿ ಓಡಿಬರಲಿಕ್ಕೆ ಚಲೋ ಮುಹೂರ್ತ ತಂದ. ಇನ್ನೇನು ಪಾರಾಗಿಬಿಟ್ಟೆ. ದುಡಿದುಹಾಕುವ ಹೆಂಡತಿ ಸತ್ತಳೆಂದು ನಾನು ಜೋಗಿ ಆಗಿರುವೆ. ಆಸತ್ತು ಬೇಸತ್ತು ಅಕ್ಕನ ಮನಿಗೆ ಹೋದರೆ ಅಕ್ಕನ ಗಂಡ ಅವಕ್ ಅಂದ ಹಾಗೆ ಅವನ ಹಿಂದೆ ಇದ್ದುವಾ ಅನಿಸಿತ್ತು. ಹಾದಿ ಮುಪ್ಪಾಗಿ ಹಳ್ಳ ಆಯ್ತು, ಸೂಳೆ ಮುಪ್ಪಾಗಿ ಜೋಗಿತಿ ಆದಳು. ಇದರಂತೆ ಬಹಳ ಬಹಳ ಜನ ಸಾಧುಗಳು ಆಗಹತ್ತಿದ್ದಾರೆ. ನಾನೇನು ಮುದಕನ ತದಕನ ಇನ್ನೂ ಬೇಕಾದ ಹಾಗೆ ಹರೆಯುದ ಹಂಗಾಮು ಇದೆ. ಮನೆ ಮನೆ ತಿರಿದು ತರತರದ್ದು ಮೇದು ಮೈ ಮಿರಿ ಮಿರಿ ಮಿಂಚಹತ್ತಿರುವದು. ಈಗೇನಾದರು ರತಿ ನೋಡಿ ಬಿಟ್ಟರೆ ಕಾಮನಿಂದೇ ನನ್ನನ್ನು ತಿಳಿಯಬಹುದಾಗಿದೆ. ಇದು ಒತ್ತಟ್ಟಿಗೆ ಇರಲಿ ! ಕೆಟ್ಟು ಪಟ್ಟಣ ಸೇರಬೇಕೆಂದು ನಾ ಹೊರಟಿರುವೆನು. (ಸುತ್ತಲೂ ನೋಡಿ) ಎಲೆಯಪ್ಪ ಎಷ್ಟು ಮಜಾಸೀರ ಇದೆಯಲ್ಲೊ ತೋಟ ! ದಿಕ್ಕೆಟ್ಟು ಬಂದ ಗಲಾಟೆಯಲ್ಲಿ ಕಣ್ಣು ತೆರೆದೇ ಇಲ್ಲ-ಅಹಹ ! ಕಾಮ ಕೇಳಿಗೆ ಕೈಮಾಡಿ ಕರೆಯುತ್ತಲಿರುವ ಹಕ್ಕಿಗಳ ಕಲಕಲಾಟದಿಂದ ನೋಟಕರನ್ನು ಕಟೆದ ಕಲ್ಲು ಗೋಬೆಯಂತೆ ಮಾಡುತ್ತಿರುವ ಈ ಮುದ್ದಾದ ಉದ್ಯಾನವು ಯಾರದಿರಬಹುದು ? ಅಳಿಗಳೇ ಇಂದ್ರನೀಲ ಮಣಿಗಳಾಗಿ ತಳಿರುಗಳೇ ಹವಳಗಳಾಗಿ ಹಸಿರು ಮಿಡಿಗಳೇ ಪಚ್ಚೆಗಳಾಗಿ ಮಲ್ಲಿಗೆಯ ಮೊಗ್ಗೆಗಳೇ ಮುತ್ತುಗಳಾಗಿ ನವಸಳಿನಗಳೇ ಮಾಣಿಕಗಳಾಗಿ ಮನ್ಮಥರಾಜನ ಕೋಶವೋ ಏನೋ ? ಎಂಬುದಾಗಿ ಭಾಸವಾಗುತ್ತಿರುವದು. ಈ

ತಂಗೋಳವು ಕಾಮಕನ್ನಡಿಯ ಹಾಗೆ ಕಮನೀಯವಾಗಿ ಕಾಣುವದು. ನೀರಡಿಕೆಯಾಗಿ ನಾಲಗೆ ಸೆಳೆಯ ಹತ್ತಿರುವದು ನೀರು ಕುಡಿದು ಆ ಮಾವಿನ ಮರದ ನೆರಳಿನಲ್ಲಿ ತುಸು ಮಲಗಿ ದಣಿವಾರಿಸಿ ಕೊಳ್ಳುವಾ !! (ನೀರು ಕುಡಿದು ಮರದ ಕೆಳಗೆ ಅಂಗಾತ ಮಲಗುವನು)

(ಯೋಚಿಸುವನು) ಮಾವಿನ ಮರವಾದರೂ ಬೆಟ್ಟದಂತೆ ಬಲಿತದ್ದಾಗಿರುವದು. ಇಷ್ಟು ದೊಡ್ಡ ಮರಕ್ಕೆ ಕೈಹಿಡಿಯುಪಷ್ಟು ಕಾಯಿ ಮಾಡಿದ್ದಾನಲ್ಲಾ ! ದೇವರು ಇದೇನಾಶ್ಚರ್ಯ !!! ಸಣ್ಣದಾಗಿರುವ ಕುಂಬಳಬಳ್ಳಿಗೆ ಕೊಡದ ದಪ್ಪ ಕಾಯಿ ಹುಟ್ಟಿಸಿರುವನಲ್ಲಾ !!! ಕುಂಬಳ ಕಾಯಿದಪ್ಪ ಮಾವಿನ ಕಾಯಿ ಇದ್ದು ಮಾವಿನಕಾಯಿಯಷ್ಟು ಕುಂಬಳಕಾಯಿ ಆಗಿದ್ದರೆ ಬಲು ಹೊಂದಿಕೆಯಾಗುತ್ತಿತ್ತು. ಆಟವನ್ನು ನೋಡಿ ನಿದ್ದೆ ಇಲ್ಲದೆ ತಲೆ ಸುಂದು ಆದಾಗ ಮಾವಿನಮರ- ಕುಂಬಳ ಬಳ್ಳಿಗಳನ್ನು ಶಿವನು ಹುಟ್ಟಿಸಿರಬಹುದು. ತಲೆಚನ್ನಾಗಿದ್ದಾಗ ಹೀಗೆಂದಿಗಾದರೂ ಮಾಡ್ಯಾನ ಶಿವನು. ನನ್ನದಾದರೂ ಅಷ್ಟೇ ! ಸ್ವಲ್ಪ ಮಲಗೋಣ (ಮಲಗುವನು ಗಾಳಿಗೆ ಮಾವಿನ ಕಾಯಿ ಉದುರಿ ನೆಟ್ಟನೆ ನಿರಂಜನನ ಮೂಗಿನ ಮೇಲೆ ಬೀಳಲು ರಕ್ತವು ಸೋರಹತ್ತುವದು. ದಿಗ್ಗನೆ ಎದ್ದು ಒರಸಿ) ಅಯ್ಯಯ್ಯೋ ! ಮೂಗ !! ಸಂಪಿಗೆ ಇದ್ದಾಂಗ ಇದ್ದೆ ಏನಾಯಿತಲ್ಲೋ ! ಏನ ತಂದೆಪ್ಪ ಶಿವನೇ ! (ಯೋಚಿಸಿ) ನಾನೆಂಥ ದಡ್ಡ !! ಶಿವನ ಬೈದು ಈಗ ಮಲಗಿದ್ದೆ. ಒಂದು ವೇಳೆ ನಾನು ಹೇಳಿದಂತೆ ಶಿವನು ಕೇಳಿದ್ದರೆ ಕೆಲಸ ಕೆಟ್ಟು ಹೋಗುತ್ತಿತ್ತು. ಅಡಿಕೆ ಬೆಟ್ಟದಷ್ಟು ಮಾವಿನಕಾಯಿ ಬಿದ್ದರೆ ನನ್ನ ಮೂಗು ನೆಗ್ಗಿ ನಾಪತ್ತಾ ಆಯ್ತು. ಕುಂಬಳಕಾಯಿ ಗಾತ್ರದ ಕಾಯಿ ಬಿದ್ದಿದ್ದರೆ ನನ್ನ ಹೆಣವೇ ಕೂಡ್ರುತಿತ್ತು. ಶಿವನು ತುಂಬಾ ಜಾಣನಿದ್ದಾನೆ. ಚೆನ್ನಾಗಿ ಆಲೋಚಿಸಿ ಪ್ರಪಂಚವನ್ನು ರಚಿಸಿಸಿದ್ದಾನೆ. ಒಳಗಿನ ಹುರುಳು ತಿಳಿಯದೆ ನಾವೆಲ್ಲಾ ತೊಳಲಿ ಬಳಲುತ್ತಿರುವೆವು

[ಸರ್ವಳರಗಳಿ]

ಕಪ್ಪು ಕುರಿಯ ಹೊಟ್ಟೆಯಲ್ಲಿ ಬಿಳಿಯ ಹಾಲನು ।
ಚಿಪ್ಪು ಇರುವ ತೆಂಗಿನಲ್ಲಿ ಎಳೆಯ ನೀರನು ॥
ಹಾಲಿನಲ್ಲಿ ತುಪ್ಪವನ್ನು । ಹಣ್ಣಿನಲ್ಲಿ ಬಣ್ಣವನ್ನ ॥
ಬಾನಿನಲ್ಲಿ ಚಿಕ್ಕೆಯನ್ನು । ಇಂಗಿನಲ್ಲಿ ನಾತವನ್ನು ॥
ಸೋಗೆಯಲ್ಲಿ ಚಿತ್ತಾರವನು । ಕೋಗಿಲಲ್ಲಿ ಇಂಚರವನ್ನು ।
ವೃಕ್ಷದಲ್ಲಿ ವನ್ಹಿಯನ್ನು । ದೇಹದಲ್ಲಿ ಜೀವವನ್ನು ॥
ಕಪ್ಪುಗೊರಳ ತುಂಬಿದಂಥ ನಿನ್ನ ಜಾಣ್ಮೆಯ ।
ಬೆಪ್ಪುತನದಿ ತಿಳಿಯಲಿಲ್ಲ ನಾನು ಚಿನ್ಮಯ ॥
ನಿನ್ನ ಲೀಲೆಗಳನು ಕಂಡು ನಿನ್ನ ಕಾಣೆವು ।
ಕಣ್ಣಿಇದ್ದು ಕುರುಡರಾಗಿ ಬನ್ನ ಬಡುವೆವು ॥

(ನಿರಂಜನನು ಪರವಶನಾಗುವನು)

(ನಾಗವೇಣಿ ರೋಹಿಣಿಯರು ಹೂವು ಕೊಯ್ಯುತ್ತ ಹಾಡುತ್ತಿದ್ದಾರೆ)

ಪೂಜಾಪ್ರಸೂನಾ ಕುಲಮಿದು— ಎಂಬಂತೆ.

ನಾನಾ ವಿಲಾಸಾಸ್ಪದ ವಿದು । ಪರವಸಂತ ವನವಿದು ॥ಪ॥
ಮಾಯಾರಾಣಿಯ ದಿವ್ಯೋದ್ಯಾನ । ನವಸುಮಗಳ ಲೀಲೆಯಿಂದ ॥
ಸುಗಂಧ ಮಯವಿದು । ಜನವಿನೋದಾವಹವಿದು ॥೧॥

ನಾಗವೇಣಿ— ಸಖೀ ರೋಹಿಣಿ ವೇಳೆಯಾಗಿರುವದು. ಇದುವರೆಗೆ ಬರಲಿಲ್ಲವೆಂದು ಬಹುಶಃ ರಾಣಿಯವರು ನಿರೀಕ್ಷಿಸುತ್ತಿರಬಹುದು.

ರೋಹಿಣಿ— ಹೂವು ಸಾಕಷ್ಟು ಸಿಕ್ಕಿರುವವು. ನಡೆ ಹೊರಡುವಾ! (ಮುಂದೆ ನೋಡಿ) ಅಗೋ ನಾಗವೇಣಿ ಅಲ್ಲಿ ಯಾರೋ ಕಾಣುತ್ತಾರೆ. ಎಷ್ಟು ಗಟ್ಟಿಗರೆ! ಇಲ್ಲಿ ಕಾಲಿಡಲು (ಹತ್ತರ ಹೋಗುವರು)

ನಾಗವೇಣಿ— ಯಾರಯ್ಯಾ! ನೀನು.

ನಿರಂಜನ— (ಠೀವಿಯಿಂದ) ನಾನೆ ನಾನೆ ನಿರಂಜನ್ (ಸ್ವಗತ) ಏನು ರೂಪ! ಇಂದ್ರ ಲೋಕದ ಸುಂದರಿಯರೇ ಇವರು !!! ಆಹಾ !!!

ನಾಗವೇಣಿ — ಏಕೆ ಬಂದೆ ಇಲ್ಲಿಗೆ !

ನಿರಂಜನ— ನಿಮಗಾಗಿ

ನಾಗವೇಣಿ— (ಸಿಟ್ಟಿನಿಂದ) ಏನು ?

ನಿರಂಜನ— ಬಂದೆ

ರೋಹಿಣಿ— (ಹುಬ್ಬು ಗಂಟುಹಾಕಿ) ಭೈರವಿ ಭೈರವಿ (ಭೈ ವಿ ಬರುವಳು)

ಭೈರವಿ— ಏನಾಗಬೇಕು

ರೋಹಿಣಿ— (ತೋರಿಸಿ ಇವನನ್ನು ಕುರಿಯಾಗಿ ಮಾಡಿ ಆ ಹಿಂಡಿನೊಳಗೆ ಹೊಡಿ.

ನಿರಂಜನ— ಕೆಟ್ಟೆ ! ಕೆಟ್ಟೆ ! ಅಕಟಕಟಾ !!! ಮರುಳಸಿದ್ಧೇಶ್ವರ ಮಹಾಪ್ರಭೋ. ನಿನ್ನ-ಆಜ್ಞಾಭಂಗ ಮಾಡಿದ ಮಹಾಪರಾಧಕ್ಕೆ ತಕ್ಕ ಶಾಸನವಾಯಿತು. ಅಟ್ಟ ಮೇಲೆ ಒಲೆ ಉರಿಯಿತು. (ಅಳುವನು) (ಭೈರವಿ ಕುರಿಮಾಡಿ ಹಿಂಡಿನಲ್ಲಿ ಹೊಡೆಯುವಳು)

—

೩ನೇ ಪ್ರವೇಶ

ಸ್ಥಳ–ಮಹಾರಾಜಾ ಚಂದ್ರವರ್ಮನ ದರ್ಬಾರು.

(ಸಿಂಹಾಸನದಲ್ಲಿ ಚಂದ್ರವರ್ಮನು ಮಂಡಿಸಿರುವನು. ಎಡಬಲದಲ್ಲಿ ಕನ್ನಿಕೆಯರು ಚಾಮರವನ್ನು ಥಾಳಿಸುತ್ತಿದ್ದಾರೆ. ಮಂತ್ರಿಸೇನಾಪತಿಗಳು ಉಚಿತಸ್ಥಾನದಲ್ಲಿ ಕೂ ಡುವರು)

॥ಪದ॥ ಹಮಾರೆ ಅಂಗನಾ ಎಂಬಂತೆ.

ಸಮಾನ ಯಾರಿಹರು । ಈ ಸಮಾನ ಯಾರಿಹರು ।
ರಾಜರಲ್ಲಿ ನಿನಗೆ ಮಹರಾಜಾ ॥ಪ॥
ಸಿರಿಯು ದೊರೆಯೆ । ಧಾತ್ರೀಯೊಳಗೆ । ನೀನೇ ಮಹಾಶಕ್ತನು ॥
ರಾಜರಲ್ಲಿ......" ನಿನಗೆ ಮಹರಾಜಾ ॥೧॥

(ಎಂದು ಹೇಳುತ್ತ ನರ್ತಕಿ ನರ್ತಿಸುತ್ತಾಳೆ)

ಮಂತ್ರಿಕ್ರೂರಮತಿ— ನಮ್ಮ ಸಾಮಂತರಾಜರು ಸಮಯಕ್ಕೆ ಸರಿಯಾಗಿ ಕಪ್ಪ ಕಾಣಿಕೆಗಳನ್ನು ತಪ್ಪದೆ ತಂದು ಒಪ್ಪಿಸುತ್ತಿರುವರಲ್ಲವೆ?

ಕ್ರೂರಮತಿ— ಹೌದು ರಾಜೇಂದ್ರ !

ಚಂದ್ರವರ್ಮ— ಇನ್ನು ನಮಗೆ ಶಿರಬಾಗದಿರುವ ರಾಜರು ಮತ್ತೆ ಯಾರಿರುವರು ?

ಕ್ರೂರಮತಿ— ಸದ್ಯಃ ಶರಣಾಗತರಾಗಲು ವೀರವರ್ಮ ಮಹಾರಾಜರೊಬ್ಬರು ನಿರಾಕರಿಸಿರುವರು.

ಚಂದ್ರವರ್ಮ— (ಕಿಡಿಕಿಡಿಯಾಗಿ) ರಾಜಾಧಿರಾಜರನ್ನು ಯುದ್ಧರಂಗದಲ್ಲಿ ಬಗ್ಗು ಬಡಿದು ದೇಶ ದೇಶಗಳ ಐಶ್ವರ್ಯವನ್ನು ಸರ್ರನೆ ಹೀರಿ ಅಸಂಖ್ಯ ಸೈನ್ಯ ಸಾಗರದಿಂದ ಲೋಕವನ್ನೇ ಲೆಕ್ಕಿಸದ ಈ ಚಂದ್ರ ವರ್ಮ ಚಕ್ರವರ್ತಿಗೆ ದುರಾತ್ಮನಾದ ಆ ಗರ್ವಿಷ್ಠ ವೀರವರ್ಮನು ಇನ್ನೂ ಸ್ವಾಧೀನನಾಗದಿರುವನೆ?

ಕ್ರೂರಮತಿ— ಮಂತ್ರಕ್ಕೆ ಮಾವಿಸಕಾಯಿ ಉದುರೀತೇ ಮಹಾರಾಜಾ !!

ಸುಬುದ್ಧಿ ಸೇನಾಪತಿ– ಸಾರ್ವಭೌಮಾ ! ಈ ದೀನನ ಅರಿಕೆಯೊಂದಿರು ವದು. ಅಭಯವಿತ್ತರೆ ಬಿನ್ನವಿಸುವೆನು.

ಚಂದ್ರವರ್ಮ— ಆಗಬಹುದು;

ಸುಬುದ್ಧಿ— ವೀರವರ್ಮ ರಾಜನು ಪರಮ ಧಾರ್ಮಿಕನಾಗಿರುವನು. ಪ್ರಜೆಗಳನ್ನು ಮಕ್ಕಳೋಪಾದಿಯಲ್ಲಿ ಪರಿಪಾಲಿಸುತ್ತಿರುವನು. ಅವನ ಸತ್ಕೀರ್ತಿಯು ಸರ್ವತ್ರ ವ್ಯಾಪಿಸಿರುವದು. ಇಲ್ಲದೆ ಮೇಲಾದ ವೀರಾದಿ ವೀರನಾಗಿರುವನು. ಕಾರಣವಿಲ್ಲದೆ ಕಾಲುಕೆದರಿ ಆ ಸತ್ಯ ಶೀಲನ ಮೇಲೆ ಕತ್ತಿಯನ್ನೆತ್ತುವದು ಅಪರಾಧವಾಗುವದು.

ಚಂದ್ರವರ್ಮ— ಛೀ ಚಾಂಡಾಲಾ ! ಕ್ಷಾತ್ರ ಕುಲಕಲಂಕಾ ! ಹೆಂಬೇಡಿ ನಾಚಿಕೆಯಾದರೂ ಬರುವದಿಲ್ಲವೇ ? ಸಮರದೊಳಗೆ ಎದುರಾದ ಪಟು ಭಟರ ಶಿರಸ್ಸುಗಳನ್ನು ತರಿತರಿದು ಧರಣಿಗೆ ಧರಿಸದಿದ್ದವನು ಕ್ಷತ್ರಿಯನೆನಿಸ ಬಲ್ಲನೇ !! ಕ್ರೂರಮತಿ ! ಒಳಗಿಂದೊಳಗೆ ಈತನು ಹಣತಿಂದು ಮೋಸದ ಬಲೆಯನ್ನು ಬೀಸಿ ದೇಶವನ್ನು ನಾಶಗೊಳಿಸುವ ಹೇಸಿ ಕೆಲಸಕ್ಕೆ ಕೈ ಹಾಕಿದಂತಿದೆ. ಕ್ಷಣಾರ್ಧದಲ್ಲಿ ಬಂಧಿಸಿ ಸೆರೆಮನೆಯಲ್ಲಿ ಸೇರಿಸು !! ಹೂಂ. (ಸೈನಿಕರು ಬಂದು ಹಿಡಿದೊಯ್ಯುವರು. ಮಂತ್ರಿ ನಮ್ಮ ಸಮಸ್ತ ಚತುರಂಗ ಬಲವು ಪ್ರಚಂಡೋತ್ಸಾಹದಿಂದ ಯುದ್ಧಕ್ಕೆ ಸನ್ನದ್ಧವಾಗಿರುವಂತೆ ಸಿದ್ಧಗೊಳಿಸು.

ಕ್ರೂರಮತಿ— ಅಪ್ಪಣೆ ಮಹಾರಾಜ !!

(ತೆರೆ ಬೀಳುವದು)

---

೪ ನೇ ಪ್ರವೇಶ

ಸ್ಥಳ— ಶಂಕರ ಪಂಡಿತನ ಮನೆ

ಶಂಕರ ಪಂಡಿತ— ಬಾಳುವೆಯು ಬಲು ತೊಡಕಿನದು, ಹುಟ್ಟದಿರುವದು ಒಳಿತು ಹುಟ್ಟಿದರೆ ಹಾಳು ಕರ್ಮದಬುತ್ತಿ ಬೆನ್ನುಬಿಡದು. ನನ್ನಂತೆ ಬಡವರಿದ್ದರೆ ಯಮನ ಪ್ರಾಯಶ್ಚಿತ್ತವು ಪ್ರತ್ಯಕ್ಷವಾದಂತಾಗುವದು. ಬಲುಕಷ್ಟ! ಬಲುಕಷ್ಟ !! ಬಡತನದ ಭೂತವು ಕೊಲ್ಲುವ ಹಗೆಯನ್ನೂ ಹಿಡಿಯಬಾರದು ಬಡಿಯಬಾರದು.

॥ ಪದ ॥ ಮಾಯ ಮಾಳವ ರೂಪ ತಾಳ

ಬಡತನದ ಬೇಗೆಯಲಿ ನಾ ಬೇಯುವೆ ॥ ಪ ॥
ಸಾಕು ಸಾಕು ಬಡವನಾಗಿ । ನೂಕುವದು ದಿನಗಳ ಕಟ
ಸಾಕು ಭಾಗ್ಯವಿದ್ದ ಮೇಲೆ । ಲೋಕದೊಳಗೆ ಶಿವನೆ ಆವನು ತಿಳಿಯಲು ॥ ೧ ॥
ಸಾಕದಿ ಅಮರೇಶಸನಾತನೇ ॥ ೨ ॥

ಎರಡು ದಿವಸಗಳಿಂದ ಹಿಡಿಯನ್ನವಿಲ್ಲದೆ ಹಲುಬುತ್ತಲಿದ್ದೇನೆ. ಚಿಕ್ಕ ಚಿಕ್ಕ ಮಕ್ಕಳ ಕಪ್ಪಾಗಿರುವ ಮುಖವನ್ನು ಕಂಡರೆ ಕರುಳುಗಳನ್ನು ಕಿತ್ತಂತಾಗುವದು. ಶಿವಶಿವಾ ! ಏನು ಮಾಡಲಿ ! ಧರ್ಮಪರರಾದ ಪಾಂಡವರು ಮೂರು ಲೋಕದ ಗಂಡರೆನಿಸಿದ್ದರು ತೈಲೋಡವಿಡಿದು ಮನೆ ಮನೆಗೆ ತಿರಿದು ಕಾಲವನ್ನು ನೂಕಬೇಕಾಯಿತು. ಪಟ್ಟ ಕಷ್ಟಗಳಿಗಂತೂ ಪಾರವೇ ಇಲ್ಲ. ಕಡೆಗೆ ಕೌರವರನ್ನು ಮುರಿದಿಕ್ಕಿದರು. ಅವರು ಹನ್ನೆರಡು ವರ್ಷದ ಕಂಡಾಯವನ್ನು ಮೊದಲೆ ಎತ್ತಿಬಿಟ್ಟಿದ್ದರು. ತಾಯಿಯಾದ ಕುಂತಿಯು ಪರದೇಶಿಯಂತೆ ಎರಡನೆಯವರ ಮನೆಯಲ್ಲಿ ಕೊಳೆಯಬೇಕಾಯಿತು.

ಭೂಮಿಯ ಮೇಲೆ ಮನುಷ್ಯನು ಭಾಗ್ಯಶಾಲಿಯಾಗಿ ಜನಿಸಬೇಕು. ಕಾಶಿಯಲ್ಲಿ ಬಹುದಿವಸ ವಾಸಿಸಿ ಪ್ರಯಾಸಪಟ್ಟು ವಿದ್ಯಾಗಂಗೆಯನ್ನು ತಲೆಯಲ್ಲಿ ತಳೆದಿರುವೆನು. ನಾ-ನೀ-ಅನ್ನುವ ಪಂಡಿತರನ್ನು ವಾದದಲ್ಲಿ ಸೋಲಿಸಿ ಜಯಪತ್ರಗಳನ್ನು ಕಿತ್ತುಕೊಂಡಿರುವೆನು.

ಅದರಿಂದ ಏನಾಯಿತು? ಹಸಿದ ಹೊಟ್ಟೆಗೆ ರೊಟ್ಟಿಯ ತುಣುಕು ಕೂಡ ದುರ್ಲಭವಾಯಿತು. ಪಾಂಡಿತ್ಯದಿಂದ ಬಡತನದ ಬವಣೆ ಮಡಿಯಲಾರದು. ಮಡಿಯಲಾರದು. ಬಡತನದ ಬೆಂಕಿಯಲ್ಲಿ ನನ್ನಂತೆ ಎಷ್ಟೋ ಜನರು ಬಿದ್ದು ಬೆಂದು ಬೂದಿಯಾಗುತ್ತಿರುವರು. ಕಾಮನ ಬದಲು ಬಡತನದ ರಕ್ಕಸನನ್ನು ಸುಟ್ಟು ಸೂರೆ ಮಾಡಬಾರದಿತ್ತೇ ಮಹೇಶ್ವರಾ!! ಹಾಯ್ ಹಾಯ್ (ಚಿಂತಿಸುವನು) ವೀರ ವರ್ಮರಾಜನು ಪ್ರಜಾರಂಜಕನಾಗಿ ಪಂಡಿತರನ್ನು ಸನ್ಮಾನಿಸುತ್ತಿರುವದು ಜನಜನಿತವಾಗಿರುವದು. ಸಾವಿರಾರು ಪಂಡಿತಪ್ರವರರು ಅವನ ಆಶ್ರಯದಲ್ಲಿ ಇರುವರು. ನಾಳೆ ಬೆಳಗ್ಗೆ ರಾಜಸನ್ನಿಧಿಗೆ ಹೋಗಿ— (ಆಲೋಚಿಸಿ) ನಾಳಿನ ಸಂಜೆಗೆ ಹೋಳಿಗೆಯನ್ನೇ ಉಣ್ಣುವದು. (ತೆರೆ ಬೀಳುವದು)

———

SRI JAGADGURU VISHWARADHYA
JNANA SIMHASAN JNANAMANDIR
LIBRARY,
Jangamwadi Math, VARANASI,
Acc. No. 1047

೫ ನೆಯ ಪ್ರವೇಶ.

ಸ್ಥಳ—ಕೊಲ್ಲಾಪುರದ ಮುಖ್ಯಮಂತ್ರಿ ಶಿಲಾಸಿದ್ಧನ ಮಂತ್ರಾಲೋಚನ ಮಂದಿರ

ಶಿಲಾಸಿದ್ಧ— ಅಂಜನಸಿದ್ಧಿ, ಪಾದುಕಾಸಿದ್ಧಿ, ಗುಟಿಕಾಸಿದ್ಧಿ, ಇತ್ಯಾದಿ ಸಿದ್ಧಿಗಳು ಎಂದೋ ನನ್ನ ಕೈಸೇರಿರುವವು ರಸ ಚಕ್ರೇಶ್ವರಿಯ ಉಪಾಸನೆಯಿಂದ ದೇಹವೆಲ್ಲವು ಕಬ್ಬಿಣದಂತೆ ಕಠಿಣವಾಗಿರುವದು. ಯಾವ ಶಸ್ತ್ರಗಳೂ ನಾಟುವದಿಲ್ಲ. ಪ್ರಯೋಗಿಸಿದರೆ ದೊಡ್ಡ ಬಂಡೆಗಲ್ಲಿಗೆ ಬಡಿದಂತಾಗಿ ತಮ್ಮಷ್ಟಕ್ಕೆ ತಾವೇ ಮುರಿ ಮುರಿದು ಬೀಳುವವು. ಶಿಲಾಸಿದ್ಧನೆಂಬ ನಾಮವು ಸಾರ್ಥಕವಾಗಿ ಪರಿಣಮಿಸಿತು. ಸಾವಿರಾರು ಗಟ್ಟಲೆ ಭೈರವರೂ ಕಾಪಾಲಿಗಳೂ ಶಾಕ್ತರೂ ನನ್ನ ದಾಸಾನುದಾಸರಾಗಿ ಒಲೈಸುತ್ತಿರುವರು. ರಾಜ್ಯದ ಪ್ರಧಾನ ಪಟ್ಟವಂತೂ ನನ್ನ ಕೈಯಿಂದ ಕಳಚುವಂತೆ ಇಲ್ಲ. ಜನಗಳನ್ನು ಪಶುಗಳನ್ನಾಗಿಯೂ ಹಕ್ಕಿಗಳನ್ನಾಗಿಯೂ ಮಾರ್ಪಡಿಸತಕ್ಕ ನನ್ನ ಕೈಚಳಕವಾಪರೂ ವರ್ಣನೀಯವಾಗಿರುವದು. ಎಷ್ಟು ಹುಡುಕಿದರು ನನ್ನ ಸರಿಗಟ್ಟುವ ಗಟ್ಟಿಗರು ಭೆಟ್ಟಿಯಾಗಲಾರರು. ನಾನೇ ಭೂವಲಯದ ಬ್ರಹ್ಮನಾಗಿರುವೆನು. ಮಹದೈಶ್ವರ್ಯದಲ್ಲಿ ಲೋಲಾಡುತ್ತಿರುವ ನನ್ನ ಹತ್ತರ ಸಾವಿರಾರು ಸುಂದರಿಯರು ಕಾಲಿನ ಧೂಳವಾಗಿ ಬಿದ್ದುಕೊಂಡಿರುವರು. ಮಾಯಾರಾಣಿಯ ಮೂಗಿಗೆ ಮುಗ್ಗು ತುಪ್ಪವನ್ನು ಮೆತ್ತಿ ಮಹಾರಾಜನಾಗುವದೊಂದು ಉಳಿದುಕೊಂಡಿರುವದು. ಮಂತ್ರ—ತಂತ್ರ—ಮಾಟ ಮದ್ದುಗಳಲ್ಲಿ ಅವಳು ನನ್ನನ್ನೂ ಮೀರಿಸಿರುವಳು. ಮಂತ್ರಿಸಿರುವ ವಿಷವಿರುವ ಕೊಡವನ್ನು ಕುಡಿದು ದಕ್ಕಿಸಿಕೊಳ್ಳುವದು ಆಗದ ಮಾತು. ಕೊಡವ ನೋಡಿದರೆ ಎದೆಯು ಬಿರ್ರನೆ ಬಿರಿದು ಹರಣವು ಹಾರಿದಂತಾಗುವದು. ಕನ್ನಡಿಯೊಳಗೆ ಕಂಡುಬರುವ ನವನಿಧಿಯಂತೆ ಅವಳ ರೂಪ—ಲಾವಣ್ಯವು ನಿಷ್ಫಲವಾಗುವದಲ್ಲಾ !! ಎಂದು ಮನವು ವಿಸಿವಿಸಿ ಒದ್ದಾಡುತ್ತ ಮಿಡುಕುತ್ತಲಿರುವದು. ಸೇದುವ ಬಾವಿ ನೋಡಿ ನರಿ ಮರುಗಿದ ಹಾಗೆ

ನಾನೇಕೆ ಮರುಮರುಗಿ, ಕೊರಕೊರಗಿ ಸವೆದು ಸುಣ್ಣಾಗಬೇಕು. ಇದು ಒತ್ತಟ್ಟಿಗೆ ಇರಲಿ !! ಮಾಯಾರಾಣಿಯ ಸಖಿ ನಾಗವೇಣಿ. ಎರಡನೆಯ ಮಾಯಾರಾಣಿ ಎನಿಸುವಷ್ಟರ ಮಟ್ಟಿಗೆ ಸೊಗಯಿಸುತ್ತಿದ್ದಾಳೆ. ಮೊನ್ನಿನ ದರ್ಬಾರಿನಲ್ಲಿ ಆವಳು ನನ್ನೆಡೆಗೆ ಕುಡಿನೋಟ ವನ್ನು ಚಲ್ಲಿ ಮುಗುಳು ನಕ್ಕು ಹುಳು ಹುಳು ನೋಡಿದಳು. ಶಸ್ತ್ರಾಸ್ತ್ರಗಳಿಗೆ ಸೊಪ್ಪುಹಾಕದ ಶಿಲಾದೇಹದ ಹೃದಯವು ಓರೆಗಣ್ಣಿನ ನಾಗಿಣಿಯ ಘೂತ್ಕಾರಕ್ಕೆ ಬೆದರಿಬೆಂಡಾಗಿ ಬಿಟ್ಟಿರುವದು. ಆಕೆಯಿಲ್ಲದೆ ಶಾಂತಿಯು ಲಭಿಸಲಾರದು. ಪ್ರಾಣಪಂಚಕವು ತಲ್ಲಣಿಸುತ್ತಿರುವದು ಜಗತ್ತೇ ನನ್ನ ಪಾಲಿಗೆ ಶೂನ್ಯವಾಗಿಬಿಟ್ಟದೆ. ಈ ವಿಚಾರ ದಲ್ಲಿ ವಿದೂಷಕನನ್ನು ಸಾರಥಿ ಮಾಡಿಕೊಂಡಿದ್ದಾದರೆ ಅನಾಯಾಸ ವಾಗಿ ಕನಸು ನೆನಸಾಗಬಹುದಾಗಿದೆ. (ಯೋಚಿಸಿ) ಹೌದು ಇದೇ ತಕ್ಕ ಉಪಾಯ ! ಸರಿಯಾದ ಯೋಜನೆ !!

೩ನೇ ಪ್ರವೇಶ

ಸ್ಥಳ—ರಾಜೇಂದ್ರ ವೀರವರ್ಮನ ದರ್ಬಾರು.

(ಅರಸು ಸ್ವಸ್ಥಾನವನ್ನು ಅಲಂಕರಿಸಿರುವನು ಮಂತ್ರಿ–ಸೇನಾಪತಿಗಳು ಉಚಿತಾಸನಾಸೀನರಾಗಿರುವರು)

" ಸಂಗೀತ ಸಂಭ್ರಮ "

ವೀರವರ್ಮ— ಯಾವತೊಂದರೆಯಿಲ್ಲದೆ ಪ್ರಜಾಸಂದೋಹವು ಆನಂದ ತುಂದಿಲವಾಗಿರುವದೇ ? ದುರಾಚರಣವನ್ನು ದೂರಮಾಡಿ ಸದಾಚಾರ ಪರಾಯಣವಾಗಿರುವದೇ ?

ಮಂತ್ರಿ— ತಾವು ಈ ಹಿಂದೆ ಆಣತಿಯಿತ್ತಂತೆ ಸಕಲರು ದಮನ–ದಾನ–ದಯಾ ಧರ್ಮಿಗಳಾಗಿ ಶಿವಭಕ್ತಿ ಸುಖದಿಂದ ಶಿವಾನಂದದಲ್ಲಿರುವರು.

(ಪ್ರತಿಹಾರಿ ಬರುವನು)

ಪ್ರತಿಹಾರಿ— (ವಂದಿಸಿ) ರಾಜೇಂದ್ರಾ ಘನಪಂಡಿತರೊಬ್ಬರು ರಾಜದರ್ಶನಕ್ಕೋಸುಗ ಮಹಾದ್ವಾರದಲ್ಲಿ ಕಾದಿರುವರು.

ವೀರವರ್ಮ— ಸಮ್ಮಾನಪೂರ್ವಕ ಬರಮಾಡು !

(ಪ್ರತಿಹಾರಿ ಶಂಕರ ಪಂಡಿತನನ್ನು ಕರೆದುಕೊಂಡು ಬರುವನು)

ಪಂಡಿತರಿಗೆ ಪ್ರಣಾಮಗಳು.

ಶಂಕರಪಂಡಿತ— ವಿಜಯೀಭವ ರಾಜನ್ (ಹರಸುವನು)

ಶ್ಲೋಕ

ಅರ್ಧಂದಾನವವೈರಿಣಾ ಗಿರಿಜಯಾಪ್ಯರ್ಧಂ ಶಿವಸ್ಯಾಹೃತಂ ।
ದೇವೇತ್ಥಂಜಗತೀತಲೇ ಪುರಹರಾಭಾವೇ ಸಮುನ್ಮೀಲತಿ ।
ಗಂಗಾಸಾಗರಮಂಬರಂ ಶಶಿಕಲಾ ನಾಗಾಧಿಪಃ ಕ್ಷ್ಮಾತಲಂ ॥
ಸರ್ವಜ್ಞತ್ವ ಮಧೀಶ್ವರತ್ವ ಮಗಮತ್ತ್ವಾಂ ಮಾಂತು ಭಿಕ್ಷಾಟನಂ ॥೧॥

ಶಿವನು ತನ್ನ ಅರ್ಧ ದೇಹವನ್ನು ಮೋಹಿನಿಯಾದ ವಿಷ್ಣುವಿಗೂ ಇನ್ನರ್ಧವನ್ನು ಸತಿ ಪಾರ್ವತಿಗೂ ಸಮನಾಗಿ ಹಂಚಿದನು. ಇಂತು ಭಗವಂತನು ಬಯಲಾಗಲು ಮಸ್ತಕದಲ್ಲಿ ಮನೆಮಾಡಿಕೊಂಡಿದ್ದ ಗಂಗೆಯು ಸಮುದ್ರಕ್ಕೆ ಸೇರಿದಳು. ಚಂದ್ರಕಲೆಯು ಆಕಾಶವನ್ನು ಹೊಂದಿತು. ಆಭರಣಗಳಾಗಿದ್ದ ಸರ್ಪಗಳು ಪಾತಾಳಕ್ಕೆ ಹೋದವು. ಚರಾಚರ ಪ್ರಪಂಚದ ಅಣುರೇಣುಗಳ ಪ್ರತಿಚಲನವಲನವನ್ನು ತಿಳಿಯತಕ್ಕ ಸುಹಾ ಜ್ಞಾನಶಕ್ತಿಯೂ ನನ್ನ ಮೊದಲಾಗಿರುವ ಜಗದ ಒಡೆತನವೂ ತಾವು ಇರಲು ಸರಿಯಾದ ಸ್ಥಳವಿಲ್ಲದೆ ಅಲೆದು ಅಲೆದು ದಕ್ಷರಾದ ತಮ್ಮನ್ನೇ ಆಶ್ರಯಿಸಿರುವವು. ಆದರೆ ಶಂಕರನ ಭಿಕ್ಷಾಟನವು ಮಾತ್ರ ನನ್ನ ಭಾಗಕ್ಕೆ ಬಂದಿರುವದು. ಆದ್ದರಿಂದ ನೃಪೋತ್ತಮಾ! ಎಲ್ಲ ತಿಳಿದ ಸಮರ್ಥನಾದ ನಿನಗೆ ಬಾಹುಲ್ಯ ಕೃತಪಡಿಸುವದೇನಿರುವದು? (ವೀರವರ್ಮ ತಲೆತೂಗುವನು)

ಮಂತ್ರಿ— ಆಹಾ! ಏನು ಪ್ರತಿಭೆಯಿದು. ವಿದ್ವತ್ಕಾಮಿನಿಯು ಈ ಪೂಜ್ಯರನ್ನು ಮನಮೆಚ್ಚಿ ವರಿಸಿದಂತಿರುವದು.

ವೀರವರ್ಮ— ಸತ್ಯ! ಸತ್ಯ! ಮಂತ್ರೀಶ್ವರಾ!! ಈ ಶ್ಲೋಕದ ಚರಣಕ್ಕೊಂದು ಲಕ್ಷ ವರಹಗಳನ್ನು ಸಲ್ಲಿಸುವಂತೆ ಕೋಶಾಧ್ಯಕ್ಷನಿಗೆ ತಿಳುಹಿಸು!!

ಮಂತ್ರಿ— ಅಪ್ಪಣೆ! (ಪ್ರತಿಹಾರಿಯು ಕೋಶಾಧ್ಯಕ್ಷನಲ್ಲಿಗೆ ಶಂಕರ ಪಂಡಿತರನ್ನು ಕರೆದೊಯ್ಯುವನು) (ದೂತನೊಬ್ಬನು ಅಂಜಿ ನಡುಗುತ್ತ ಬಂದು ದಡಪಡಿಸುತ್ತ)

ದೂತ— ಜೀಯಾ! ಚಂದ್ರವರ್ಮ ಮಹಾರಾಜರ ಸೇನೆಯು ಕಾಲನ ಕರಾಳ ಖಡ್ಗದಂತೆ ಭಯಂಕರವಾಗಿ ಇತ್ತಕಡೆಗೆ ಬರುತ್ತಿದೆ.

ಮಂತ್ರಿ— (ಎದ್ದು ನಿಂತು) ಚಂದ್ರವರ್ಮನ ಸೈನ್ಯವೆ?

ದೂತ— ಹೌದು ನಿಜ!! ತಳುವಿದರೆ ಅನರ್ಥವು ಒದಗಬಹುದು ದೇವಾ!

ವೀರವರ್ಮ— (ಕನಲಿ) ಪಾಪಿಯಾದ ಚಂದ್ರವರ್ಮನು ನಮ್ಮ ರಾಜ್ಯದ ಮೇಲೆ ದಂಡೆತ್ತಿ ಬಂದನೆ! ಚಿಕ್ಕ ಪುಟ್ಟ ರಾಜರನ್ನು ಒಕ್ಕಲಿಕ್ಕಿದ ಚಂದ್ರವರ್ಮನ ಚಂಡಿತನವು ಪ್ರಚಂಡನಾದ ವೀರಮಾರ್ತಾಂಡನ ಮುಂದೆ ನಡೆಯಬಲ್ಲುದೆ? ಕಾರಣವ ಕಲ್ಪನವಿಲ್ಲದೆ ತಕಪಕನೆ ಕುದಿವ ನೆತ್ತರವನ್ನು ಹರಿಸುವ ಕೇಡಿಗಳು ಇರುವವರೆಗೆ ಲೋಕದಲ್ಲಿ ಕಷ್ಟ ನಷ್ಟಗಳು ಕಮ್ಮಿಯಾಗವು. ಕವಿಯನ್ನು ಕವಿತ್ವದಿಂದ ಗೆಲ್ಲುವಂತೆ ದುಷ್ಟರನ್ನು ದೌರ್ಜನ್ಯದಿಂದ ದಂಡಿಸಲೇಬೇಕು. ಮಂತ್ರಿ ಸೇನಾಪತಿಗಳೇ ಈಗಲೆ ನೀವು ಸೇನಾಸಮೇತರಾಗಿ ಹೋಗಿ ಶತ್ರುವನ್ನು ಸದೆಬಡೆಯಿರಿ.

ಸರ್ವರು— ಅಪ್ಪಣೆ ಮಹಾರಾಜ (ಹೋಗುವರು).

(ತೆರೆ ಬೀಳುವದು)

ತೃತೀಯಾಂಕ ಸಮಾಪ್ತಂ

ಚತುರ್ಥಾಂಕ

೧ ನೇ ಪ್ರವೇಶ

ಸ್ಥಳ—ವಸಂತೋದ್ಯಾನ.

(ನಾಗವೇಣಿಯು ಹೂವು ಕೊಯ್ಯುತ್ತಿರುವಳು)

ಪದ. ರಾಗ-ಬಿಹಾರ-ಆದಿತಾಳ.

ನಾಗವೇಣಿ—

ಮಂತ್ರಿ ಮುಖ್ಯರವರಲಿಮನವು ನಿಂತು ಚಲಿಸದ್ಯೆ ॥ಪ॥
ಹೇಳಿ ಕೇಳಿ ಚಿತ್ರಕೀಗ ಮತಿಯು ಮಂದವಾಯ್ತು ॥ಅ॥ಪ॥
ಪರಿಯೋಚಿಸಿದರು । ಹರಿಯದಾಗಿದೆ ॥
ಸರಸದಿ ಸಚಿವರ ಪೊಂದಿನಿಲ್ವಬಗೆಯು ॥೧॥

ಮಂತ್ರಿಮುಖ್ಯರಾಗಿರುವ ಶಿಲಾಸಿದ್ಧರ ಮೋಹನಾಕೃತಿಯು ಕಣ್ಣಿಗೆ ಕಟ್ಟಿದಂತಾಗಿರುವದು. ಕೇಳದೆ ಕೇಳದೆ ಅವರ ಭಾವಚಿತ್ರವನ್ನು ಮನವು ಮತ್ತೆ ಮತ್ತೆ ಹುರಿಗೊಂಡು ಚಿತ್ರಿಸುತ್ತಿರುವದು.

(ಶಿಲಾಸಿದ್ಧ ವಿದೂಷಕರು ಬರುವರು)

ವಿದೂಷಕ— ಅದೋ! ಅದೋ! ನಾಗವೇಣಿ. (ತೋರಿಸುವನು) ನೀವೀಗ ಮರೆಯಾಗಬೇಕು.

(ಕಿವಿಯಲ್ಲಿ ಮೆಲ್ಲಗೆ ಹೇಳುವನು. ಅವನು ತಲೆ ಅಲ್ಲಾಡಿಸಿ ಮರೆಯಾಗುವನು)
(ಏನೂ ತಿಳಿಯದವನಂತೆ ಹತ್ತರ ಹೋಗುತ್ತ)

॥ಪದ॥

ಅತ್ತ ಇತ್ತ ಮುಸುಕಿತು ಮಂಜು ಮಂಜುವಾಣಿಯು ॥
ಸುತ್ತಿ ಸುತ್ತಿ ನಾಗವು ತಿಂತು ನಾಗವೇಣಿಯು ॥

ನಾಗವೇಣಿ— ಯಾರವರು? ಕಿರುಚುವವರು!

ವಿದೂಷಕ— ನಾ—

ನಾಗವೇಣಿ— (ನೋಡುವಳು) ಓಹೋ! ವಿದೂಷಕನೋ!

ವಿದೂಷಕ— ಹಾಹಾ! ಮೂರುವರೆ ಮೊಳದ ಮೇಲೆ ನಾಲ್ಕು ಅಂಗುಲ ಎತ್ತರ ಬೆಳೆದಿರುವೆ. ಕಣ್ಣಿಗೆ ಪಾಂಜು ಮುಸುಕಿದೆ ಅಲ್ಲವೆ? ಕತ್ತೆಗಳ ಬಳಿ ಕೋಗಿಲೆಯಂತೆ ಕೂಗಬಲ್ಲ ಗೂಗೆಯು ಹಾಗೆ ಹಾಡಬಲ್ಲ ಕಂಠ ಮಾಧುರ್ಯಕ್ಕೆ ಕಿರಿಚು ಎಂದೆಯಾ? ಕಿರಿಚು. (ಕೋಪಿಸುವನು)

ನಾಗವೇಣಿ— ಸಿಟ್ಟಾಗಬೇಡಿ! ವಿದೂಷಕ! ಹೂವು ಕೊಯ್ಯುವದರಲ್ಲಿ ವೈಮರೆತಿದ್ದೆನು. ಬಹಳ ವಿನೋದಗಾರನಪ್ಪ ನೀನು. ರಾಜಕಾರಣದಲ್ಲಿ ಮಲೆತ ಮನಸ್ಸು ಉಲ್ಲಾಸಗೊಳ್ಳಲು ಹೆಚ್ಚಿನ ಸಂಭಾವನೆ ಕೊಟ್ಟು ಮಂತ್ರಿಗಳು ನಿನ್ನನ್ನು ಹತ್ತಿರ ಇರಿಸಿಕೊಂಡಿರುವರು. ನೀನೆಂದರೆ ಅವರಿಗೆ ತುಂಬ ಇಷ್ಟ!!

ವಿದೂಷಕ— ಅವರ ಇಷ್ಟ ನಿನ್ನ ಮೇಲೆ, ನಿನ್ನ ಇಷ್ಟ ಅವರ ಮೇಲೆ, ನಿಮ್ಮ ಇಬ್ಬರ ಅರಿಷ್ಟ ನನ್ನ ಮೇಲೆ!

!ನಾಗವೇಣಿ— ಸಾಕು ಬಿಡು! ನಿನ್ನ ಕೊಂಗ ಚೇಷ್ಟೆ! ವಿದೂಷಕ ಒಂದು ಮಾತು ಕೇಳುವೆನು. ಹೇಳಬೇಕು ನೋಡು.

ವಿದೂಷಕ— ಅಗತ್ಯ-ಅಗತ್ಯ ಕೇಳಬೇಕು.

ನಾಗವೇಣಿ— ಮಂತ್ರಿಗಳು ಎಲ್ಲಿರುವದು?

ವಿದೂಷಕ— (ಸ್ವಗತ) ಬೇಟೆ ಬಲೆಯಲ್ಲಿ ಇದ್ದ ಹಾಗಿದೆ (ಪ್ರಕಟ) ನಾನೂ ಒಂದು ಮಾತು ತಿಳಿಯಬೇಕಾಗಿದೆ. ಉತ್ತರಿಸುವೆಯಾ?

ನಾಗವೇಣಿ— ಆಗಲಿ!

ವಿದೂಷಕ— ಇಲ್ಲಿಗೆ ನೀನು ಏಕೆ ಬಂದೆ?

ನಾಗವೇಣಿ— ಹೂವುಗಳ ಸಲುವಾಗಿ.

ವಿದೂಷಕ— ಮಂತ್ರಿಪ್ಪನವರಿಗೂ ಅದೇ ಬೇಕಾಗಿರುವದು!

ನಾಗವೇಣಿ— (ನಕ್ಕು) ಅಪಕ್ಕೇನು ! ಕೊರತೆ ! ಬೇಕಾದ ಹಾಗೆ ಇ
ಕೋ ! (ಕೊಡ ಹೋಗುವಳು)

ವಿದೂಷಕ— ಊ-ಹೂಂ

ನಾಗವೇಣಿ— ಮತ್ತೇನು ?

ವಿದೂಷಕ— ಈ ಹೂವು ಅಲ್ಲ?

ನಾಗವೇಣಿ— ಯಾವವು

ವಿದೂಷಕ— ಮನೋರಂಜನ !

ನಾಗವೇಣಿ— ಮನೋರಂಜನವೇ ?

ವಿದೂಷಕ— ಹೌದಮ್ಮಾ ಹೌದು !!!

ನಾಗವೇಣಿ— ಇನ್ನೂ ಮೊಗ್ಗು ಹಣ್ಣಾಗಿಲ್ಲ !

ವಿದೂಷಕ— ಹಣ್ಣು ಆಗಿದೆ-ಬಣ್ಣ ಬಂದಿದೆ, ಸುತ್ತು ಮುತ್ತು ಸುವಾಸನೆ
ಹರಡಿದೆ. ಮರುಳಾಗಿ—

ನಾಗವೇಣಿ— ಏನು ?

ವಿದೂಷಕ— ಬಂದು-ಇದೆ ಬಂದಿದೆ.

ನಾಗವೇಣಿ— ಬಂದದ್ದು ಅದೇನು ?

ವಿದೂಷಕ— ಮುಂಗಸಿ

ನಾಗವೇಣಿ— ಅರ್ಥವೇ ಆಗದು !

ವಿದೂಷಕ— ಮನೋರಂಜನದ ಸುಗಂಧಕ್ಕೆ ಮರುಳಾಗಿ ಮುಂಗಲಿಯು
ಬಂದು—ಇರುವದು. ಈಗಾದರು ಹೊಳೆಯಿತೆ ?

ನಾಗವೇಣಿ— ಊಹೂಂ (ಇಲ್ಲವೆಂದು ತಲೆ ಅಲ್ಲಾಡಿಸುವಳು)

ವಿದೂಷಕ— ನಿನ್ನ ಮನಸ್ಸು ಎತ್ತೋ ಏನೋ ಗೊತ್ತಿಲ್ಲದೆ ಸತ್ತಿದೆ. ಬದುಕಿದ್ದರೆ ಹಸಿಯ ಗೋಡೆಯಲ್ಲಿ ಹರಳು ಒಗೆದ ಹಾಗೆ ಆಗುತ್ತಿತ್ತು. (ನಾಗವೇಣಿ ನಗೆ ತಡೆಯದೆ ಮತ್ತೆ ಮತ್ತೆ ನಗುವಳು) ನಾ ಹೇಳಿ ದುದು ತಮಾಷೆ ಎಂದಿರುವಿಯಾ? ತಮಾಷೆ!! ನಿಜ! ನಿಜ! ಸಿಂಕ್ಯಾ ನಿಜ!!!

ನಾಗವೇಣಿ— ಮಂಗಸಿಯನ್ನಾದರೂ ತೋರಿಸು ಇಲ್ಲವೆ ಮನೋರಂಜ ನವನ್ನಾದರೂ ತೋರಿಸು! ನಂಬಿಕೆ ಹುಡು!!

ವಿದೂಷಕ— (ಗಟ್ಟಿಯಾಗಿ) ಮಂಗಸಿ! ಮಂಗಸಿ!! ಮಂಗಸಿ!!! (ಮರೆಯಾಗಿದ್ದ ಮಂತ್ರಿ ಕೂಗು ಕೇಳಿ ಬರುವನು) ನಾಗವೇಣಿ— ಅಯ್ಯಾ ಅವರೇ ಬಂದರು (ಬೆಚ್ಚುವಳು).

ಶಿಲಾಸಿದ್ಧ ಮಂತ್ರಿ— ಹೆದರದಿರು! ವಿದೂಷಕ ಮಂಗಸಿ ಎಲ್ಲಿ?

ವಿದೂಷಕ— ಈ ಮನೋರಂಜನಕ್ಕಾಗಿ ಈ ಮಂಗಲಿ ಮರುಳಾಗಿ ಬಂದಿದೆ ಎಂದೆ! ಅಷ್ಟೆ!! (ಇಬ್ಬರ ಕಡೆಗೆ ಬೆರಳು ಮಾಡುತ್ತ)— (ನಾಗವೇಣಿ ನಾಚುವಳು)

ಮಂತ್ರಿ— ಹಾಗೋ! ನಾಗವೇಣಿ! ಸಖಿರೋಹಿಣಿ ಕಾಣುವದಿಲ್ಲವಲ್ಲಾ!!

ನಾಗವೇಣಿ— ಇಂದು ಅಕೆಗೆ ಬೇರೆ ಕೆಲಸವಿತ್ತು.

ಮಂತ್ರಿ— (ಸ್ವಗತ) ರೋಹಿಣಿ ಬರದ್ದೆ ಕ್ಷೇಮ!! (ಪ್ರಕಟ) ವಿದೂಷಕ! ರಥವನ್ನು ತೆಗೆದುಕೊಂಡು ನಿಧಾನವಾಗಿ ಬಾ! ತಿಳಿಯಿತೆ!

ವಿದೂಷಕ— (ಸ್ವಗತ) ಇನ್ಯಾಕ ಬೇಕಾದೇನ ನಾನು! (ಪ್ರಕಟ) ಆಗಲಿ!! (ಹೋಗುವನು).

ನಾಗವೇಣಿ— ಮಂತ್ರಿವರ್ಯರಿಗೆ ಅಭಿವಂದನ!!

ಮಂತ್ರಿ— "ಇಷ್ಟಸಿದ್ಧಿರಸ್ತು" ನಾನಂತೂ ನಿನ್ನನ್ನು ಹೃದಯೇಶ್ವರಿ ಯನ್ನಾಗಿ ಮಾಡಿಕೊಂಡಿರುವೆನು ನಾಗವೇಣಿ! ಹೇಳು. ನೀನು ನನ್ನನ್ನು ಮನಮುಟ್ಟಿ ಪ್ರೀತಿಸುವಿಯಾ?

ನಾಗವೇಣಿ— ಆದರೆ........

ಮಂತ್ರಿ— ಶಂಕೆ ಏಕೆ!

ನಾಗವೇಣಿ— ಪುರುಷರ ಬುದ್ಧಿ ಸ್ಥಿರವಾಗಿರುವದು ಬಹಳ ವಿರಳ!!

ಮಂತ್ರಿ— ಇದೇ ಏನು ಸಂಶಯದ ಭೂತ! ಹಾಗಿದ್ದರೆ ನಾಗವೇಣಿ ಪ್ರಜ್ಞಾಪೂರ್ಣವಾದ ನನ್ನ ಪ್ರತಿಜ್ಞೆಯನ್ನು ಆಲಿಸು— "ಸೂರ್ಯ ಚಂದ್ರಾಗ್ನಿ ತಾರೆಗಳ ಸಾಕ್ಷಿಯಾಗಿ, ಪುರಾಧೀಶ್ವರಿಯಾದ ಮಹಾ ಲಕ್ಷ್ಮಿಯು ಸಾಕ್ಷಿಯಾಗಿ, ಈ ದಿನ ಮೊದಲುಮಾಡಿ ಜನ್ಮಪರ್ಯಂತ ಶಿಲಾಸಿದ್ಧನು ಏಕಪತ್ನೀವ್ರತಸ್ಥನಾಗಿ ವಿವೇಕದಿಂದ ವರ್ತಿಸುವನು.

ನಾಗವೇಣಿ— ಹೀಗಿದ್ದರೆ ತಮ್ಮ ಚಿತ್ತ, ನನ್ನ ಭಾಗ್ಯ!!!

ಮಂತ್ರಿ ಶಿಲಾಸಿದ್ಧ— ಶೂನ್ಯವಾಗಿರುವ ಈ ಹೃದಯ ಪೀಠವನ್ನು ಅಲಂಕ ರಿಸು!!!

॥ ಪದ ॥

ಧನ್ಯ ಧನ್ಯನು ಸಮಾನುರಾಗಿಣಿಯು ನಿಂದು ಪಡೆದೆನು ಹಾ!!

ನಾಗವೇಣಿ— ॥ ಚಾಲ ॥

ನೆರೆ ಸಚಿವ। ಚರಣವನು। ಹರುಷದಿ-ನಾ ಭಜಿಸುವೆನು॥

ಶಿಲಾಸಿದ್ಧ— ॥ ಚಾಲ ॥

ಬಾರೇಬಾ!!॥ ಶರಣು ಬಂದೆ। ಮರುಳನಾಗಿ। ಸರಳೆ-ನಾನು। ಭರದಿ ರಮಣಿ॥
ಸರಸದಿ ಸುಮನೋಹರಿಯೇ। ಕರವ ಪಿಡಿದು ಕರುಣಿಸಲ್ಕೆ ॥೧॥

ನಾಗವೇಣಿ— ॥ ಚಾಲ ॥

ಹಾ! ಹಾ! ಹಾ!!। ನೀನೆ-ರಮಣ। ಕಾಣೆ ಸಮನ। ಪ್ರಾಣವೆಮ್ಮದಾದುದೊಂದೆ॥
ಕಂದರ್ಪನ ಶರ। ದಿಂಪನೊಂದೆನಾ-। ನಂದವನ್ನು ನೀಡುವದು ಪ್ರಿಯಾ!! ॥೧॥

(ಆಲಿಂಗಿಸುವರು)

(ತೆರೆ ಬೀಳುವದು)

——

೨ ನೇ ಪ್ರವೇಶ

ಸ್ಥಳ— ಕೊಲ್ಲಾಪುರ-ರಾಜಮಾರ್ಗ

(ಮರುಳಸಿದ್ಧರು ಮರುಳರ ಸೋಗಿನಿಂದ ಹುಚ್ಚಾಟಗಳನ್ನು ಆಡುತ್ತಲಿರುವರು. ಒಮ್ಮೆ ಕೂಸುಗಳಂತೆ, ಮತ್ತೊಮ್ಮೆ ಉನ್ಮತ್ತರಂತೆ, ಇನ್ನೊಮ್ಮೆ ಪಿಶಾಚಿಗಳಂತೆ, ನಟಿಸುತ್ತಲಿದ್ದಾರೆ ಪ್ರಶಾಂತ ಮುಖಮಂಡಲದಲ್ಲಿ ಚಿಜ್ಜ್ಯೋತಿಯು ಮಿನುಗುತ್ತಲಿದೆ ಜಗದ ಪಾಲಿಗೆ ಅವರು ಮರುಳು. ಅವರ ಪಾಲಿಗೆ ಜಗವು ಮರುಳು. ಅವಿರಳ ತಿಳಿದವರಿಗೆ ಈ ಮರುಳು ಶಿವತತ್ತ್ವದ ತಿರುಳು !!)

[ತಲೆಕೆದರಿ ಅರಿವೆ ಹರಿದು ಪರಪರನೆ ಕೆರಕೊಳ್ಳುತ್ತ]

ಹ–ಹ–ಹ–ಹ–ಹ ಓ ಸೂರ್ಯ ಚಂದ್ರಾಗ್ನಿಗಳೇ ! ಚಿಕ್ಕೆಗಳೆ ! ನೀವು-ಅಲ್ಲಿಬೆಳಗ-ಲಾ–ರಿ-ರಿ ಮಿ–ನು–ಗ–ಲಾ ರಿ ರಿ ಲ-ಕ-ಲ-ಕ-ನೆ; ಹ-ಹ–ಹ-ಹ-ಹ ಓ ಬಾನ್ ಗಾಳಿ ಕಡಲುಗಳೇ ಅಲ್ಲಿ-ಹೋದರೆ ನೀವು ಮರಳಿ-ಬರಲಾರಿರಿ. ಆಣೆಗಲ್ ಸಿರಿಸಲಿ ಕರಗಿ–ಹೇಳ ಹೆಸರಿಲ್ಲದಾಗುವ–ಹಾಗೆ--ಜೀರ್ಣವಾಗುವಿರಿ—ಜೀಣವಾಗುವಿರಿ–ಜೀರ್ಣವಾಗುವಿರಿ ! ಹ–ಹ–ಹ–ಹ–ಹ–ಹ–ಹ

(ಒಮ್ಮೊಂದೊಮ್ಮೆ ಓಡುವನು ಕೂಡ್ರುವನು ಪರಿಪರಿಯ ಚೇಷ್ಟೆಗಳನ್ನು ಮಾಡುವನು)
ಅದರಿಂದ–ಇದು-ಇದರಿಂದ-ಅದು ಅಲ್ಲ, ಅದರಲ್ಲಿ-ಇದು. ಹ-ಹ-ಹ-ಹ–ಅಲ್ಲಿಂದ-ಇಲ್ಲಿ–ಇಲ್ಲಿಂದ ಅಲ್ಲಿ (ನೆಲದ ಕಡೆಗೆ ಬೆರಳು ಮಾಡಿ) ಇದನ್ನು ಅದು ನುಂಗಿತು ಅದನ್ನು-ಅದು–ನುಂಗಿತು, ಅದನ್ನೊ-ಅದು ನುಂಗಿತು, ಅದನ್ನೊ–ಅದು ನುಂಗಿತು, ಅದನ್ನೊ-ಅದು ನುಂಗಿತು, ಅದನ್ನು-ನಾ ನುಂಗಿದೆ. ನನ್ನ ನಾ ನುಂಗಲಿಲ್ಲ. ನುಂಗವದೂ ಆಗದು, ಆಗದು, ಆಗದು. (ಕುಣಿಯುವನು)

(ಹುಚ್ಚಬಂದ ಹುಚ್ಚಬಂದ ಹುಚ್ಚನು ಬಂದನು ಎಂದು ಹುಡುಗರು ಗುಂಪಾಗಿ ಸುತ್ತುವರಿದು ಕಲ್ಲು ಕಲ್ಲುಗಳಿಂದ ಮರುಳಸಿದ್ಧರನ್ನು ಹೊಡೆಯುತ್ತಾರೆ, ಮಣ್ಣು ತೂರುತ್ತಾರೆ, ಒಂದೂ ತಾಗುವದಿಲ್ಲ.

ಜನಗಳಿಗೆ ಬಲು ಅಚ್ಚರಿ ಎನಿಸುವದು. ತಾವೂ ಕಲ್ಲು ಮಣ್ಣು ಚಲ್ಲುವರು. ಈಗಲೂ ಬಡಿಯುವದಿಲ್ಲ ಆಗಂತೂ ಜನರಿಗೆ ಬಹಳ ಸೋಜಿಗವಾಗುವದು)

ನಾ ಇಲ್ಲದಾಗ ಅಲ್ಲಿ–ಇಲ್ಲ ಇಲ್ಲಿ-ಇಲ್ಲ. ಹ-ಹ-ಹ ನಾನೇ ಎಲ್ಲೆಲ್ಲೂ–ಎಲ್ಲೆಲ್ಲೂ ಕೈ–ಕಾಲು–ಮೈ ಅಂಕಿ ಇಲ್ಲದಷ್ಟ ನ–ನ–ಗೆ ಹ–ಹ–ಹ–ಹ.

(ಇಬ್ಬರು ಮರುಳನನ್ನು ಕಂಡು ತಮ್ಮ ತಮ್ಮಲ್ಲಿ ಮಾತನಾಡಿ ಕೊಳ್ಳುತ್ತಿರುವರು)

ಬೀರ – ಎಲೆ ಭೀಮಾ ನಾನೂ ನೆಲದಾಗ ಬಲುಮಂದಿ ಹುಚ್ಚರನ್ನ ನೋಡೆನಿ, ಇವನ ಹುಚ್ಚ ಒಂದು ತರಾ ದರೀನ ಐತಿ.

ಭೀಮ — ಅದ್ಯಾಕಪಾ ಬೀರಾ! ತಿಳಿವಲ್ಲದ ಪೂರಾ ಹುಚ್ಚು ಮುಚ್ಚಿ ಬಿಟ್ಟೈತಿ ಪೂರ್ತಿ ಹುಚ್ಚ.

ಬೀರ— ಹುಚ್ಚ ಅನಲಿಕ್ಕೂ ಆಗವಲ್ಲದು. ಜಾಣ ಅನ್ನಾಕೂ ಬರವಲ್ದು, ನನಗ.

ಭೀಮ— ಇಚಿ ದಂಡೆಯ ಪ್ಯಾಗಿನ ಹುಚ್ಚೂ ಅಲ್ಲ ಅಚಿ ದಡದ ಹುಚ್ಚೂ ಅಲ್ಲ. ತ್ರಿಶಂಕು ಸ್ವರ್ಗದ ಹುಚ್ಚು ನೋಡು;

ಬೀರ— ಆಗಸರ ನಾಯಿ ಹಳ್ಳಾಸೂ ಕಾಣಲಿಲ್ಲ ಮನೀನೂ ಹೊಂದಲಿಲ್ಲ. ಅದರಾಂಗ ಅವನ್ನೂ ಇವನ್ನೂ ಕಾಣದಿದ್ದದ್ದಕ್ಕೆ ಈ ಹುಚ್ಚು ಮೆಚ್ಚಿತು.

ಭೀಮ— ಹೌದು, ಹೌದು. ಈಗ ಅಚ್ಚಿಗೆ ಬಿತ್ತ ನಿನ್ನ ಮಾತು. (ಹೋಗುವರು)

(ಆದೇ ದಾರಿಯಿಂದ ವಿವೇಕಿಯು ಬರುವನು)

ವಿವೇಕಿ— ಬೂದಿ ಮುಚ್ಚಿದ ಕೆಂಡದ ಹಾಗೆ ಈ ಹುಚ್ಚನಲ್ಲಿ ವಿಲಕ್ಷಣ ವಾದ ತೇಜಸ್ಸು ಪ್ರಸುಪ್ತವಾಗಿರುವದು. ಮುಖಮುದ್ರೆಯು ಶೈವೀ

ವರ್ಚಸ್ಸಿನಿಂದ ಆಚ್ಛಾದಿತವಾಗಿರುವದು. ಹುಡುಗರು ಕಲ್ಲು ತೂರಿದರೂ ತಾಗದೆ ಸುತ್ತ ಮುತ್ತಲು ಬೀಳುತ್ತಿವೆ. (ಚೆನ್ನಾಗಿ ದಿಟ್ಟಿಸುಸುವನು) ಎಲಾ ಎಲಾ, ಇದೇಸು ಸೋಜಿಗ!! ಈತನ ಮೈಯ ನೆರಳು ನೆಲದ ಮೇಲೆ ಬಿದ್ದಿರುವದಿಲ್ಲವಲ್ಲಾ!! ದಿಟ್ಟಿಸಿ ದಿಟ್ಟಿಸಿ ನೋಡಿದಾಗ್ಯೂ ಸುಳಿವೇ ಇಲ್ಲ. ಓಹೋ ಇವನೊಬ್ಬ ವೇಷಧಾರಿಯಾಗಿರುವ ಮಹಾತ್ಮನಿರುವನೆಂದು ನನ್ನ ಅಂತರ್ವಾಣಿಯು ಘೋಷಿಸುತ್ತಲಿರುವದು. ಇದೇ ಸತ್ಯಪೂರ್ಣವಾದ ನಿರ್ಣಯ!!! ಕುಟಿಲರ ಕೋಲಾಹಲದಿಂದ ಕಷ್ಟವು ಪರಾಕಾಷ್ಠದಶೆಯನ್ನು ಮುಟ್ಟಿರುವದು.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭೂತಲೇ ॥
ತದಾ ತದಾವ ತಾರೋsಯಂ ಗಣೇಶಾನಾಂ ನಗಾತ್ಮಜೆ ॥

ಧರ್ಮದ ಅವಹೇಳನವು ಬೆಳೆದ ವೇಳೆಯಲ್ಲಿ ಪ್ರಮಥರ ಅವತಾರವು ಆಗುವದಾಗಿ ಪರಶಿವನು ಆಣತಿಯನಿತ್ತಿರುವನು. ಈಗಿನ ಸಂದರ್ಭವನ್ನು ಸೂಕ್ಷ್ಮದೃಷ್ಟಿಯಿಂದ ಪರಾಮರ್ಶಿಸಿದರೆ ಈ ಮಹಾತ್ಮನು ನವನವೋನ್ಮೇಷಕಾರಿಯಾದ ನವಯುಗದ ಪ್ರವರ್ತಕನಾಗುವದರಲ್ಲಿ ಸಂದೇಹವಿಲ್ಲ. ಓ ಮಹಾತ್ಮನ್ ನಿನಗಿದೋ ಸಾಷ್ಟಾಂಗ ಪ್ರಣಿಪಾತ!!! (ಶಿರಸಾಷ್ಟಾಂಗವಾಗಿ ವಂದಿಸುವನು)

೩ನೇ ಪ್ರವೇಶ.

ಸ್ಥಳ—ಯುದ್ಧರಂಗ

ಚಂದ್ರವರ್ಮ ಮಹಾಪ್ರಭುಗಳವರಿಗೂ ವೀರವರ್ಮ ಮಹಾರಾಜರವರಿಗೂ ಬಹುದಿವಸಗಳಿಂದ ನಡೆದಿರುವ ಯುದ್ಧದಲ್ಲಿ ಉಭಯ ಬಲವು ಸಮಾನವಾಗಿರುವದರಿಂದಲೂ ನಿರಪರಾಧಿಗಳಾದ ನಾಗರಿಕರು ವ್ಯರ್ಥವಾಗಿ ಸತ್ತು ಹೋಗುತ್ತಿರುವದರಿಂದಲೂ ಸೈನ್ಯ ಸೈನ್ಯಗಳ ರಣಾಂಗಣವನ್ನು ಕೊನೆಗಾಣಿಸಲಾಗಿದೆ. ವೀರವರ್ಮ ಚಂದ್ರವರ್ಮರಲ್ಲಿ ದ್ವಂದ್ವ ಸಮರವು ಸಾಗಬೇಕಾಗಿದೆ. ಇವರಲ್ಲಿ ಯಾರು ಸೋಲುವರೊ ಅವರು ಪರಾಜಿತರಾಗುವರು. ಗೆದ್ದವರು ಜಯಶಾಲಿಗಳಾಗುವರು. ಎರಡೂ ಪಕ್ಷದ ಮಹಾರಾಜರವರು, ಮಂತ್ರಿ ಮುಖ್ಯರು ಸೇನಾಪತಿಗಳವರು ಈ ನಿಯಮಕ್ಕೆ ಆತ್ಮಸಮಾಧಾನಪೂರ್ವಕ ಒಪ್ಪಿರುವರು. ನಿಷ್ಪಕ್ಷಪಾತದಿಂದ ಸಮಸ್ತರು ದ್ವಂದ ಯುದ್ಧವನ್ನು ಪರಾಂಬರಿಸಬೇಕು.

(ಉಭಯ ರಾಜರು ಸಿದ್ಧರಾಗಿ ಎದುರಾಗುವರು)

॥ಚಾಲು॥

ಚಂದ್ರವರ್ಮ— ಪುಂಡನೆ ನಿನ್ನಯ ರುಂಡವನು। ಖಂಡಿಸಿ ನೆಲದೊಳು ಕೆಡಹುವೆನು ॥

ವೀರವರ್ಮ— ದಂಡಿಸಿ ಕಲಿಸುವೆ ಬುದ್ಧಿಯನು। ಬಂಡನೆ ಬಿಡು ನೀ ಬಿಂಕವನು ॥

ಚಂದ್ರವರ್ಮ— ಹಿಡಿ ಶರವ ! (ಬಾಣಬಿಡುವನು)

ವೀರವರ್ಮ— (ಕಡಿದು) ಕಡಿದೆನಿದೋ !

ಚಂದ್ರವರ್ಮ— ತೊಡು ಕಣೆಯ !

ವೀರವರ್ಮ— ಕೊಳ್ಳೆಲವೋ ! (ಹೊಡುವನು)
ಹಿಸುವದ್ಯೆ !!

ಚಂಪ್ರವರ್ಮ— ಹೊಡೆ ನೋಡ್ಯೆ !!

ಅದೃಶ್ಯವಾಣಿ (ಹಾಂ ತಡೆಯಿರಿ ನಿಲ್ಲಿಸಿರಿ ಕದನವನು)

ರಾಜರಿಬ್ಬರು— ಎಲಾ ಇದೇನು ? ನಮ್ಮ ಕೈಗಳು ಕಟ್ಟಿದಂತಾದವು !!

(ಮರುಳಸಿದ್ಧರು ವೈದೋರುವರು)

ಮರುಳಸಿದ್ಧ—

ಪದ. ಝಂಪಾ–ವಸಂತರಾಗ

ರಾಜ್ಯವಾಳದೆ ಸರಸದಿಂ ಚಂದ್ರವರ್ಮಾ ॥
ವ್ಯಾಜ್ಯವನು ಬೆಳೆಸಿದೇಕಿನೃಪತಿಯೊಳು ಬರಿದೆ ॥ಪ॥
ದೇಶಕ್ಕೆ ಮನಮುಟ್ಟಿ ದುಡಿಯದಲೆ ಮಲೆಯುತ್ತ ॥
ನಾಶವನಗುವ ನೀಚ ರಾಕ್ಷಸನು ನೀನೆಲೈ ॥೧॥

ಏನಿದನ್ಯಾಯ ! ಚಂದ್ರವರ್ಮಾ !! ರಾಜ್ಯಪಾಲಕರಾದ ನೀವು ರಾಜ್ಯ ನಾಶಕರಾಗುವಿರಾ ? ಭ್ರಷ್ಟರೇ, ಮದೋನ್ಮತ್ತರಾಗಿ, ಆತ್ಮಘಾತಕ ರೆನಿಸಿ, ಲಕ್ಷಾಂತರ ಜೀವಿಗಳನ್ನು ಕೊಂದು ಅವರ ರಕ್ತ ಶಿಲೆಯಲ್ಲಿ ನಿಮ್ಮ ಸೌಭಾಗ್ಯ ಲಕ್ಷ್ಮಿಯನ್ನು ಕೆತ್ತಹತ್ತಿರುವಿರಾ ? ಯುದ್ಧದಿಂದ ಮಾನವನ ಆದರ್ಶ ಸಂಸ್ಕೃತಿಯು ರಸಾತಳಕ್ಕಿಳಿದು ಮತ್ತೆ ಮೊದಲಿನ ವನ್ಯ ಜೀವನವು ತಲೆದೋರುವದು. ದಾರಿದ್ರ್ಯ-ರೋಗ-ಮಾತ್ಸರ್ಯ-ದುರ್ವರ್ತನ ದ್ವೇಷಗಳು ಪುಂಖಾನು ಪುಂಖವಾಗಿ ಬೆಳೆದು ನಿಮ್ಮ ಸಂತತಿಯನ್ನು ಧ್ವಂಸ ಮಾಡುವವು.

ಪ್ರಪಂಚವು ಪ್ರೀತಿಸುವಾತನನ್ನು ಪ್ರೀತಿಸುವದು. ಕೋಪಿಸುವ ವನನ್ನು ಶಪಿಸಿ ನುಚ್ಚುನೂರಾಗಿ ಕೊಚ್ಚಿ ಹಾಕುವದು. ಪ್ರೇಮ ದಿಂದ ಪ್ರೇಮವು ಆವಿರ್ಭವಿಸಿ ಸುಖ ಶಾಂತಿ ಸಂಪದಗಳನ್ನು ಅನುಗ್ರ ಹಿಸುವದು. ವಿಶ್ವಪ್ರೇಮವು ವಿಶ್ವಬಾಂಧವ್ಯದ ಅಸ್ತಿವಾರವಾಗಿರು ವದು. ವಿಶ್ವಬಾಂಧವ್ಯದ ಪ್ರಕಾಶನ ಪ್ರಸರಣಗಳು ನಿಮ್ಮ ಉದಾತ್ತ ಧ್ಯೇಯವಾಗಬೇಕು. ಪವಿತ್ರ ಕರ್ತವ್ಯದಲ್ಲಿ ಸೌಕರ್ಯಗಳನ್ನು ಸವೆಯಿಸುವ ಶೌರ್ಯ-ಧೈರ್ಯೌದಾರ್ಯಗಳನ್ನು ಸಂಪಾದಿಸ

ಬೇಕು. ಧರ್ಮರಾಜ್ಯವನ್ನು ಕರ್ಮಭೂಮಿಯಲ್ಲಿ ನಿರ್ಮಿಸಿ ಶಿವ ಸೇವೆಯಲ್ಲಿ ಸೌಖ್ಯವಾಗಿರುವ ವೀರವರ್ಮಾ! ನಿನ್ನ ಸದ್ವೃತ್ತಿಯನ್ನು ಅವಲೋಕಿಸಿ ಸಂತುಷ್ಟರಾಗಿರುವೆವು.

ಚಂದ್ರವರ್ಮಾ— ವೀರವರ್ಮನ ಹಾಗೆ ಪ್ರಜಾರಂಜಕನಾಗು! ಸನ್ಮಾರ್ಗಿಯಾಗು!! ಶಿವಭಕ್ತಿ ಸಂಪನ್ನನಾಗು!!! ವ್ಯತಿರಿಕ್ತವಾಗಿ ವರ್ತಿಸಿದಲ್ಲಿ ಮರುಳಸಿದ್ಧನ ಆಗ್ರಹಕ್ಕೆ ಪಾತ್ರರಾಗಬೇಕಾದೀತು!

(ರಾಜರಿಬ್ಬರು ವಂದಿಸುವರು, ಮಂತ್ರಿ ಸೇನಾಪತಿಗಳು ನಿಬ್ಬೆರಗಾಗಿರುವರು)

(ದೀನರಾಗಿ ಬೇಡಿಕೊಳ್ಳುವರು)

ಚಂದ್ರವರ್ಮ— ಶಿವಸಿದ್ಧಸಾರ್ವಭೌಮಾ! ಅರಿತರಿತು ನರರ ನೆತ್ತರವ ಹರಿಸಿದ ಸರಾಧವುನನ್ನು ಪೊರೆಯಲಾರೆಯಾ? ಕರುಣಾನಿಧೇ! ಮಾಡಿದ ಮಹಾಪರಾಧವನ್ನು ಮನ್ನಿಸು. ಪಾವನ ಪಥದಲ್ಲಿ ಸಾಗುವೆನು! ಮಹಾಗುರು ಮರುಳಸಿದ್ಧರ ಪಾದಪದ್ಮದಲ್ಲಿ ಭೃಂಗವಾಗಿ ಬಾಳುವೆನು. (ಶಿರಸಾಷ್ಟಾಂಗ ಪ್ರಣಾಮಪೂರ್ವಕ ವಂದಿಸುವನು)

ವೀರವರ್ಮ— ಗುರುಕುಲ ತಿಲಕಾ!! ಸನ್ನಿಧಿಯ ದರ್ಶನದಿಂದ ಪುನೀತನಾದೆನು. ಸರ್ವಾಂಗಲಿಂಗಭೋಗಿಯನ್ನಾಗಿ ಮಾಡಿ ಆಶೀರ್ವದಿಸು. ನಿನ್ನ ಶಿಷ್ಯನಾಗಿ ಕೃತಕೃತ್ಯನಾಗುವೆನು. (ದೀರ್ಘದಂಡ ವಂದಿಸುವನು)

ಮರುಳಸಿದ್ಧ— ತಥಾಸ್ತು (ಹರಸುವರು)

ಚಂದ್ರವರ್ಮ— ಅಣ್ಣಾ ವೀರವರ್ಮಾ! ಅಲ್ಪನ ತಪ್ಪನ್ನು ಅಪ್ಪಿ ಸಹೋದರನೆಂದು ಭಾವಿಸು.

ವೀರವರ್ಮ— ಸಹೋದರಾ! (ಅಪ್ಪಿಕೊಳ್ಳುವನು)

೪ನೇ ಪ್ರವೇಶ

ಸ್ಥಳ— ಕೊಲ್ಲಾಪುರ ರಾಜಮಾರ್ಗ

(ಮರುಳಸಿದ್ಧರು ಶಿವಸ್ತೋತ್ರ ಹೇಳುತ್ತ ಭಿಕ್ಷಾಟನ ಕೈಗೊಂಡಿರುವರು.)

ಮರುಳಸಿದ್ಧ—

ಭಾ॥ ಷ॥ ತೊರೆಗಳೆಲ್ಲವು ಸೇರುವವೊ ಸಾ- ॥
ಗರದಿ ಸಂಜೆಗೆ ಮುನ್ನ ಬರುವವೊ ॥
ತುರುಗಳೆಲ್ಲವು ಎಂತು ತುರುಮಂದೆಗೆ ಚರಾಚರ ವಾ ॥
ವುರುತಮದ ತತ್ತ್ವದಲಿ ಬೆರೆವುದೊ ॥
ಮರಳಿ ಹೊರಬೀಳುವದೊ ಆ ಸುಂ- ॥
ದರ ಮಹಾಘನಲಿಂಗ ನೀಯಲಿ ॥ ಜಗಕೆ ಸುಮತಿಯನು ॥ ೧ ॥

(ಮರುಳಸಿದ್ಧರನ್ನು ನಿರೀಕ್ಷಿಸಿ)

ಒಬ್ಬ— (ಸ್ವಗತ) ಅಹಾ !! ಈ ಭಿಕ್ಷುಕನ ಮುಖದರ್ಶನಮಾತ್ರದಿಂದ ಒಂದು ತರದ ಸಮಾಧಾನವಾಗುತ್ತಿರುವದು. ಹೊಸಬನಿದ್ದಾನೆ. ನಿಜವಾದ ಸಂಗತಿಯನ್ನು ತಿಳಿಸುವಾ; ಪರಿಸ್ಥಿತಿಯು ಗೊತ್ತಿದ್ದ ಹಾಗಿಲ್ಲ. ಕುಹಕಸಿದ್ಧರು ಕಂಡರೆ ಕೆಮ್ಮನೆ ಕೆಡುವನು. ಪಾಪ !! ಬಡಪ್ರಾಣಿ ಉಳಿಯಲಿ !! (ಪ್ರಕಟ) ಭಿಕ್ಷೂ— ನಿನ್ನದು ಯಾವ ದೇಶ !

ಮರುಳಸಿದ್ಧ— ಉತ್ತರ ದೇಶ.

ಒಬ್ಬ— ಬೇರೆ ಊರುಗಳಿರಲಿಲ್ಲವೇ ? ಓ ಅಯ್ಯಾ ? ನಿನಗೆ ಒಂದು ಒಳ್ಳೆ ಮಾತು ಹೇಳಬೇಕಾಗಿದೆ.

ಮರುಳಸಿದ್ಧ— ಹೇಳು; ಸಂತೋಷ !!

ಒಬ್ಬ— ಇನ್ನೂ ನಾಲ್ಕೊಪ್ಪತ್ತು ನೆಲದಮೇಲೆ ಇರಬೇಕು ಎನ್ನುವದಿದ್ದರೆ ಸಪ್ಪಳಿಲ್ಲದೆ ಜಾರು ! ಬೇರೆ ಊರಿಗೆ ಹೋಗಿ ಭಿಕ್ಷೆ ಬೇಡು. ಒಂದು ಕ್ಷಣ ಕೂಡ ನಿಲ್ಲಬೇಡ. ಚಲ್ಲು ಜೋಳಿಗೆ. ಹೂಂ ಓಡು !

ಮುರುಳಸಿದ್ಧ— ಅದೇನಪ್ಪ ಅಂಥಾದ್ದು.

ಒಬ್ಬ— ಒಡೆದು ಹೇಳುವ ಸ್ಥಳವಲ್ಲ, ಬೀದಿ. ಯಾಕೆ? ಏನು ! ಎಂದು ನಿಂತರೆ ನಾನು ನೀನೂ ಕೂಡಿಯೇ ತೇಲಬೇಕಾದೀತು ! ಹೂಂ ಪಂಢರಪುರದ ಕುದುರೆ ಓಡಿದಂಗ ಓಡು ಹೂಂ.

ಮುರುಳಸಿದ್ಧ— ಹುಟ್ಟಿದವನೊಮ್ಮೆ ಸಾಯಲೇಬೇಕು. ತುತ್ತು ಅನ್ನಕ್ಕಾಗಿ ತಳ-ಮಳ ಆಸ್ವವದಕ್ಕಿಂತ ಸತ್ತುಹೋದರೆ ಉತ್ತಮುವಾಗುವದು ನನಗಂತೂ ತುಂಬ ಬೇಸರಾಗಿದೆ. ದಾರಿ ನಡೆದೂ ನಡೆದೂ ಕಾಲು ಬಾತಿರುವವು.

ಒಬ್ಬ— ಎಲಾ, ದುರ್ದೈವಿ ನೆತ್ತಿಯಲ್ಲಿ ನೃತ್ಯ ಕೂತ್ತಿದ್ದಾಳೆ. ಮತಿ ಮಂಕಾಗಿದೆ. ಹೇಳಿದ್ದು ಕಿವಿಯಲ್ಲೇ ಬೀಳವಲ್ಲದು. (ಸಿದ್ಧನೊಬ್ಬನು ಕಾಣುವನು) ಅಯ್ಯೋ ಬಂದ. ಮರೆಯಾಗಬೇಕು

(ಮರೆಯಾಗುವನು)

ಸಿದ್ಧ— ಓ ತಿರುಕ ನಿಲ್ಲು (ಕೂಗುವನು)

ಮುರುಳಸಿದ್ಧ— ತಿರುಪೆಗಾರರ ಹತ್ತರ ನಿನ್ನದೇನಯ್ಯ, ಕೆಲಸ.

ಸಿದ್ಧ— ಯಾವನೋ ನಿನ್ನ ಒಳಗೆ ಬಿಟ್ಟವನು.

ಮುರುಳಸಿದ್ಧ— ಹೇಳಿ ಕೇಳಿ ಊರೊಳಗೆ ಬರಬೇಕೆ? ಇದು ಯಾವ ದೇಶದ ಪದ್ಧತಿ !

ಸಿದ್ಧ—ಏ, ಉದ್ದುದ್ದ ಮಾತಾಡುವೆಯಾ ? ಏನೆಂದು ತಿಳಿದಿರುವಿ. ಸಿದ್ಧರ ಸಾಮ್ರಾಜ್ಯದಲ್ಲಿ ಭಿಕ್ಷುಕರು ಬಂದರೆ ಶಿಕ್ಷಿಸಲ್ಪಡುವರು. ನಾಲಿಗೆ ಬಿಗಿಹಿಡಿದು ಮಾತಾಡು. ಹೋಳು ಆದೀತು.

ಮುರುಳಸಿದ್ಧ— ಅಬ್ಬಾ, ನಿಮ್ಮ ರೀತಿ ನೀತಿಗಳೇ ವಿಚಿತ್ರವಾಗಿವೆ. ಸಜ್ಜನಿಕೆಯ ಎಳೆಗಾಳಿಸಹ ಇಲ್ಲಿ ಬೀಸಿಲ್ಲ.

ಸಿದ್ಧ— ನೀ. ಚಿತ್ರವಾದಾಗ ವಿಚಿತ್ರವು ವಿದಿತವಾಗುವದು.

ಮುರುಳಸಿದ್ಧ— ಚಿತ್ರವನ್ನು ಚಿತ್ರಿಸುವದಾದರೂ ಗೊತ್ತಿರುವದೇ ?

ಸಿದ್ಧ—(ಸಿಟ್ಟಾಗಿ) ಈ ಬೂದಿಯನ್ನು ಎರಚಿದರೆ ಚಿತ್ರವೇ ಆಗುವಿ! ನೋಡು! (ಬೂದಿ ಎರಚುವನು) ಎಲಾ: ಮಂತ್ರಸಿದ್ಧಿಯು ಅದೃಶವಾಯಿತೇ—ಮಾಟವು ಕೆಟ್ಟಿತೆ? ಏನು ಮಾಡಿದರೂ ನಾಟಲೊಲ್ಲದು. (ಮತ್ತೊಮ್ಮೆ ಮಂತ್ರಿಸುವಃ [ಮಂತ್ರಿಸುವನು]. ಊದಹೋಗಲು ಹಾಗೇ ಚಿತ್ರದಂತೆ ನಿಂತುಬಿಡುವನು).

(ಮರುಳಸಿದ್ಧರು ಮುಂದಕ್ಕೆ ಹೋಗಲು ಮತ್ತೊಬ್ಬ ಸಿದ್ಧನು ಎದುರಾಗುವನು).

ಸಿದ್ಧ— ಎಲ್ಲಿಗೆ ಹೋಗುವಿ? ಕಳ್ಳತನಕ್ಕೆ ನಿಲ್ಲು.

ಮರುಳಸಿದ್ಧ— ಕಳ್ಳನಂತೆ ಸುಸುಳಲು ಕಳ್ಳತನಕ್ಕೆ ಬಂದಿಲ್ಲ.

ಸಿದ್ಧ— ಹಾಂ; ತಡೆ, ಮುಂದಕ್ಕೆ ಹೋಗದಂತೆ ಮಾಡುವೆ. (ಮಂತ್ರಿಸುವನು). ನನ್ನ ಕಾಲುಗಳೇ ಏಳದಂತಾದವು ಅಯ್ಯೋ. (ಕಾಲು ಎತ್ತಲು ಯತ್ನಿಸುವನು. ಏನು ಮಾಡಿದರೂ ಆಗಲೊಲ್ಲದು) ಕೆಟ್ಟೆ ಕೆಟ್ಟೆ ತಿರುಕಪ್ಪ ಕಾಲಿಗೆ ಬೀಳುವೆ ಎಲ್ಲಿಗಾದರೂ ಹೋಗು. ಮಹಾತ್ಮಾ!! ಪುಣ್ಯಾತ್ಮಾ!!! ತಪ್ಪಾಯ್ತು ತಪ್ಪಾಯ್ತು !! (ಕೈ ಮುಗಿಯುವನು ಮರುಳಸಿದ್ಧರು ನಗುತ್ತ ಮುಂದೆ ಸಾಗುವರು)

(ಮತ್ತೊಬ್ಬ ಸಿದ್ಧನು ಇವರನ್ನು ಕಂಡು)—

ಶಾಕ್ತಸಿದ್ಧ— ಏ ಮೋಸಗಾರಾ, ಎಲ್ಲರನ್ನು ಠಕ್ಕಿಸಿ ಇಲ್ಲಿಗೆ ಬಂದೆಯಾ? ಸುಟ್ಟುಬಿಡುವೆನು ನೋಡು ಹ್ರಾಂ-ಹ್ರಿಂ-ಹ್ರೂಂ-ಹ್ರೈಂ-ಭಂಕಾಳಿ ಭಸ್ಮ ಕುರುಭಸ್ಮ ಕುರು (ಮಂತ್ರಿಸುವನು ಬೂದಿ ಚಲ್ಲುವನು ದೊಪ್ಪನೆ ಬಿದ್ದು) ಅಯ್ಯೋ ಹೊಟ್ಟೆಯಲ್ಲಿ ಬೆಂಕಿ ಬಿತ್ತು ಬೆಂಕಿ ಬಿತ್ತು. ಸುಡುವದು ಸುಡುವದು. ಅಯ್ಯೋ ಸಂಕಟ-ಸಂಕಟ, ಏ ತಿರಕಾ. ಪಾರೋಮಾಡೋ! ಕ್ಷಮಾ ಮಾಡೋ (ಉರುಳಾಡುವನು). (ಮರುಳಸಿದ್ಧರು ನಗುತ್ತಿರುವರು)

(ತೆರೆ ಬೀಳುವದು).

ಚತುರ್ಥಾಂಕ ಸಮಾಪ್ತಂ

ಪಂಚಮಾಂಕ

೧ನೆಯ ಪ್ರವೇಶ

[ಭಿಕ್ಷುಕ ವೇಷದ ಮರುಳಸಿದ್ಧ; ಶಿಲಾಸಿದ್ಧರು ಎದುರುಬದುರು ನಿಂತಿರುವರು]

ಶಿಲಾಸಿದ್ಧ— (ಗರ್ಜಿಸುತ್ತ) ಭಿಕ್ಷುಕಾ! ಶಾಕ್ತಭೈರವ ಕಾಪಾಲಿ ಸಿದ್ಧರನ್ನು ಭಂಜಿಸಿ ಬಂದಿರುವೆನೆಂದು ಬರಿದೆ ಭ್ರಮಿಸಬೇಡ. ಅಜಿಂಕ್ಯನಾಗಿ ರುವ ಶಿಲಾಶಿದ್ಧ ಸಮರ್ಥನನ್ನು ಸೋಲಿಸಿದ ಹೊರತು ಸಿದ್ಧ ಕೋಟಿಯು ಪರಾಜಿತವಾಗಿ ಪಲಾಯನಸೂಕ್ತವನ್ನು ಪಠಿಸಲಾರದು. ಕಾಲಹರಣ ಬೇಡ ಜಯಾಪಜಯಗಳು ಪಂಥ ಮೂಲಕ ನಿರ್ಧರಿಸಲ್ಪಡಲಿ !!

ಭಿಕ್ಷುಕ— ನಿನ್ನ ಇಷ್ಟವಿದ್ದಂತಾಗಲಿ !!

ಶಿಲಾಸಿದ್ಧ— ಯಾರ ದೇಹವು ಖಡ್ಗದ ಪ್ರಹಾರಗಳಿಂಧ ಛಿನ್ನವಿಛ್ಛಿನ್ನವಾಗ ದಿರುವದೋ ಅವರೇ ಶಪಥವನ್ನು ಗೆದ್ದಂತೆ! ಸೋತವರು ಸಾಯುವ ತನಕ ಗೆದ್ದವರ ದಾಸಾನುದಾಸರಾಗಿ ಕೊಳೆಯಬೇಕು. ಇದು ನಿನಗೆ ಒಪ್ಪಿಗೆಯೇ ?

ಭಿಕ್ಷುಕ— (ಗಾಂಭೀರ್ಯದಿಂದ) ಸಮ್ಮತಿ.

ಶಿಲಾಸಿದ್ಧ— ತೆಗೆದುಕೋ ಖಡ್ಗವನ್ನು (ಕೊಡುವನು ಭಿಕ್ಷುಕ ತೆಗೆದು ಕೊಳ್ಳುವನು) ಪ್ರಥಮ ನೀನೇ ಪ್ರಯೋಗಿಸು !!!

ಭಿಕ್ಷುಕ— ಆಗಬಹುದು. (ಹೊಡೆಯಲು ಕಲ್ಲಿಗೆ ಹೊಡೆದಂತಾಗಿ ಖಡ್ ಎಂದು ಕತ್ತಿ ತುಂಡಾಗುವದು) (ಶಿಲಾಶಿದ್ಧನು ಕೀಚುಸಗೆ ನಗುವನು) ನೀನು ಇನ್ನು ಪ್ರಹರಿಸು !!

ಶಿಲಾಶಿದ್ಧ— (ಕತ್ತಿ ಝಳಪಿಸುತ್ತಾ ಬಡಭಿಕ್ಷುವೇ! ಹುಟ್ಟಿಬರಲಿಕ್ಕೆ ಹುಲ್ಲುಬೀಜವಲ್ಲ. ಇನ್ನೂ ಕೈ ಮಿಂಚಿ ಹೋಗಿಲ್ಲ. ಕಡ್ಡಿಯನ್ನು

ಕಚ್ಚು! ಸೆರಗೊಡ್ಡಿ ಬೇಡು. ಪ್ರಾಣಭಿಕ್ಷೆಯನ್ನು ನೀಡುವೆನು. ಪ್ರಾಣಭಿಕ್ಷೆ!!!

ಭಿಕ್ಷುಕ— ಹಾಗಲ್ಲ, ಶಿಲಾಶಿದ್ಧಾ! ಕರ್ತವ್ಯವನ್ನು ನೆರವೇರಿಸು! ಅದೇ ನನಗೆ ಬೇಕಾದ ಭಿಕ್ಷೆ!!!

ಶಿಲಾಸಿದ್ಧ— (ಸ್ವಗತ) ತಿರುಕನಿದ್ದರೂ ಚಿಂತೆಯಿಲ್ಲ. ಗಟ್ಟಿಗನೇ ಇದ್ದಾನೆ. (ಪ್ರಕಟ) ಅಯ್ಯಾ ಭಿಕ್ಷೂ ಕ್ಷಣ ಕಾಲ ಕಣ್ಣು ಮುಚ್ಚಿ ದೇವರನ್ನಾದರೂ ಧ್ಯಾನಿಸು!!!

ಭಿಕ್ಷುಕ— ಅದೂ ಮುಗಿದಿದೆ. ಆಲಸ್ಯ ಮಾಡದಿರು! ಶಿಲಾಸಿದ್ಧಾ!! (ಶಿಲಾಸಿದ್ಧನು ಹೂಂ ಎಂದು ಬಲವಾಗಿ ಬೀಸುವನು. ಬಯಲಲ್ಲಿ ಬೀಸಿದಂತಾಗುವದು) ಅಚ್ಚರಿಯಾಗುವನು.

ಶಿಲಾಸಿದ್ಧ— ಎಲಾ! ಇದೇನು ಅಚ್ಚರಿ! ಸಪ್ಪಳವೇ ಆಗಲಿಲ್ಲ. ಬಯಲಲ್ಲಿ ಬೀಸಿದಂತಾಯಿತು. ಇನ್ನೊಮ್ಮೆ ಹೊಡೆದು ಪರೀಕ್ಷಿಸುವಾ!! (ಬೀಸುವನು. ಆಗಲೂ ಸದ್ದಿಲ್ಲದೆ ಗಾಳಿಯಿರಿದಂತಾಗುವದು. ಪರಮಾಶ್ಚರ್ಯವೂ ಭೀತಿಯೂ ಏಕಕಾಲಕ್ಕೆ ಹುಟ್ಟಿ ಕೈ ಕತ್ತಿಯು ತಾನಾಗಿ ಕಳಚುವದು. ಗದ್ಗದ ಕಂಠದಿಂದ ದಂಡ್ವತ್ ನಮಸ್ಕರಿಸಿ ತನ್ನನ್ನು ತಾನೇ ನಿಂದಿಸುವನು).

ಪದ॥ ರಾಗ—ಭಾಗೇಶ್ರೀ

ಧಿಕ್ಕಾರ ಮತಿಯಿಲ್ಲದ ದುರುಳ ಧಿಕ್ಕಾರ ಧಿಕ್ಕಾರ ಧುಷ್ಕರ್ಮ ಜಾಲ ॥ ಪ ॥
ಕಲ್ಲು ಮ್ಮೆಯನೆ ನಂಬಿ। ಕಲ್ಲಾದೆ ಸೊಕ್ಕಿನಲಿ। ಬಲ್ಲ ಗುರುವರನಿರವ
ನಾ ತಿಳಿಯಲಿಲ್ಲಾ ॥ ೧ ॥

ಕಂಗಳ ಕರುಳನು ಹರಿದು ಮನದ ತಿರುಳನು ಹುರಿದು ಮಾತಿನ ಮೊದಲನರಿದು ಬಯಲಲ್ಲಿ ಬಯಲಾದ ಪರಾತ್ಪರ ಪರಂಜ್ಯೋತಿಯೊಂದಿಗೆ ಶಿಲಾಸಿದ್ಧಾ! ನೀನು ಹೆಣಗಬಹುದೇ? ತುಚ್ಛವಾದ ವಿಷಯಸುಖವನ್ನು ನಚ್ಚಿ ಪಾಪಿಯಾದ ಆತ್ಮವಂಚಕ ಶಿಲಾಸಿದ್ಧನೆತ್ತ! ಪಾವನಕ್ಕೆ ಪದವಾದ ಪರಮಾತ್ಮನೆತ್ತ!!

ನರಿ ಎಲ್ಲಿ ! ಗಿರಿ ಎಲ್ಲಿ !! ಎತ್ತಣಿಂದೆತ್ತ ಸಂಬಂಧ !! ಜಗದ್ಗುರುವೆ ! ಶಿವಸಿದ್ಧಪ್ರಭುವೇ !! ಮಗುವಿನ ಮಹಾಪರಾಧವನ್ನು ಮನ್ನಿಸು !! ಬಟ್ಟಬಯಲಾಗುವ ಗುಟ್ಟನ್ನು ಸ್ಪಷ್ಟಪಡಿಸು ! ರಕ್ಷಿಸು !! (ಪಾದವನ್ನು ಹಿಡಿದು ತಬ್ಬಿಕೊಳ್ಳುವನು).

ಭಿಕ್ಷುಕ— ಪಶ್ಚಾತ್ತಾಪದಿಂದ ಪರಿಶುದ್ಧನಾದ ಶಿಲಾಸಿದ್ಧಾ! ನೀನಿನ್ನು ಮರುಳಸಿದ್ಧನ ಶಿಷ್ಯಶ್ರೇಣಿಯಲ್ಲಿ ಸೇರಿಕೊಂಡಿರುವಿ !! ಬಾ, ಸ್ವಾನು ಭವದ ಸಕೀಲವನ್ನು ಉಸುರುವೆನು. ಪಶುಪತಿಯೆ ನೀನಾಗಿ ಎಸೆಯುವಿ !!

ಶಿಲಾಸಿದ್ಧ—

॥ ಕಂದ ॥ ಜಯ ಜಯ ಜಯಶಂಕರ ಜಯ ಚಿ- ||
ನ್ಮಯ ಜಯ ಶಿವಧರ್ಮ ಗುರು ಶಿರೋಮಣಿ ವಿಳಸ- ||
ನ್ಮಯ ನೀತಿದಾತೃದೇವನೆ ||
ಜಯ ಜಯ ಜಯ ಮರುಳಸಿದ್ಧ ದೀನ ದಯಾಳೋ ||೧||

(ವಂದಿಸುವನು).

---

೨ ನೆಯ ಪ್ರವೇಶ

ಸ್ಥಳ—ಮೋಹನಾಲಯ.

(ಮಣಿ ಮಂಚದಲ್ಲಿ ಮಾಯಾರಾಣಿ ಪವಡಿಸಿರುವಳು. ರೋಹಿಣಿ ನಾಗವೇಣಿಯರು ಲಗುಬಗೆಯಿಂದ ಬರುವರು)

ನಾಗವೇಣಿ } ರೋಹಿಣಿ } — ದೇವಿ! ದೇವಿ!! (ಮಾಯೆ ಎದ್ದು ಕೂರುವಳು)

ಮಾಯಾ— ಇನಿತು ಕಾತರದ ಅಂಥ ಸಮಾಚಾರ!!!

ರೋಹಿಣಿ— ಭಿಕ್ಷುಕ ವೇಷವನ್ನು ತಳೆದ ಮಹಾನುಭಾವನೋರ್ವನು ಇಂದು ನಗರದ ಸಿದ್ಧರನ್ನು ಕಂಗೆಡಿಸಿ ಪ್ರಧಾನಾಮಾತ್ಯ ಶಿಲಾಸಿದ್ಧ ರನ್ನೂ ಭಂಗಿಸಿದನು.

ಮಾಯಾ—(ಅಚ್ಚರಿಗೊಂಡು) ಆಹಾ! ಪ್ರಕೃತಿ ಪಲ್ಲಟಿಸಿತು.

ನಾಗವೇಣಿ— ತೇಜಃಪುಂಜವಾದ ಕಾಯಕಾಂತಿ ಚಂದ್ರಮನನ್ನು ಹಾಸ ಗಯ್ಯುವ ಮುಖಚಂದ್ರ ಅರಳಿದ ಇಂದೀವರಗಳಂತಿರುವ ನಯನ್ನ ಯುಗ್ಮ ದಾಳಿಂಬ ಬೀಜವನ್ನು ಹೋಲುವ ದಂತ ಪಂಕ್ತಿ ಚಂಪಕ ಕುಟ್ಮಲವನ್ನು ಸರಿಗಟ್ಟುವ ನೇರವಾದ ನಾಶಿಕ ಇವುಗಳಿಂದ ಆ ಪುರುಷ ಸಿಂಹನು ರಂಜಿಸುತ್ತಿದ್ದನು.

ರೋಹಿಣಿ— ಇಂತಹ ಲಾವಣ್ಯವು ಅಪ್ಸರೆಯರ ಕಣ್ಣಿಗೆ ಬೀಳುವ ಮುನ್ನ ಈ ಮಣಿಮಯೀ ಮಂದಿರದಲ್ಲಿ ತಂದಿರಿಸಿಕೊಂಬುವದು ಪ್ರಶಸ್ತ. ದೇವಿ! ಮಿಂಚಿ ಹೋದ ಮೇಲೆ ಚಿಂತಿಸಿ ಫಲವಿಲ್ಲ.

ನಾಗವೇಣಿ— ನಿನ್ನ ಭಾಗ್ಯಕ್ಕೆ ಜೋಡಿಯಾಗಿ ಕಾಲಿರಿಸಿರುವನು. ಈ ಸಮಯ ಸಾಧಿಸಬೇಕು.

ಮಾಯಾ— (ಪರಮಾನಂದದಿಂದ) ಹಾಂ, ಅವನೆಲ್ಲಿ?

ರೋಹಿಣಿ— ವಸಂತವನದ ಮಲ್ಲಿಕಾಮಂಟಪದ ಮಧ್ಯದಲ್ಲಿ ಧ್ಯಾನಾಸಕ್ತನಾಗಿರುವನು.

ಮಾಯಾ— ನಾನೀಗ ಭಾಗ್ಯವತಿ, ಆ ಸುಂದರನನ್ನು ಕಾಣದೆ ಸಮಾಧಾನವಾಗದು.

ರಾಗ—ಪೀಲು. ತಾಳ-ಬಿಲಂದೀ

ಚೆಲುವನಾ । ಶಿದ್ಧನಾ । ವಿರಹವನಾ । ಸಖಿಯೆ ।
ಈಕ್ಷಣ । ಕಾಣದೆ । ತಾಳೆನಾ ।ಪ॥
ಅಲಸದೆ ಬರಿಸುತೆ । ಸಲೆ ಮಂಚದೊಳು ।
ಮುಳುಗುತೆ ರತಿಸುಖ । ದಲಿ ನಲಿಯುವೆ ನಾ ।ಅ।

೩ನೇ ಪ್ರವೇಶ

ಸ್ಥಳ—ವಸಂತವನ.

(ಮರುಳಸಿದ್ಧರು ಮಾಮರದ ಅಡಿಯಲ್ಲಿ ಮುಹೂರ್ತ ಮಾಡಿದ್ದಾರೆ. ಶಿವಯೋಗ ಸಮಾಧಿಯಿಂದ ಮೆಲ್ಲ ಮೆಲ್ಲಗೆ ಎಚ್ಚರವಾಗುತ್ತಲಿದ್ದಾರೆ. ಮಾಯಾರಾಣಿ ಸಖಿಯರೊಡನೆ ಬರುವಳು)

ರೋಹಿಣಿ— (ಸನಿಹಬಂದು) ಭಗವಾನ್ ! ತಮ್ಮ ಸಂದರ್ಶನಕ್ಕೋಸುಗ ಮಾಯಾರಾಣಿಯವರು ಆಗಮಿಸುತ್ತಿದ್ದಾರೆ.

ಮರುಳಸಿದ್ಧ— ಬರಬೇಕು !

ರೋಹಿಣಿ— (ಹತ್ತರ ಹೋಗಿ) ಇತ್ತ ಇತ್ತ ದೇವಿಯವರು ಚಿತ್ತಯಿಸಬೇಕು.

(ಮಾಯಾ ಬರುವಳು. ವಿಷದ ಕೊಡವನ್ನು ಸೇವಕಿಯು ಮರುಳಸಿದ್ಧರ ಮುಂದಿರಿಸುವಳು)

ಮರುಳಸಿದ್ಧ— (ಏನೂ ತಿಳಿಯದವರಂತೆ ನಟಿಸುತ್ತ) ಇದರೊಳಗೆ ಏನಿರುವದು ?

ರೋಹಿಣಿ— ವಿಷವಿರುವದು. ಅರಗಿಸಿ ಕೊಂಡವರು ದೇವಿಯವರ ಮನೋವಲ್ಲಭರಾಗುವರು.

ಮರುಳಸಿದ್ಧ— (ಸ್ವಗತ) ಇವಳ ಗರ್ವಭಂಗಕ್ಕೆ ಸುಮುಹೂರ್ತವಿದು !

(ಜಯಶಿವ ಶಂಕರ ಎಂದು ಕುಡಿದು ಬಿಡುವರು)

(ಮೊದಲೆ ಮನ ಸೋತಿರುವ ಮಾಯೆಯು ಉದಗ್ರ ವಿಷಪಾನ ಮಾಡಿ ವಿಕಾರವಿಲ್ಲದ, ಶಾಂತಿ ಕಳಾವಿಳಾಸದಿಂದ ವಿಜೃಂಭಿಸುವ ಮರುಳಸಿದ್ಧರ ಮುಖಮುತ್ರೈಯನ್ನು ಕಂಡು ಮತ್ತಿಷ್ಟು ಮೋಹ ಪರವಶಳಾಗುವಳು)

ಮಾಯಾ— (ಸ್ವಗತ) ಈ ಪುರುಷೋತ್ತಮನು ಅಘಟಿತ ಘಟನಾ ಸಾಮರ್ಥ್ಯಶೀಲನಾಗಿರುವನು. ಇವನನ್ನು ವರಿಸದ ನನ್ನ ರೂಪ ರಾಶಿಯು ಕಾನನದ ಬೆಳದಿಂಗಳಿನ ಹಾಗೆ ನಿಷ್ಫಲವಾಗುವದು. ಏನು ಮಾಡುವದು? (ಯೋಚಿಸಿ ನಮಸ್ಕಾರದ ನೆವಮಾಡಿ ಶೀರ ಸನಿಹ ಬರುವಳು. ದೂರ ಕುಳಿತುಕೊಳ್ಳಲು ಮರುಳಸಿದ್ಧರು ಸೂಚಿಸುವರು)

ಮಾಯಾ— ಭಕ್ತರು ಭಗವಂತನನ್ನು ಮುಟ್ಟಿ ಮುಟ್ಟಿ ನಮಸ್ಕರಿಸುವದಿಲ್ಲವೇ? ನಾನು ತಮ್ಮ ಪಾದ ಕಮಲವನ್ನು ಮುಟ್ಟಿ ವಂದಿಸಲು ಆತಂಕವೇಕೆ?

ಮರುಳಸಿದ್ಧ— ನಮಸ್ಕಾರದ ಹಿನ್ನೆಲೆಯಲ್ಲಿ ಹೃದಯವು ಶುದ್ಧವಾಗಿರಬೇಕು. ಭಕ್ತಿಯು ಬೆಳೆದು ಬಂದಿರಬೇಕು. ಭಾವವು ಬಲಿದು ಹಣ್ಣಾಗಿರಬೇಕು.

ಯಾ— ಮಹೋದಯಾ! ಈ ತಾರುಣ್ಯ ಲಾವಣ್ಯಗಳ ಸದುಪಯೋಗವಾಗಬೇಕು.

ಳಸಿದ್ಧ— ಇದು ತರವಲ್ಲ!! ಮಾಯಾ!

(ಮಾಯೆಯು ಏನೋನೋ ಭಾವಭಂಗಿ ತೋರುವಳು. ಮರು ಳಸಿದ್ಧರು ಕಣ್ಣೆತ್ತಿ ಸಹ ನೋಡದಾಗಲು ಹಾಡಲು ಮೊದಲು ಮಾಡುವಳು)

ಾ—

ಪದ. ಏಕ ಪ್ರೇಮಕಿ ಪ್ಯಾಸಿ ಎಂಬಂತೆ.

ಲೋಕದಲ್ಲಿ। ಮಾನವನೈದೆ ಸುಖಭೋಗಿಯಾಗಬೇಕೈ ॥
ಪ್ರೇಮದಿಂದಲಿ ಪ್ರೇಮವನ್ನು। ಪ್ರೇಮಿಸಿ ಸುಖಿಸುವನೈ। ಆ.ಆ.ಆ.ಆ.ಆ.ಆ.—।
ನಾ ರೂಪವತಿ ನೀ ರೂಪಮಯಾ ॥
ನಾನು ರಾಣಿ ನೀ ಸನ್ಯಾಸೀ ॥
ಪ್ರೇಮಕೆ ಭೇದವು ತರವೇನೈ ॥
ಈ ಮರ್ಮವ ತಿಳಿದೇವಾ ॥ ಆ—ಆ—ಆ—ಆ—ಆ—ಆ ॥೧॥

ಚರಣದಾಸಿಯ ಬಯಕೆಯನ್ನು ಸಲಿಸಬೇಕು. ಕರುಣೆಯಿಂದ ಕೈ ಹಿಡಿಯಬೇಕು.

(ವಂದಿಸಿ ಬಗೆ ಬಗೆಯಿಂದ ಅಂಗಲಾಚುವಳು)

ಮರುಳಸಿದ್ಧ— ವೃತ್ತ

ಹರಿದು ಹೋಗುವ ಬಾಳಿನ ಸಂತೆಯಂ ||
ಬರಿದೆ ನೆಚ್ಚದೆ ಮೈಸಿರಿಯೆಂದಿಗುಂ ||
ಹರನ ಪ್ರೇಮಿಸು ಪ್ರೇಮದಿ ಮಾಯೆಯೇ ? ||
ಹರುಷದಿಂದಲಿ ಕೈವಿಡಿದೆತ್ತುವಂ ||೧||

ಪ್ರೀತಿಯಿಂದ ಪ್ರೇಮಸಾಗರನಾದ ಪರಮೇಶ್ವರನನ್ನು ಪ್ರೀತಿಸು! ಸಾರವಿಲ್ಲದ ಸಂಸಾರವನ್ನು ಮನವಾರೆ ನಂಬಿ ಕೆಡಬೇಡ. ಕ್ಷಣಿಕಗಳಾದ ವಯೋ ರೂಪಗಳಿಗೆ ಭ್ರಾಂತಿಗೊಳ್ಳದಿರು ಮಾಯಾ!! ಶರಣ ಸತಿ ಲಿಂಗ ಪತಿ ನ್ಯಾಯದಂತೆ ನಡೆದುಕೋ ಅಂದರೆ ಜನ್ಮವು ಸಾಫಲ್ಯವಾಗುವದು.

ಮಾಯಾ— ಈ ಹಾಳು ರಗಳೆಯನ್ನು ಗಂಟು ಕಟ್ಟಿ ಮುಚ್ಚಿಬಿಡು. ನನ್ನ ಇಷ್ಟಕ್ಕೆ ವಿರೋಧವಾಗಿ ವರ್ತಿಸುವ ಬಿಂಕಿನ ಬ್ರಹ್ಮಚಾರಿಯು ನೂಕು ನುಗ್ಗಾಗುವನು. ವ್ಯರ್ಥವಾಗಿ ಮೃತ್ಯುವನ್ನು ಆಮಂತ್ರಿಸಬೇಡ ಕಂಡಿಯಾ ?

ಮರುಳಸಿದ್ಧ— ಮಾರನಿಗೆ ಮಣ್ಣು ಮುಕ್ಕಿಸಿದ ಮಾರಾರಿಯ ಮೂರ್ತಿಗಳು, ಕಾಮಿನಿಯರ ಕುಟಿಲತರ ಕಟಾಕ್ಷಕ್ಕೆ ಕೈಗಡವಾಗುವದೆ ? (ತಟ್ಟನೆ ಎದ್ದು ಮುಂದಕ್ಕೆ ಹೊರಡುವರು. ಮಾಯೆಯು ಬೆಂಬತ್ತುವಳು ಕಾಡು ಕಾಡುಗಳು ಹಿಂಮಳಿಯುವವು ದಿನಗಳು ಉರುಳುವವು)

೪ ನೇ ಪ್ರವೇಶ

ಸ್ಥಳ—ಅರಣ್ಯ

(ಒಂದು ದಿವಸ ಲಿಂಗಾನುಷ್ಠಾನವನ್ನು ಪೂರೈಸಿ ಮರುಳಸಿದ್ಧನು ಶಾಂತವಾಗಿ ಮರ ದಡಿಗೆ ಕುಳಿತಿರುವಲ್ಲಿಗೆ ಮಾಯೆ ಬರುವಳು)

ಮಾಯಾ— (ಶಿರಬಾಗಿ) ಓ ಮಹಾತ್ಮನ್. ಶರಣು ಬಂದಿರುವ ಸೇವಕಿ ಯನ್ನು ಸ್ವೀಕರಿಸಿರಿ ಕರವೀರಪುರದ ಮಹಾರಾಜರೆನಿಸಿ ಅಟ್ಟಹಾಸ ದಿಂದ ಮೆರೆಯಿರಿ. ಮಹೈಶ್ವರ್ಯಶಾಲಿಗಳಾದ ನಿಮ್ಮ ಊಳಿಗದಲ್ಲಿ. ಸಾವಿರಾರು ಜನಗಳು ಹಗಲಿರುಳು ಕುತೂಹಲದೀದಿರುವರು ಕೃಪಾಳುಗಳಾದ ತಾವು ಉದಾಶೀನ ಮಾಡಿದರೆ ನನ್ನಗತಿ ಏನು?

ಮರುಳಸಿದ್ಧರು— (ಸಂತಪ್ತರಾಗಿ)

ಪದ. ರಾಗ—ಖಮಾಜ—ಏಕತಾಳ.

ಥೂ ನೀನು ದುಷ್ಟಭ್ರಷ್ಟಳೆ। ಛೀ ನೀಚ ದುಷ್ಟಭ್ರಷ್ಟಳೇ ॥
ಛೀ ಥೂ ದುಷ್ಟಭ್ರಷ್ಟಳೇ ।ಪ॥
ಕುಟಿಲತನದಿ ನೀನು ಬಂದೆ । ನಟಿಸಿ ಮರುಳನಾಗಿಸಲ್ ॥
ಕಟುಕಳಾದ ನಿನ್ನ ತಲೆಯ । ಕಟವೆ ನಾನು ತಿಳಿಯೆ ಪಾಪಿಷ್ಠ ಮಾಯೆಯೇ ॥೧॥

ಮೂರ್ಖಳೆ? ಸಾಮಾನ್ಯ ಕುಹಕಸಿದ್ಧನೆಂದು ಭಾವಿಸಿರುವೆಯಾ? ನಾನು ಚಲುವಿಗೊಲಿದು ಮರುಳಾಗಿ ಮೋಹಿಸುವವನಲ್ಲ!! ಸಡಿಲು ಬಿಟ್ಟರೆ ದೊಡ್ಡ ಕಂಟಕವನ್ನು ಜಗಕ್ಕೆ ತಂದೊಡ್ಡುವಿ ಎಂದು ನಿನ್ನ ಗರ್ವ ಭಂಗಿಸ ಬಂದಿದ್ದೇನೆ.

ಮಾಯಾ— (ಕ್ರೋಧದಿಂದ) ಏ ಏ ಬಡಭೈರಾಗಿ! ನಿನ್ನಂಥವರು ಲೆಕ್ಕ ವಿಲ್ಲದಷ್ಟು ನನ್ನಬಲೆಗೆ ಸಿಕ್ಕಿ ಸಿಕ್ಕಿ ಕಕ್ಕಿಕೊಂಡು ಹುಡಿಯನ್ನು ಹೊಕ್ಕಿದ್ದಾರೆ! ಮನೋಹರ ರೂಪಕ್ಕೆ ಮಸಕರಗಿ ಅನ್ನನೀರಿಲ್ಲದೆ ಬೆಂಬತ್ತಿಬಂದರೆ ಜಗ್ಗಡ ಹೆಣ್ಣನಂತೆ ನನ್ನನ್ನು ಲೆಕ್ಕಿಸದೆ ಕಾಪದಾರ್ಥ

ಣವೆಂದು ಲೆಕ್ಕ ಹಾಕಿರುವೆಯಾ? ಇಗೋ ಬೀಸುವೆ ನೋಡು! ಮಾಯಾಜಾಲವನ್ನು.

(ಅನೇಕ ಯೋಜನೆ ಯೋಜಿಸುವಳು. ಏನೂ ನಡೆಯದೆ ತೆಪ್ಪಗಾಗುವಳು)

ಮರುಳಸಿದ್ಧ— ಆತ್ಮನನ್ನರಿಯದೆ ಕಾಮನ ಕೈಗೊಂಬೆಯಾಗದಿರು ಮಾಯಾ! ಭೌತಿಕ ಸುಖಕ್ಕೆ ಆಶಿಸಿ ಆಯುಷ್ಯವನ್ನು ಅಪವ್ಯಯ ಮಾಡದಿರು!! ಮನುಷ್ಯರು ನಡೆಯಿಸುವ ರತಿಕ್ರೀಡೆ ಪಶುಪಕ್ಷಿಗಳಿಗೂ ಸ್ವಾಭಾವಿಕವಾಗಿಲ್ಲವೇ?

ಮಾಯಾ— ನಾನಿಲ್ಲಿ ನಿನ್ನಿಂದ ನೀತಿಶಾಸ್ತ್ರವನ್ನು ಕಲಿಯಲು ಬಂದಿಲ್ಲ! ಒಣ ಪೀಕಲಾಟ ಗೋಳಾಟಗಳು ಬೇಕಿಲ್ಲ. "ಕುಡಿದಿರುವ ವಿಷವನ್ನು ಮರಳಿ ಕೊಡು"

ಮರುಳಸಿದ್ಧ— ಇಕ್ಕೋತಾನೆ! ಕೊಳ್ಳು!! (ವಿಷವ ಕಾರುವರು. ಬಹಳ ಸೋಜಿಗವೆನಿಸಿವೆ ಮಾಯೆಗೆ)

ಮಾಯಾ— (ಸ್ವಗತ ಇವನು, ಮಹಾ ಶಿವಯೋಗಿ ಕುಲದ, ಪಾಲಕನು. ಸುಮ್ಮನೆ ತೆರಳಿದರೆ ಕಾಣುವದೇ ಕಡುಕಷ್ಟ!! ಎಂತಾದರೂ ಈತನನ್ನೇ ಲಗ್ನವಾಗಬೇಕು.

(ಹಾವಭಾವ ತೋರಿಸಲು ಆರಂಭಿಸುವಳು)

ಮರುಳಸಿದ್ಧ— ಛೀ ಮುಷ್ಟಳೇ ನಿನಗೆ ಎಷ್ಟು ಹೇಳಿದರು ಬುದ್ಧಿ ಬರದು. ಪಕ್ಕಾಗು ಶಿಕ್ಷೆಗೆ (ಮೂಗು ಕೊಯ್ಯುವರು ಇಲ್ಲಿಂದ ಹೊರಟು ಮುಂದಿನ ಬೆಟ್ಟವನ್ನು ಹೋಗುವರು. ನಿರೂಪಳಾಗಿ ಮಾಯೆ ಅನುಸರಿಸುವಳು. ಈಗ ಅವಳ ಗರ್ವಭಂಗವಾಗಿದೆ. ಪ್ರಾಯಶ್ಚಿತ್ತದಿಂದ ಪವಿತ್ರಳಾಗಿರುವಳು).

ಮಾಯಾ— (ದೀನಳಾಗಿ ನಮಿಸುವಳು. ನಿನ್ನ ಘನ ಮಹಿಮೆಯನ್ನು ಅರಿಯದೆ ಮಾಡಿದ ಮಹಾಪರಾಧಗಳನ್ನು ಮಹಾಗುರುವೇ ಮನ್ನಿಸು.

ಪೂರ್ವದ ಹಾಗೆ ರೂಪವತಿಯನ್ನಾಗಿ ಮಾಡು. ಕಾಪಾಡು !! ಗರ್ವ ದಿಂದ ದೂರವಾಗಿರುವೆನು.

ಪದ ॥ ರಾಗ— ತೋಡಿ ರೂಪ ತಾಳ

ಕರುಣಿಪುದೈ । ಗುರುವರನೇ । ಶರಣು ಬಂದೆನೈ ನಾನು ।। ಪ ।।
ತಿಳಿಯದೆ ನಾ । ನೆಸಗಿದಕೆ । ಬಳಲಿದೆ ಜೆಲುವಿೀಯುತಲಿ ।।
ಮುಳಿಯುವೀಗ । ತಿಳಿದು ನಲವ । ಸಲಹು । ಮಹಿಮನೈ ನೀನು ।। ೧ ।।

(ಹಾಡುತ್ತ ಪೈಮರೆಮ ಅಡ್ಡ ಬೀಳುವಳು)

ಮುರುಳಸಿದ್ಧ— ದೇವಿ ಈ ಮದ್ದು ಹಚ್ಚು. ಕೋ. ಮೊದಲಿನಂತೆ ರೂಪ ವತಿಯಾಗುವೆ. (ಹಚ್ಚಿಕೊಳ್ಳುವಳು ಮೂಗು ಸರಿಯಾಗುವದು)

ಮಾಯಾ— (ಅತ್ಯಂತ ಹರ್ಷನಿರ್ಭರಳಾಗಿ) ಓ ಶ್ರೀ ಜಗದ್ಗುರುವೇ. ಶಿವೋಪದೇಶವನ್ನು ಕರುಣಿಸು !! ಶಿವಪಥವ ತೋರು !! ಶರಣಸತಿ ಲಿಂಗಪತಿ ಭಾವವು ಪೈಮನಗಳ ತುಂಬಿ ತುಳುಕುವ ಕಲೆಯನ್ನು ಕಲಿಸು !! ನಿನ್ನ ಶಿಷ್ಯಳಾಗಿ ಬದುಕುವೆನು.

(ಸಾಷ್ಟಾಂಗ ಪ್ರಣಾಮ ಮಾಡುವಳು)

॥ ಸಾಕಿ ॥

ಮುರುಳಸಿದ್ಧ—

ಇಂದಿನ ದಿವಸದಿ ಸನ್ಮತಿ ನಿನಗೆ । ಬಂದುದು ಆನಂದಕರ ।।
ಸುಂದರಿ ಸಾಂಬನ ತತ್ತ್ವವನೊರೆವೆನು । ಚಂದದಿ ಲಾಲಿಸುತ ।।
ಪೊಂದುತ ಶಿವಸುಖವನು ರಮಿಸು ।। ೧ ।

ನಿನಗೆ ಸುಬುದ್ಧಿಯು ಜನ್ಮಿಸಿರುವದು ಆನಂದದಾಯಕವಾಗಿದೆ. ಲಾಲಿಸು ಮಾಯಾದೇವಿ! ಪರಶಿವ ಪರಮಾತ್ಮನಂತೆ ಆತ್ಮನು ಸಚ್ಚಿದಾನಂದಸ್ವರೂಪನಾಗಿರುವನು. ಅಜ್ಞಾನದ ಆವರಣದಿಂದ ತಾನು ಪರಶಿವನೆಂಬುದನ್ನು ಮರೆತಿರುವನು ದೇಹ, ಇಂದ್ರಿಯ, ಅಂತಃಕರಣಗಳೆ ತಾನೆಂದು ಅರಿತಿರುವನು. ಇವು ಮಾಡತಕ್ಕ ಶುಭಾಶುಭ ಕರ್ಮಫಲಗಳಾದ ಸುಖ ದುಃಖಗಳನ್ನು ಅನುಭವಿಸಲು ಮೇಲಿಂದ

ಮೇಲೆ ಹುಟ್ಟುತ್ತಲಿರುವನು, ಸಾಯುತ್ತಲಿರುವನು. ವಸ್ತ್ರವು ತನ್ನ ಹಬ್ಬುವಿಕೆಯಿಂದ ವಸ್ತ್ರಮಂದಿರವಾಗುವ ಹಾಗೆ ಸಚ್ಚಿದಾನಂದಸ್ವರೂಪನಾದ ಪರಶಿವನು ತನ್ನೊಳಗೆ ನಿತ್ಯಸಂಬಂಧವಾಗಿರುವ ವಿಮರ್ಶ ಶಕ್ತಿಯಿಂದ ಪ್ರಪಂಚವಾಗಿ ಪರಿಣಮಿಸಿರುವನು. ದೇಹೇಂದ್ರಿಯ, ಅಂತಃಕರಣ ಮತ್ತು ಹೆಂಡಿರು ಮಕ್ಕಳು ಮುಂತಾಗಿ ಸರ್ವವು ಶಿವನವಾಗಿವೆ ಎಂಬುದಾಗಿ ಶಿವನಿಗೆ ಸಮರ್ಪಿಸಿ ಅನನ್ಯಭಾವದಿಂದ ಶರಣು ಹೊಂದಬೇಕು. ಆರಂಭದಲ್ಲಿ ಆಭರಣವು ಚಿನ್ನದ್ದು ಎಂಬ ಭಾವ ಬಂದು ಅನಂತರ ಚಿನ್ನವೆ ಎನ್ನುವ ಭಾವವು ಬರುವಂತೆ ಸರ್ವವು ಶಿವನದೇ ಆಗಿದೆ ಎನ್ನುವ ಭಾವವು ಮೊದಲು ಮೂಡಿ ಅಂತ್ಯದಲ್ಲಿ ಸಕಲವೂ ಶಿವನೇ ಎಂಬ ಭಾವವು ಬರುವದು.

ತಾನು ಮೊದಲಾಗಿ ಸಮಸ್ತವು ಶಿವರೂಪವಾದಮೇಲೆ ತಾನು ಮಾಡುವ ಕರ್ಮಗಳಿಗೆ ಪರಶಿವನೇ ಬಾಧ್ಯನಾಗುವನು. ಆದ್ದರಿಂದ ಶಾಸ್ತ್ರಸಮ್ಮತ ಸತ್ಕರ್ಮಗಳನ್ನು ಶಿವಸೇವೆ ಎಂದರಿದು ಶ್ರದ್ಧಾ ಪೂರ್ವಕ ಎಡೆಬಿಡದೆ ಮಾಡುತ್ತಲಿರಬೇಕು. ಶ್ರೀಗುರುವಿನ ಕೃಪೆ ಪಡೆದು ಪಾವನವೂ ಪ್ರಧಾನವೂ ಆದ ಶಿವದೀಕ್ಷೆಯನ್ನು ಹೊಂದಿ ಶಿವಪೂಜಾ, ಶಿವಧ್ಯಾನ, ಶಿವಭಕ್ತಿ, ಶಿವಜ್ಞಾನರೂಪವಾಗಿರುವ ಶಿವ ಯೋಗವನ್ನು ಅನುಸಂಧಾನ ಮಾಡಿ ಮಾಡಿ ತನ್ಮಯವಾಗಬೇಕು. ಇಂತು ತ್ರಿಕರಣಪೂರ್ವಕ ಆಚರಿಸಿದರೆ ತಾನು ಪರಮೇಶ್ವರನ ಕೈಯೊಳಗಿನ ಸಾಧನದಂತೆ ಆಗಿ, ಮಾಡುವ ಕರ್ಮದ ಹಿತಾಹಿತಗಳು ತನಗೆ ಸುಖ ಶೋಕಗಳನ್ನು ಉಂಟುಮಾಡುವದಿಲ್ಲ. ಜಗನ್ನಾಟಕ ಶಾಲೆಯಲ್ಲಿ ಶಿವನು ಸೂತ್ರಧಾರನೆಂತಲೂ ಶಿವಾಜ್ಞೆಯಂತೆ ೮೪ ಲಕ್ಷ ವಿವಿಧ ಪಾತ್ರಗಳನ್ನು ವಹಿಸಿ ಆಯಾ ಪಾತ್ರಗಳಿಗೆ ತಕ್ಕಹಾಗೆ ಸರ್ವ ಜೀವಿಗಳು ಅಭಿನಯಿಸುತ್ತಿವೆ ಎಂತಲೂ ತಿಳಿದು ಶಿವಯೋಗಿಯಾದ ವನು ಎಲ್ಲವನ್ನು ವಿನೋದವಾಗಿ ಕಾಣುವನು. ಲೋಕದಲ್ಲಿ ಅವನಿಗೆ ದುಃಖವು ಕಂಡರೂ ಅದು ಶಿವಲೀಲೆಯೆಂದು ತಿಳಿದು ಆನಂದಮಯ ನಾಗಿರುವನು. ತಾನು ಮೊದಲಾಗಿ ಸಕಲವು ಶಿವಸ್ವರೂಪ ಎಂಬ ಭಾವವು ಬೇರುಬಿಟ್ಟು ಬಲಿತನಂತರ ಅವನು ಪರಶಿವನನ್ನು ಕ್ಷಣ

ಕಾಲ ಸಹ ಅಗಲುವದಿಲ್ಲ. ಅಂಥವನನ್ನು ಪರಶಿವನಾದರೂ ತ್ಯಜಿಸುವದಿಲ್ಲ. ತಾನೇ ಶಿವನಾಗಿ ಶಿವನೇ ತಾನಾಗಿ ಇರುವ ಶಿವಯೋಗಿಯ ಪಾಲಿಗೆ ಪೃಥ್ವಿಯು ಕೈಲಾಸವಾಗುವದು. ಎಲ್ಲೆಲ್ಲಿಯೂ ಎಲ್ಲವರಲ್ಲಿಯೂ ಶಿವಸಂದರ್ಶನವನ್ನು ಹೊಂದುವ ಮಹಾನುಭಾವನು ಜೀವನ್ಮುಕ್ತನಾಗುವನು. ವೀರ ಶಿವಸಿದ್ಧಾಂತ ಸ್ಥಾಪನಾಚಾರ್ಯರಾದ ಶ್ರೀ ಮಜ್ಜಗದ್ಗುರು ರೇಣುಕಾದಿ ಪಂಚಾಚಾರ್ಯ ಭಗವತ್ಪಾದರವರ ಶಿವತತ್ತ್ವ ಸಾರವನ್ನು ಸಂಕ್ಷಿಪ್ತವಾಗಿ ಉಪದೇಶಿಸಿದ್ದಾಗಿದೆ. ದೇವಿ! ನೀನು ಈಗ ಶಿವದೀಕ್ಷಾಸಂಪನ್ನಳಾಗು. ತನ್ಮೂಲಕ ಸರ್ವಾಂಗಲಿಂಗಿಯಾಗಿ ಶರಣಸತಿ ಲಿಂಗಪತಿ ಭಾವವನ್ನು ಸಿದ್ಧಿಸಿಕೊಂಡು ಕೇವಲ ಲಿಂಗಾಂಗ ಸಮರಸವನ್ನು ಸಂಪಾದಿಸು.

ನಿಶ್ಚಯವಾಗಿ ಅಮರಳಾಗಿ ಬಾಳುವಿ !!

ಮಾಯಾ— ಅಹ! ಹ! ಕೃತಾರ್ಥಳಾದೆನು !!

(ಇಷ್ಟರಲ್ಲಿ ಶಿಲಾಸಿದ್ಧ ನಾಗವೇಣಿ ರೋಹಿಣಿ ಮೊದಲಾದವರು ಮಾಯೆಯನ್ನು ಅರಸುತ್ತ ಬರುವರು)

ಎಲ್ಲರು— (ಕಂಡು) ಅದೋ ದೇವಿಯವರು!! ದೇವಿಯುವರು !!!

ಮಾಯಾ— ಇಂದು ಭವಿ ಎಂಬುದನ್ನು ಬಿಟ್ಟು ಭಕ್ತಳಾಗುವೆನು. ಭವಬಂಧನವು ಕಳಚಿ ಶಿವಸುಖಿಯಾಗಿರುವೆನು. ನರಜನ್ಮವು ಹರಿದು ಹೋಗಿ ಹರಜನ್ಮವು ದೊರಕಿರುವದು. ಈ ಸುಸಂದರ್ಭವನ್ನು ಒದಗಿಸಿದ ಮತ್ತು ಶ್ರೀಪರಶಿವನನ್ನು ನನ್ನ ಕರಕಮಲಕ್ಕೆ ಕರೆತಂದು ಕರುಣಿಸಿದ ಕರುಣಾನಿಧಿ ಮಹಾಮಹಿಮ ಮರುಳಸಿದ್ಧ ಮಹಾಪ್ರಭುಗಳವರ ಚರಣಾರವಿಂದಗಳಲ್ಲಿ ನಾವೆಲ್ಲರು ಮಂಗಲ ಮಾಡುವಾ!

(ಸಕಲರು ಸಂತೋಷ ಸಮುದ್ರದಲ್ಲಿ ಮುಳುಗುವರು)

ಸಮಸ್ತರು— ಹಾಗೇ ಆಗಲಿ! (ಕೈಜೋಡಿಸಿ ನಿಂತು ಮಂಗಲಪಾಡುವರು)

ನೀನೇ ಜೀವನದ ಜ್ಯೋತಿ   ಎಂಬಂತೆ.

ನೀನೆ ಮಂಗಲದ ಮೂರ್ತಿ | ಅಂಗಾಕೃತಿ...ಪಿಂಗಿಸುತೆ...ಲಿಂಗವೆನಿಸುವ ವಿಭೋ
॥ ಪ ॥

ಪ್ರವರ ಮುರುಳ ಗುರುದೇವ | ಭಾವ ಸುರಾರ್ಚಿತ ಸೇವಾ |
ಸೇವಾಭಿಮತ ವಾಂಛಿತವ | ಭಾವಿಸಿ ಕರುಣದಿ ನೀಡಿರುವ ಮಹಿತನೆ ॥೧॥
ಉಜ್ಜನಿಯೊಳು ಪೀಠವನಿಲಿಸಿ | ಮೂಜಗವ ಗುರುವೆನ್ನಿಸಿ ॥
ಪೂಜ್ಯನಾದದಾರುಕಪರಾ ॥೨॥

ಶಾಂತಿ ಶ್ಶಾಂತಿ ಶ್ಶಾಂತಿಃ

ದ್ಯೌಶ್ಶಾಂತಿರ್ಭುವನ ಶಾಂತಿ | ರಗ್ನಿಶಾಂತಿ ರಾಪಶಾಂತಿ | ರೋಷಧಯ ಶ್ಶಾಂತಿ
ಪೃಥಿವೀಶಾಂತಿಃ ॥ಪ॥

ಪಂಚಾಚಾರ್ಯವರ ಶಾಂತಿಃ ॥
ಪಂಚವಕ್ತ್ರಸಾಂಬ ಶಾಂತಿ |
ಪಂಚವದನ ಧರ್ಮಶಾಂತಿಃ ॥೧॥

ಶಾಂತಿ ಶ್ಶಾಂತಿ ಶ್ಶಾಂತಿಃ

ಜಯ ಜಗದ್ಗುರು ಮರುಳಸಿದ್ಧೇಶ್ವರ !!!

(ಸಾಷ್ಟಾಂಗ ಪ್ರಣಾಮಪೂರ್ವಕ ವಂದಿಸುವರು)

(ತೆರೆ ಬೀಳುವದು)

ಪಂಚಮಾಂಕಂ ಸಮಾಪ್ತಂ

JAGADGURU VIS...
...NA SIMHASAN JNANA...
LIBRARY
...ngamawadi Math, Varanasi
...No. 1047

॥ಕಂದ॥

ಮೊರಬದ ಜಡೆಯ ಮಠಾಧೀ ॥
ಶ್ವರ ಗಂಗಾಧರ ಸುಧೀಶಶಿವ ಗುರುರಚಿತಂ ।
ನಿರುಪಮ ಮರುಳಾಚಾರ್ಯನ ॥
ಸುರುಚಿರರಸಭರಿತ ನಾಟಕಂ ಸಂಪೂರ್ಣಂ ॥೧॥

ಸ ಮಾ ಪ್ತಂ

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. ....

ಪೂಜ್ಯ ಶ್ರೀಗಳವರ ಗ್ರಂಥಗಳು

ಶ್ರೀ ಜ. ಸಿದ್ಧಲಿಂಗೇಶ್ವರ ಪುರಾಣ (ಭಾಮಿನೀ ಷಟ್ಪದಿ)	೧- ೮-೦
ಪುಷ್ಪಾಂಜಲಿ ಪ್ರಬಂಧ (ಪದ್ಯ)	೦- ೮-೦
ರೇಣುಕದೇವನ ವಚನ (ಗದ್ಯ)	೦- ೮-೦
ಭಗವತ್ಪ್ರೇಮ ,,	೦-೧೨-೦
ಶ್ರೀ ಜ. ಶಿವಾನಂದ ವಿಜಯ	೧- ೪-೦
ಬಾವುಟದ ಬೆಳಕು ,,	೧- ೦-೦
ಸಂಗಮೇಶ್ವರ ಚರಿತ್ರೆ ,,	೪- ೮-೦
ಮಾಯಾ ಗರ್ವಭಂಗ ,,	೧- ೬-೦

ದೊರೆಯುವ ಸ್ಥಳ:

ಶ್ರೀ ಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮ,
ಬೈಲದ್ಗಿರಿ.
ಪೋಸ್ಟ: ಪಾಪಿನಾಯಕನಹಳ್ಳಿ.
ತಾಲೂಕು: ಹೊಸಪೇಟೆ.
ಜಿಲ್ಲಾ: ಬಳ್ಳಾರಿ.

ಮುದ್ರಕರು:
ಎಸ್. ಜಿ. ಹೆಗಡಾಳ ಇವರಿಂದಾ ಆನಂದ ಪ್ರಿಂಟಿಂಗ ಪ್ರೆಸ್,
ದುರ್ಗದಬೈಲ, ಹುಬ್ಬಳ್ಳಿಯಲ್ಲಿ ಮುದ್ರಿತವಾದುದು.